ಶ್ರಿಯ್ಯೈನಮಃ

ಶ್ರೀ ಹಯಗ್ರೀವಾಯನಮಃ

ಶ್ರೀ ಯಾಮುನಮುನಯೇನಮಃ

ಶ್ರೀಮತೆ ರಾಮಾನುಜಾಯನಮಃ

ಶ್ರೀಮತೆ ನಿಗಮಾಂತ ಮಹಾದೇಶಿಕಾಯನಮಃ

ಶ್ರೀಮತೆ ಶ್ರೀನಿವಾಸ ಮಹಾದೇಶಿಕಾಯನಮಃ

ಶ್ರೀ ಯಾಮುನ ಮುನಿ ವಿರಚಿತ

ಚತುಶ್ಲೋಕೀ

ನಮೋ ನಮೋ ಯಾಮುನಾಯ ಯಾಮುನಾಯ ನಮೋನಮಃ

ಶ್ರೀ ನಾರಾಯಣ ಯೋಗೀನ್ದ್ರ ವರದಾರ್ಯ ಕೃಪಾಶ್ರಯಂ ।
ರಙ್ಗೀಶ ಪಾದ ವಿನತಂ ಶ್ರೀನಿವಾಸ ಮುನಿಂ ಭಜೇ ॥

ಈ ಚತುಶ್ಲೋಕೀ ಎಂಬ ಗ್ರಂಥವು ಆಚಾರ್ಯರುಗಳಲ್ಲಿ ಪ್ರಥಮರಾಗಿಯೂ ದ್ರಾವಿಡ ಪ್ರಬಂಧಗಳ ಪ್ರಾಚುರ್ಯಕ್ಕೆ ಮೂಲಪುರುಷರಾಗಿಯೂ, ಯೋಗಾಭ್ಯಾಸ ನಿರತರಾಗಿಯೂ ಇದ್ದ ನಾಥ ಮುನಿಗಳ ಪೌತ್ರರಾದ ಶ್ರೀ ಆಳವಂದಾರವರಿಂದ ರಚಿಸಲ್ಪಟ್ಟಿತು. ಇವರಿಗೆ **"ಯಮುನೈತ್ತುರುವರೈ"** "ಯಾಮುನೇಯರು" "ಯಾಮುನಾಚಾರ್ಯರು" ಎಂಬ ಹೆಸರುಗಳೂ ಉಂಟು. ಇವರು ಕಲಿಯುಗ ೪೦೧೮ನೇ ವರ್ಷ ಆಡಿಮಾಸ ಪೂರ್ಣಿಮಿ, ಬುಧವಾರ ಉತ್ತ್ರಾಷಾಢ ನಕ್ಷತ್ರದಲ್ಲಿ ಶ್ರೀ ಆಳ್ವಾರ್ ತಿರುನಗರಿ ಸಮೀಪದಲ್ಲಿ ಶ್ರೀ ವೀರನಾ

ರಾಯಣಪುರದಲ್ಲಿ ಈಶ್ವರಮುನಿಗಳಿಗೆ ಪುತ್ರರಾಗಿ ಅವತರಿಸಿದರು. ಇವರು ಸ್ವಲ್ಪ ಕಾಲದಲ್ಲೇ ಮಹಾ ತೇಜಸ್ವಿಯಾಗಿ ಅಪಾರ ಜ್ಞಾನವನ್ನು ಸಂಪಾದಿಸಿ, ಚೋಳನೃಪನ ಆಸ್ಥಾನದಲ್ಲಿದ್ದ ಆಕ್ಕಿಯಾಳ್ವಾರ್ ಎಂಬ ಮಹಾಪಂಡಿತನನ್ನು ವಾದದಲ್ಲಿ ಗೆದ್ದು ವೀರವೈಷ್ಣವಳಾದ ರಾಜಪತ್ನಿಗೆ ಸಂತೋಷವನ್ನುಂಟುಮಾಡಿ, ಆಳವಂದಾರ್ ಎಂಬ ಬಿರುದನ್ನು ಹೊಂದಿ ಶೈವನಾದ ಚೋಳನೃಪನನ್ನು ವೈಷ್ಣವನನ್ನಾಗಿ ಮಾಡಿ, ಆತನಿಂದ ಅರ್ಧ ರಾಜ್ಯವನ್ನು ಪಡೆದು, ಕೆಲವು ಕಾಲ ರಾಜ್ಯಾಡಳಿತಗಳನ್ನು ನಡಿಸಿ, ಕಡೆಗೆ ಮಣಕ್ಕಾಲ್‌ನಂಬಿ (ಶ್ರೀ ರಾಮಮಿಶ್ರರು) ಯೆಂಬ ಗುರುವಿನಿಂದ ಉಪದೇಶವನ್ನು ಹೊಂದಿ, ಮಹಾ ವಿರಕ್ತಿಭಾವವನ್ನು ಹೊಂದಿದವರಾದ ಪ್ರಯುಕ್ತ ರಾಜ್ಯವಂ ತ್ಯಜಿಸಿ, ಸನ್ಯಾಸಾಶ್ರಮವನ್ನು ಕೈಕೊಂಡು, ಈ ಚತುಶ್ಲೋಕೀ ಎಂಬ ಶ್ರೀತತ್ವ ಪ್ರತಿಪಾದಕವಾದ ಲಕ್ಷ್ಮೀಸ್ತೋತ್ರವನ್ನೂ, ವಿಶಿಷ್ಟಾ ದ್ವೈತ ಸಿದ್ಧಾಂತ ಪರತತ್ವಯಾಥಾರ್ಥ್ಯ ಮುಂತಾದವುಗಳನ್ನು ಸ್ಥಾಪಿ ಸುವ ಸ್ತೋತ್ರರತ್ನವನ್ನೂ, (ಆಳವಂದಾರ್ ಸ್ತೋತ್ರ), ಸಿದ್ಧಿತ್ರ ಯಗಳನ್ನೂ, ಆಗಮ ಪ್ರಾಮಾಣ್ಯ, ಪುರುಷ ನಿರ್ಣಯ, ಗೀತಾರ್ಥ ಸಂಗ್ರಹವೆಂಬ ಗ್ರಂಥಗಳನ್ನೂ, ರಚಿಸಿ, ಹದಿನೈದು ಮಂದಿ ಶಿಷ್ಯರು ಗಳಿಗೆ ಉಪದೇಶಗಳನ್ನು ಮಾಡುತ್ತಾ ತುಂಬಾ ಯಶಸ್ಸನ್ನು ಪಡೆ ದರು. ಇವರ ಸಂಗ್ರಹ ಚರಿತ್ರೆಗಾಗಿ ಗುರುಪರಂಪರಾ ಸಾರದ ಆ-ಳನೇ ಪುಟಗಳಲ್ಲವಲೋಕಿಸಬಹುದು.

ಈ ಗ್ರಂಥದಲ್ಲಿ ಮುಖ್ಯವಾಗಿ ನಾಲ್ಕು ಶ್ಲೋಕಗಳಿರುವದ ರಿಂದಲೇ ಇದಕ್ಕೆ ಚತುಶ್ಲೋಕೀ ಎಂಬ ಹೆಸರನ್ನು ಕೊಟ್ಟರು ತ್ತಾರೆ. ನಾಲ್ಕು ಶ್ಲೋಕಗಳೇ ಆದರೂ, ಶ್ರೀತತ್ವದ ಸರ್ವ ವಿಷ ಯವೂ ಅವುಗಳಲ್ಲಿ ಅಡಗಿರುವದರಿಂದ ಪರಮ ಭಾಗವತರುಗಳಿಂ ದಲೂ ಈ ಸ್ತೋತ್ರವು ಪರಮಾದರಿಂದ ಸ್ವೀಕರಿಸಲ್ಪಟ್ಟಿರುತ್ತದೆ. ತುಂಬಾ ವಿಸ್ತಾರವಾದ ಶ್ರೀತತ್ತ್ವೋಪನ್ಯಾಸ ಬೇಕಾದರೆ, ಶ್ರೀ ಪರಾ ಶರ ಭಟ್ಟರ ಶ್ರೀಗುಣರತ್ನಕೋಶ ಸ್ತೋತ್ರವನ್ನೂ, ತುಂಬಾ ವಿಸ್ತಾ ರವೂ, ತುಂಬಾ ಹ್ರಸ್ವವೂ ಇಲ್ಲದ ಉಪಪಾದನದಲ್ಲಪೇಕ್ಷೆಯಿದ್ದರೆ ಶ್ರೀ ನಿಗಮಾಂತ ಮಹಾದೇಶಿಕರವರ ಶ್ರೀಸ್ತುತಿಯನ್ನೂ, ತುಂಬಾ ಸಂ

ಗ್ರಹವಾಗಿ ಶ್ರೀ ತತ್ವವಿಷಯವನ್ನೆಲ್ಲಾ ತಿಳಿಯುವ ಅಭಿಲಾಷೆ ಇದ್ದರೆ ಶ್ರೀ ಯಾಮುನೇಯರ ಈ ಚತುಶ್ಲೋಕಿಯನ್ನೂ ಪಠಿಸಬಹುದು. ಮೂರೂ ದಿವ್ಯತರವಾದ ಮೂರು ರತ್ನಗಳು. ಮೂರರಲ್ಲೂ ಶ್ರೀ ತತ್ವವೂ ಏಕಕಂಠ್ಯವಾಗಿ ಉಪಪಾದಿತವಾಗಿರುತ್ತದೆ. ಐಹಿಕಾಮುಷ್ಮಿಕ ಶ್ರೇಯಸ್ಕಾಮರುಗಳು ಪ್ರತಿನಿತ್ಯವೂ ಪಠಿಸುವ ಸ್ತೋತ್ರಗಳಾಗಿವೆ. ಈ ಸ್ತೋತ್ರದ ನಾಲ್ಕು ಶ್ಲೋಕಗಳೇ ಶ್ರೀ ಪರಾಶರಭಟ್ಟರ ಮತ್ತು ಶ್ರೀ ನಿಗಮಾನ್ತದೇಶಿಕರ ಲಕ್ಷ್ಮೀಸ್ತೋತ್ರಗಳಿಗೆ ಬೇಕಾದ ವಿಷಯಗಳನ್ನೆಲ್ಲಾ ಒದಗಿಸಿಕೊಟ್ಟಿರುತ್ತವೆ. ಅಷ್ಟು ಅರ್ಥಗರ್ಭಿತವಾದ ಶ್ಲೋಕಗಳಾದುದರಿಂದಲೇ, ಈ ನಾಲ್ಕು ಶ್ಲೋಕಗಳಿಗೆ ಅವರು ವಿಪುಳವಾದ ಮತ್ತು ಅಮೋಘವಾದ ವ್ಯಾಖ್ಯಾನ ಬರದಿರುತ್ತಾರೆ. ಈ ಚತುಶ್ಲೋಕಿಯನ್ನು ನಮ್ಮ ಪಂಗಡದ ಸಮಸ್ತ ಸ್ತ್ರೀಪುರುಷಮಂಡಲಿಗಳು ಪ್ರತಿದಿನವೂ ಪಠಿಸಿ, ಅದರ ಅರ್ಥಸ್ವಾರಸ್ಯವನ್ನು ಗ್ರಹಿಸಿ, ಲೋಕಮಾತೆಯ ಅನುಗ್ರಹಕ್ಕೆ ಪಾತ್ರರಾಗಿ ಸರ್ವಾಭೀಷ್ಟಗಳನ್ನು ಹೊಂದಲಿ ಎಂಬುವದೇ ಈ ಆಜಾರ್ಯ ಹೃದಯಾನ್ವೇಷಣೀ ಎಂಬ ಕನ್ನಡ ವ್ಯಾಖ್ಯಾನ ಕರ್ತೃವಿನ ಮುಖ್ಯ ಆಶಯವು. ಇದು ಇಂತಹ ಮಹಿಮೆಯುಳ್ಳದ್ದೆಂಬುದನ್ನು ಬಹು ಸುಲಭವಾಗಿ ಗ್ರಹಿಸಬಹುದು. ಹೇಗೆಂದರೆ :- ಆಚಾರ್ಯ ಪರಂಪರೆಯಿಂದ ಬಂದ ಸ್ತೋತ್ರಗಳಲ್ಲಿ ಇದು ಪ್ರಥಮರತ್ನವು. ಮಾತೃದೇವೋಭವ ಎಂಬ ಶ್ರುತ್ಯನುಸಾರವಾಗಿ ಮಾತಾ ತುಂಬಾ ಶ್ರೇಷ್ಠಳಾದ ಪ್ರಯುಕ್ತ, ಮೊದಲು ಈ ಯಾಮುನ ಮುನಿಗಳು ಈ ಶ್ರೀಸ್ತುತಿಯನ್ನು ಮಾಡಿದ ಮಹಾತ್ಮ್ಯೆಯಿಂದಲೇ, ಸ್ತೋತ್ರಗಳೆಲ್ಲೆಲ್ಲಾ ರತ್ನವೆನಿಸಿದ ಶ್ರೀ ಆಳವಂದಾರ್ ಸ್ತೋತ್ರವೂ, ಶ್ರೀ ಯತಿವರ್ಯರಾದ ತಮ್ಮ ಶಿಷ್ಯರಿಂದ ಶ್ರೀ ಭಾಷ್ಯಾದಿ ಗ್ರಂಥನಿರ್ಮಾಣವೂ, ಅವರಿಂದೀಚೆಗೆ ಅನೇಕ ಭಾಗವತ ಶಿಖಾಮಣಿಗಳಿಂದ ಅನೇಕ ವಿಶಿಷ್ಟಾದ್ವೈತ ಗ್ರಂಥರಚನೆಯೂ ಉಂಟಾದವು. ಆದುದರಿಂದ ಇದನ್ನು ಒಂದು ಆದಿ ಸ್ತೋತ್ರವಾಗಿ ಭಾವಿಸಬಹುದು. ಈ ಲಕ್ಷ್ಮೀಸ್ತೋತ್ರದಿಂದುಂಟಾದ ಶ್ರೇಯಸ್ಸೇ ಇವೆಲ್ಲಕ್ಕೂ ಮುಖ್ಯ ಕಾರಣವು.

ಕಾನ್ತಸ್ತೇ ಪುರುಷೋತ್ತಮಃ, ಫಣಿಪತಿಶ್ಶಯ್ಯಾಸನಂ, ವಾಹನಂ । ವೇದಾತ್ಮಾ ವಿಹಗೇಶ್ವರೋ, ಯವನಿಕಾ ಮಾಯಾ ಜಗನ್ಮೋಹಿನೀ । ಬ್ರಹ್ಮೇಶಾದಿ ಸುರವ್ರಜ ಸ್ಸದಯಿತ ಸ್ತ್ವದ್ದಾಸ ದಾಸೀಗಣ । ಶ್ಶ್ರೀರಿತ್ಯೇವ ಚ ನಾಮ ತೇ ಭಗವತಿ, ಭೂಮ್ನಃ ಕಥಂ ತ್ವಾಂ ವಯಂ ॥೧॥

ಈ ಪ್ರಥಮ ಶ್ಲೋಕದಲ್ಲಿ ಲಕ್ಷ್ಮ್ಯಾಯ ವಿಭವೈಶ್ವರ್ಯಾದಿಗಳನ್ನು ಹೇಳಲುಪಕ್ರಮಿಸಿ, ಲಕ್ಷ್ಮ್ಯಾಗೆ ಈಶ್ವರತ್ವ ಸೃಷ್ಟಿಕರ್ತೃತ್ವಾದಿಗಳೂ ಉಭಯ ವಿಭೂತಿಯ ಶೇಷತ್ವವೂ ಉಂಟೆಂದು ಸ್ಥಾಪಿಸುತ್ತಾರೆ.

ತಾ.ಪ.—**ತೇ** – ನಿನಗೆ, **ಪುರುಷೋತ್ತಮಃ** – ಇತರ ಪುರುಷರುಗಳಿಗಿಂತ ಸರ್ವಶ್ರೇಷ್ಠನಾದ ಭಗವಂತನು, **ಕಾನ್ತಃ** – ಮನೋಹರನಾದ ಪ್ರಿಯವಲ್ಲಭನು, ಆದುದರಿಂದ ಅನುರೂಪಪತಿಯು ಎಂಬರ್ಥವು. **ಫಣಿಪತಿಃ** – ಸಹಸ್ರಫಣಿಗಳುಳ್ಳ ಆದಿಶೇಷನು, **ಶಯ್ಯಾ** – ಹಾಸಿಗೆಯೂ ಮತ್ತು **ಆಸನಂ** – ಸಿಂಹಾಸನವೂ; **ವೇದಾತ್ಮಾ** – ವೇದಸ್ವರೂಪಿಯಾಗಿರುವ, **ವಿಹಗೇಶ್ವರಃ** – ಪಕ್ಷಿಶ್ರೇಷ್ಠನಾದ ಗರುಡನು, **ವಾಹನಂ** – ವಾಹನವು; **ಜಗನ್ಮೋಹಿನೀ** – ಜಗತ್ತುಗಳನ್ನೆಲ್ಲಾ ಭ್ರಾಂತಿಗೊಳಿಸುವ, **ಮಾಯಾ** – ಪ್ರಕೃತಿಯು, **ಯವನಿಕಾ** – ತೆರೆಯು, **ಸದಯಿತಃ** – ತಮ್ಮ ತಮ್ಮ ಪತ್ನಿಯರಿಂದ ಕೂಡಿದ **ಬ್ರಹ್ಮೇಶಾದಿ ಸುರವ್ರಜಃ** – ಚತುರ್ಮುಖ ಬ್ರಹ್ಮ, ಈಶನೆಂದರೆ ರುದ್ರ, ಆದಿ ಪದದಿಂದ ಇಂದ್ರಾಗ್ನಿಗಳೇ ಮೊದಲಾದ, **ಸುರವ್ರಜಃ** – ದೇವತೆಗಳ ಸಮೂಹವು, **ತ್ವದ್ದಾಸ ದಾಸೀಗಣಃ** – ನಿನ್ನ ದಾಸಜನರು, ದಾಸಿಗಳು, ಇವರುಗಳ ಸಮೂಹವು; ಇಷ್ಟು ದೂರ ಏಕೆ, **ತೇ** – ನಿನ್ನ, **ನಾಮಚ** – ಹೆಸರಾದರೋ, **ಶ್ರೀರಿತ್ಯೇವ** – ಶ್ರೀ ಎಂಬ ಅವೋ ಷವಾದ ನಾಮವೇ, ಆ ಹೆಸರಲ್ಲೇ ನಿನ್ನ ಸರ್ವಮಹಾತ್ಮ್ಯೆಯು ಅಂತರ್ಗತವೆಂಬ ಭಾವವು; **ಹೇ ಭಗವತಿ** – ಓ ಹೇಯಗುಣರಹಿತಳಾಗಿ ಷಾಡ್ಗುಣ್ಯಾದಿ ಮಹಾಕಲ್ಯಾಣಗುಣ ಭೂಷಿತಳೇ, **ತ್ವಾಂ** – ಇಂತಹ ಅವೋಷವಾದ ಸ್ವರೂಪ ರೂಪಗುಣ ವಿಭವೈಶ್ವರ್ಯಾದಿಗಳಿಂದ

ಕೂಡಿದ ನಿನ್ನನ್ನು, **ವಯಂ**—ಅಲ್ಪಜ್ಞರಾದ ಅಶಕ್ತರಾದ ನಾವು, **ಕಥಂ**—ಹೇಗೆತಾನೇ, **ಬ್ರೂಮಃ**—ಹೇಳುವೆವು, ಸ್ತೋತ್ರಮಾಡುವೆವು? ಸ್ತೋತ್ರವಾಡುವದು ಅಸಾಧ್ಯವು ಎಂಬ ಭಾವವು.

ತಾತ್ಪರ್ಯ.—ಈ ಶ್ಲೋಕದಿಂದ ಲಕ್ಷ್ಮ್ಯಾಯ ಮಹಿಮೆಯು ಅಪಾರವಾದುದೆಂದು ಸ್ತುತಿಸುತ್ತಾರೆ:—ಏಕೆಂದರೆ:—

ತ್ವಮಸ್ಯೇ ಪುರುಷೋತ್ತಮಃ—ನಿನ್ನ ಭರ್ತಾವಾದರೋ, ಸಾಧಾರಣನಲ್ಲವು. ಆತನು ಪುರುಷೋತ್ತಮನು; **ಪುರುಷ** ಶಬ್ದಕ್ಕೆ "ಪುರಂತಿ, ಪ್ರಾಣಿನಾ ಮಗ್ರೇ ಗಚ್ಛನ್ತಿ" ಎಂಬ ವ್ಯುತ್ಪತ್ತಿಯಿಂದ ತಿರ್ಯಗ್ಜಂತುಗಳಿಗಿಂತಲೂ ಉತ್ತಮರಾಗಿರುವ ಜೀವರು ಎಂಬರ್ಥವು. ಇವರುಗಳು ಬದ್ಧರೂ, ಮುಕ್ತರೂ, ನಿತ್ಯರೂ, ಲಕ್ಷ್ಮೀನಾರಾಯಣರೆಂದು ನಾಲ್ಕುವಿಧವು. ಈ ಪುರುಷ ಶಬ್ದದಿಂದ ಬದ್ಧರೂ, "ಉತ್ಪುರುಷರು" ಎಂಬುವವರಿಂದ ಇವರುಗಳಿಗಿಂತ ಶ್ರೇಷ್ಠರಾದ ಮುಕ್ತರೂ, "ಉತ್ತರಃ ಪುರುಷರು" ಅವರುಗಳಿಗಿಂತ ಉತ್ತಮರಾಗಿ ಎಂದಿಗೂ ಬದ್ಧದೆಶೆಯನ್ನನುಭವಿಸದ ನಿತ್ಯರೂ, "ಉತ್ತಮಃ ಪುರುಷಃ" ಎಂಬುವವರಿಂದ ಸರ್ವೇಶ್ವರನಾದ ಶ್ರಿಯಃಪತಿಯೂ ಹೇಳಲ್ಪಟ್ಟರು. ಪುರುಷಶಬ್ದಕ್ಕೆ ಇನ್ನೊಂದು ಅರ್ಥವನ್ನೂ ಹೇಳಬಹುದು. "ಪುರುಷನೋತ್ತಿ" ಎಂಬುವದರಿಂದ ಉದಾರಿಯಾಗಿ ಕೊಡುವವನು ಎಂದರೆ ಪೋಷಕಪ್ರದನು ಎಂಬರ್ಥವು ತೋರಿಬರುತ್ತದೆ. ಉತ್ತಮಪುರುಷನಾದ ಶ್ರಿಯಃಪತಿಯು ಪರಮೋದಾರಿಯು ಎಂಬ ಭಾವವು. "ದೇವ ಜುಷ್ಟಾಮುದಾರಾಂ" ಎಂದು ಶ್ರುತಿಯಲ್ಲಿ ಲಕ್ಷ್ಮ್ಯಾಯು ಪರಮೋದಾರಳು ಎಂದು ಹೇಳಿರುವ ಹಾಗೆ ಆಕೆಯ ಪತಿಯೂ ತುಂಬಾ ಪರೋದಾರನೆಂಬ ಭಾವವೂ ತೋರಿಬರುತ್ತದೆ.

ಇದೂ ಅಲ್ಲದೆ, ಗೀತೆಯ ೧೫ನೇ ಅಧ್ಯಾಯದಲ್ಲಿ ಪುರುಷೋತ್ತಮ ಶಬ್ದಕ್ಕೆ ಅರ್ಥವು ಹೇಳಲ್ಪಟ್ಟಿರುತ್ತದೆ.

ಯಸ್ಮಾತ್ಕ್ಷರ ಮತೀತೋಹಂ ಅಕ್ಷರಾದಪಿ ಚೋತ್ತಮಃ ।
ಅತೋಸ್ಮಿ ಲೋಕೇ ವೇದೇಚ ಪ್ರಥಿತಃ ಪುರುಷೋತ್ತಮಃ ॥

ಯಾವ ಕಾರಣದಿಂದ ತಾನು ಬದ್ಧರಾದ ಜೀವಾತ್ಮರ ಹಾಗೆ ಜ್ಞಾನಸಂಕೋಚವಿಲ್ಲದೆ ಅವರುಗಳಿಗಿಂತ ವಿಲಕ್ಷಣನೋ, ಮತ್ತು ಒಂದುಕಾಲದಲ್ಲೂ ಜ್ಞಾನಸಂಕೋಚವಿಲ್ಲದಿರುವದರಿಂದ ಮುಕ್ತರುಗಿಂತಲೂ ವಿಲಕ್ಷಣನೋ, ಮತ್ತು ಯಾವಕಾಲದಲ್ಲೂ ಸತ್ತಾದಿಗಳು ಯಾರಿಗೂ ಅಧೀನವಾಗದಿರುವದರಿಂದ ನಿತ್ಯರಗಿಂತಲೂ ವಿಲಕ್ಷಣನೋ, ಆ ಕಾರಣದಿಂದ ತಾನು ಲೋಕದಲ್ಲೂ ವೇದದಲ್ಲೂ ಕೂಡ ಪುರುಷೋತ್ತಮನೆಂದು ಪ್ರಸಿದ್ಧನು ಎಂದು ಶ್ರೀಕೃಷ್ಣಪರಮಾತ್ಮನು ಹೇಳಿಕೊಂಡಿರುತ್ತಾನೆ.

ಅದೂ, ಅಲ್ಲದೆ, **"ಕಾನ್ಯಸ್ತೇ ಪುರುಷೋತ್ತಮಃ"** ಎಂದು ಹೇಳಿರುವದರಿಂದ, ಪುರುಷೋತ್ತಮನು ಲಕ್ಷ್ಮೀಪತಿಯೇ ವಿನಾ ಬ್ರಹ್ಮರುದ್ರಾದಿಗಳು ಎಂದಿಗೂ ಪುರುಷೋತ್ತಮರಲ್ಲವೆಂದೂ, ಅವರುಗಳು ಈಶ್ವರಕೋಟಿಗೆ ಸೇರಿದವರೇ ಅಲ್ಲದೆ ಜೀವಕೋಟಿಗೆ ಸೇರಿದವರೆಂದೂ, ಶಿವಸರ್ವೋತ್ತಮವನ್ನು ಹೇಳುವದು ಶಾಸ್ತ್ರವಿಹಿತವಲ್ಲವೆಂದೂ ಇದರಿಂದ ತೋರಿಬರುತ್ತದೆ. ಶ್ರೀ ವಾಲ್ಮೀಕಿ ಮಹರ್ಷಿಯು ರುದ್ರನು **ದೇವತೆಗಳಲ್ಲಿ ಶ್ರೇಷ್ಠನೆಂದೂ** ಬಾಲಕಾಂಡ, ೪೫ನೇ ಸರ್ಗ, ೨೪ನೇ ಶ್ಲೋಕದಲ್ಲಿ, ಶ್ರೀಹರಿಯು **ದೇವದೇವೇಶ್ವರ**ನೆಂದೂ, ಹೇಳಿರುತ್ತಾರೆ :—

ಏವ ಮುಕ್ತಸ್ತತೋ ದೇವೈರ್ದೇವ ದೇವೇಶ್ವರಃಪ್ರಭುಃ ।
ಪ್ರಾದುರಾಸೀ ತ್ತತೋ ತ್ರೈವ ಶಂಖ ಚಕ್ರಧರೋಹರಿಃ ॥
ಉವಾಚೈನಂ ಸ್ಮಿತಂಕೃತ್ವಾ ರುದ್ರಂ ಶೂಲಧರಂ ಹರಂ ।
ತತ್ತ್ವದೀಯಂ ಸುರಶ್ರೇಷ್ಠ ಸುರಾಣಾಂ ಅಗ್ರಜೋಸಿಯತ್।
ಅಗ್ರಪೂಜಾ ಮಿಮಾಂ ಮತ್ವಾಗೃಹಾಣೇದಂ ವಿಷಂಪ್ರಭೋ॥

ಎಂಬೀ ಶ್ಲೋಕಗಳು ಶ್ರಿಯಃಪತಿಯೇ ಪರತತ್ವವೆಂಬುವದನ್ನು ಸಮರ್ಥನೆ ಮಾಡುತವೆ. ಶ್ರೀ ಪರಾಶರರ ವಿಷ್ಣುಪುರಾಣವೂ ಹಾಗೆಯೇ ಪ್ರತಿಪಾದಿಸುತ್ತದೆ. ಈ ಮಹರ್ಷಿಯು ಪುಲಸ್ತ್ಯವರಪ್ರಸಾದದಿಂದ "ದೇವತಾ ಪಾರಮಾರ್ಥ್ಯ"ವನ್ನು "ಯಥಾವದ್ವೇತ್ತಾ" ಆದುದರಿಂದ, ತಮ್ಮ ಪ್ರಿಯಶಿಷ್ಯರಾದ ಮೈತ್ರೇಯರಿಗೆ ಹೇಳುತ್ತಾರೆ :—

"ವಿಷ್ಣೋರಸ್ಸಕಾಶಾದುದ್ಭೂತಂ ಜಗತ್ತತ್ರೈವಚಸ್ಥಿತಂ ।
ಸ್ಥಿತಿಸಂಯಮು ಕರ್ತಾಸೌ ಜಗತೋಸ್ಯ ಜಗಚ್ಚಸಃ ।"

ಲಕ್ಷ್ಮೀಪತಿಯಾದ ವಿಷ್ಣುವೇ ಪರತತ್ವವೆಂಬುನದು ವಿಪರ್ಟ್ಟತು. ಹಾಗೆಯೇ ಇವರ ಮುಕ್ಕಳಾದ ವ್ಯಾಸಮಹರ್ಷಿಯು, ಮಹಾ ಭಾರತದ ಮೋಕ್ಷಧರ್ಮದಲ್ಲಿ ಜಗತ್ಕಾರಣನಾದ ಸರ್ವೇಶ್ವರನು ಯಾರೆಂಬ ಯುಧಿಷ್ಠಿರ ಪ್ರಶ್ನೆಗೆ, ಭೀಷ್ಮೋಕ್ತಿಯಿಂದ, **"ನಾರಾಯಣೋ ಜಗ ನ್ಮೂರ್ತಿ ರನ್ತರಾತ್ಮಾ ಸನಾತನಃ"** (ಮೋ. ಧ. 180. 11) ಶ್ರೀ ಮನ್ನಾರಾಯಣನೇ ಪರತತ್ವವೆಂದು ಉಪದೇಶಿಸಿದರು. ಅಂತಹ ಪುರುಷೋತ್ತಮನು ನಿನಗೆ ವಲ್ಲಭನೆಂದು ಶ್ರೀ ಯಾಮುನ ಮುನಿಗಳು ಹೇಳುತ್ತಾರೆ.

ಇಂತಹ ಸರ್ವೇಶ್ವರನು ನಿನಗೆ ಪತಿಯು ಎಂದು ಲಕ್ಷ್ಮಿಯನ್ನು ಕುರಿತು ಹೇಳಿದುದರಿಂದ, **"ಭರ್ತೃ ಭಾಗ್ಯಂತು ಭಾರ್ಯೈಕಾ ಪ್ರಾಪ್ನೋತಿ ಪುರುಷರ್ಷಭ"** (ರಾ. ಅಯೋಧ್ಯಾ. 27. 4.) ಎಂಬ ಸೀತಾ ವಾಕ್ಯಾನುಸಾರವಾಗಿ, ಲಕ್ಷ್ಮಿಯೂ ಸರ್ವೇಶ್ವರಿಯಾಗಿ ಜಗತ್ಕರ್ತೃತ್ವ, ಧಾರಕತ್ವ, ನಿಯಾಮಕತ್ವಾದಿಗಳಲ್ಲಿಯೂ ಭಾಗಿನಿಯು ಎಂಬ ಭಾವವು ತೋರಿಬರುತ್ತದೆ.

ಹೀಗೆ ಸರ್ವೇಶ್ವರನು ಪ್ರಿಯವಲ್ಲಭನೆಂದು ಹೇಳಿದುದರಿಂದ ಅಸಾಧಾರಣವಾದ ಸತತ ಪರಸ್ಪರಾನುರಾಗಯುಕ್ತವಾದ ದಾಂಪತ್ಯ ಭಾವವೂ ತೋರಿಬರುತ್ತದೆ. **"ಅಸ್ಯಾದೇವ್ಯಾ ಮನಸ್ತಸ್ಮಿನ್ ತಸ್ಯ ಚಾಸ್ಯಾಂ ಪ್ರತಿಷ್ಠಿತಂ"** ಎಂಬ ಅವೋಕ್ತೋಕ್ತಿಯಿಂದ ಲೋಕ ದಂಪತಿಗಳ ಹಾಗೆ ಇವರುಗಳಿಗೆ ಎಂದಿಗೂ ವೈಮನಸ್ಯವಿಲ್ಲವೆಂಬ ಭಾವವೂ, ಇಬ್ಬರೂ ಪರಸ್ಪರ ಇಂಗಿತಗಳನ್ನರಿತವರಾಗಿ ಯಾವಾಗಲೂ ಒಟ್ಟಿಗೆ ಇದ್ದುಕೊಂಡು ಸಕಲ ಪ್ರವೃತ್ತಿ ನಿವೃತ್ತಿ ರೂಪವಾದ ದಿವ್ಯಾದ್ಭುತ ಚೇಷ್ಟೆಗಳನ್ನು ಅವತಾರ ಮೊದಲಾದ ಸುಸಮಯಗಳಲ್ಲೆಲ್ಲಾ ನಡಿಸುತ್ತಾರೆಂಬುವದೂ ತೋರಿಬರುತ್ತದೆ.

ಕಾನ್ತಸ್ತೆ ಎಂದು ಕಾನ್ತ ಶಬ್ದವನ್ನುಪಯೋಗಿಸಿರುವದರಿಂದ, ಚೇತನನ ವಿಷಯದಲ್ಲಿ ತುಂಬಾ ಅನುಗ್ರಹಮಯಳೆಂದೂ, ಅದಕ್ಕಾಗಿ

ದಯಾ, ವಾತ್ಸಲ್ಯ, ಸೌಲಭ್ಯ, ಸೌಶೀಲ್ಯಾದಿ ಗುಣಗಳಿಂದ ಪರಿಪೂರ್ಣಳೆಂದೂ, ಆದುದರಿಂದ ಚೇತನನಿಗೆ ಪುರುಷಕಾರಭೂತಳೆಂದೂ, ಈ ಲೀಲಾವಿಭೂತಿಯ ಕಾರ್ಯನಿರ್ವಾಹದಲ್ಲಿ ಶಾಸ್ತ್ರವಾಗಿರುವ ಕಾರ್ಯ ಭಾಗವನ್ನು ತನ್ನ ಪತಿಗೆ ಕೊಟ್ಟುಬಿಟ್ಟು, ಅನುಗ್ರಹಿಸುವ ಕಾರ್ಯ ಭಾಗವನ್ನು ತಾನು ವಹಿಸಿರುವಳೆಂದೂ ತೋರಿಬರುತ್ತದೆ.

ಕಾನ್ತಸ್ತೇ ಪುರುಷೋತ್ತಮಃ – ಎಂಬುವದರಿಂದ ಶ್ರಿಯಃ ಪತಿತ್ವವೇ ಸರ್ವೇಶ್ವರನ ಒಂದು ಮುಖ್ಯ ಸ್ವರೂಪ ನಿರೂಪಕ ಧರ್ಮವೆಂದು ಹೇಳಿದಂತೆ ಆಯಿತು. **ಕಾರಣಂತು ಧ್ಯೇಯಃ** – ಎಂದು ಹೇಳಿರುವ ಹಾಗೆ ಉಪಾಸಕರಿಗೆ ಉಪಾಸ್ಯವು ಯಾವುದು ಎಂದರೆ ಯಾವುದು ಜಗತ್ಕಾರಣವೋ ಅದು ಎಂದು ವಿಘಟ್ಟಿಸಿ, ಆ ಜಗತ್ಕಾರಣ ಪರತತ್ವವು ಯಾವುದು ಎಂದು ತಿಳಿಯಲು, ಲಕ್ಷ್ಮೀಪತಿತ್ವವನ್ನೇ ಒಂದು ಜೆಹ್ನೆಯಾಗಿ ಅಂಗೀಕರಿಸಿದರೆಂದೂ ಇದರಿಂದ ಸೂಚಿಸಲ್ಪಟ್ಟಿತು. ಯಾವಾಗ ಶ್ರಿಯಃ ಪತಿತ್ವವು ನಾರಾಯಣನಿಗೆ ಸ್ವರೂಪ ನಿರೂಪಕವಾಯಿತೋ ಆಗ ವಿಷ್ಣುಪತ್ನೀ ಭಾವವು ಲಕ್ಷ್ಮಿಗೆ ಸ್ವರೂಪ ನಿರೂಪಕವಾಯಿತು. ಆತನು ಪುರುಷೋತ್ತಮನಾದರೆ, ಈಕೆಯು ಶ್ರೀ ವಾಲ್ಮೀಕಿ ಮಹರ್ಷಿಯ ವಾಕ್ಯಾನುಸಾರ, "ನಾರೀಣಾಂ ಉತ್ತಮಾ ವಧೂಃ" ಸ್ತ್ರೀಗಳಲ್ಲಿ ಸರ್ವೋತ್ಕೃಷ್ಟಳಾದಳು. ಹೀಗೆ ಈ ದಾಂಪತ್ಯಭಾವವು ಪರಸ್ಪರೋತ್ಕರ್ಷಕ್ಕೆ ಕಾರಣವು. "ಶ್ರಿಯಃ ಶ್ರೀಃ," "ಕಶ್ಶ್ರೀ ಶ್ರಿಯಃ" (ಆಳವಂದಾರ್ ಸ್ತೋತ್ರ) ಇತ್ಯಾದಿ ಪ್ರಯೋಗಗಳು, ಲಕ್ಷ್ಮಿಗೆ ನಾರಾಯಣನಿಂದ ಉತ್ಕರ್ಷವನ್ನೂ, "ಅಪ್ರಮೇಯಂಹಿತತ್ತೇಜಃ ಯಸ್ಯೈ ಸಾಜನಕಾತ್ಮಜಾ" ಯಾವ ಮಹಾನುಭಾವನಾದ ಶ್ರೀರಾಮನಿಗೆ ಆ ಜನಕನಂದಿನಿಯಾದ ಸೀತೆಯು ಪತ್ನಿಯೋ, ತಂಥಾವನ ತೇಜಸ್ಸು ನಿರುಪಮವಾದುದಷ್ಟೇ" ಎಂಬೀವಾಕ್ಯವು ಲಕ್ಷ್ಮಿಯಿಂದ ನಾರಾಯಣನಿಗೆ ಉತ್ಕರ್ಷವನ್ನೂ ಬೋಧಿಸುತ್ತವೆ. ಶ್ರಿಯಃ ಪತಿತ್ವದಿಂದಲೇ ಸರ್ವೇಶ್ವರನಿಗೆ ಸರ್ವಮಂಗಳತ್ವವೂ, ಮುಮುಕ್ಷುಗಳಿಗೆ ಫಲಪ್ರಾಪ್ತಿಯೂ, ಎಲ್ಲವೂ ಎಂಬ ಭಾವವು. ಇನ್ನೊಂದು ಕಡೆಯಲ್ಲೂ, **"ಅತೀವ ರಾಮಃ ಶುಶುಭೇತಿ ಕಾಮಯಾ ವಿಭುಶ್ಮ್ರಿ**

ಯಾ ವಿಷ್ಣೋರಿವ ಮಹೇಶ್ವರಃ " (ರಾ. ಬಾ. ಕೊನೇ ಶ್ಲೋಕ) ದೇವತೆಗಳಿಗೂ ಈಶ್ವರನಾಗಿಯೂ, ಜಗತ್ತನ್ನೆಲ್ಲಾ ವ್ಯಾಪಿಸುವವನಾಗಿಯೂ ಇರುವ ವಿಷ್ಣುವು ಲಕ್ಷ್ಮಿಯಿಂದ ಹೇಗೆ ಶೋಭಿಸುತ್ತಾನೋ; ಹಾಗೆ ಶ್ರೀರಾಮನು ಸೀತೆಯ ಮಹಿಮೆಯಿಂದ ಪರಮ ಶೋಭಾಯುಕ್ತನಾದನೆಂದು ಹೇಳಿರುತ್ತಾರೆ.

2. **ಫಣಿಪತಿಶಯ್ಯಾಸನಂ.** ಸಹಸ್ರ ಫಣಿಗಳುಳ್ಳ ಆದಿಶೇಷನು ಹೇಗೆ ನಾರಾಯಣನಿಗೆ ಹಾಸಿಗೆ, ಸಿಂಹಾಸನವೋ, ಹಾಗೆಯೇ ಲಕ್ಷ್ಮಿಗೂ ಆತನು ಶಯ್ಯಾಸನವು, ಇವರೇ ಸೋತ್ರರತ್ನದಲ್ಲೂ **" ತಯಾಸಹಾಸೀನ ಮನನ್ತಭೋಗಿನಿ "** (39ನೇ ಶ್ಲೋಕ) ಎಂದೂ, ಶ್ರೀ ಭಾಷ್ಯಕಾರರವರು **"ಶೇಷ ಭೋಗೇ ಶ್ರಿಯಾ ಸಹಾ ಸೀನಂ"** (ಶ್ರೀ ವೈಕುಂಠಗದ್ಯ) ಎಂದೂ ಹಾಗೆಯೇ ಹೇಳಿರುತ್ತಾರೆ. "ಶೆನ್ರಾರ್ ಕುಡ್ಯೆಯಾ ಮಿರುನ್ದಾರ್ ಸಿಂಗಾಸನ ಮಾಂ" (ಮು. ತಿರು. 53.) "ಆದಿಶೇಷನು ಸ್ವಾಮಿಯ ಸಂಚಾರಕಾಲದಲ್ಲಿ ಶ್ವೇತಚ್ಛತ್ರ ರೂಪವನ್ನು ತಾಳುವನು, ವಿಶ್ರಮಿಸಿಕೊಳ್ಳುವ ಕಾಲದಲ್ಲಿ ಸಿಂಹಾಸನವಾಗುವನು" ಮತ್ತು "ನಿವಾಸ ಶಯ್ಯಾಸನ ಪಾದುಕಾಂಶುಕಃ" (ಸ್ತೋತ್ರರತ್ನ.) "ಈ ಆದಿಶೇಷನು, ಮನೆ, ಹಾಸಿಗೆ, ಸಿಂಹಾಸನ ಪಾದುಕೆಗಳು ಪೀತಾಂಬರ ಮುಂತಾದ ರೂಪಗಳನ್ನು ಹೊಂದಿ, ತತ್ಕಾಲೋಚಿತ ಕೈಙ್ಕರ್ಯಗಳನ್ನೆಸಗುವನು" ಎಂದೂ, ಅವತಾರಕಾಲಗಳಲ್ಲಿ ಲಕ್ಷ್ಮಣ ಬಲರಾಮಾದಿ ರೂಪಗಳನ್ನು ಧರಿಸಿ ಕೈಂಕರ್ಯಾದಿ ಸಹಾಯವಾಡುವನೆಂದೂ ಹೇಳಲ್ಪಟ್ಟಿತು. ಆದರೆ ಒಬ್ಬನೇ ಇಂತಹ ಎಲ್ಲಾವಿಧ ಕೈಙ್ಕರ್ಯವಾಡಲು ಶಕ್ತನೇ ಎಂದರೆ, ಒಬ್ಬ ಪ್ರಾಕೃತ ಅಬಲೆಯಾದ ಕೌಸಲ್ಯೆಯೇ ದಶರಥನಿಗೆ **" ದಾಸೀವಚ್ಚ ಸಖೀವಚ । ಭಾರ್ಯಾವದ್ಭಗಿನೀವಚ್ಚ ಮಾತೃವ ಚ್ಚೋಪಶಿಷ್ಯತಿ "** ಎಂದು ಹೇಳಿರುವ ಮೇರಿಗೆ ಸಖಿಯಾಗಿಯೂ, ದಾಸಿಯಾಗಿಯೂ, ಹೆಂಡತಿಯಾಗಿಯೂ, ತಂಗಿಯಾಗಿಯೂ, ತಾಯಿಯಾಗಿಯೂ ಶುಶ್ರೂಷೆಯನ್ನು ಮಾಡಲು ಶಕ್ತಳಾಗಿರುವಾಗ, ಸರ್ವಜ್ಞನಾಗಿ, ಸರ್ವಶಕ್ತನಾಗಿರುವ ನಿತ್ಯಸೂರಿಯಾದ ಶೇಷನಿಗೇನೂ ಇದು ಅಸಾಧ್ಯವಲ್ಲವು. ಯಾವಾಗ ನಿತ್ಯವಿಭೂತಿಯ ಆದಿಶೇಷನು ಲಕ್ಷ್ಮಿ

ಗೂ ಕೈಙ್ಕರ್ಯವನ್ನೆಸಗುವನೆಂದು ಹೇಳಲ್ಪಟ್ಟ್ಯತೋ, ಆಗ ಆನಿತ್ಯ ವಿಭೂತಿಯ ವಿಷ್ವಕ್ಸೇನಾದಿ ನಿತ್ಯಸೂರಿಗಳೆಲ್ಲರೂ ಮುಕ್ತ್ತರೂ ಸಹ ಕೈಂಕರ್ಯವನ್ನೆಸಗುವರೆಂದು ಹೇಳಿದಂತಾಯಿತು. ಇದರಿಂದ ನಿತ್ಯವಿ ಭೂತಿಯು ಹೇಗೆ ಸ್ವಾಮಿಯ ಭೋಗಕ್ಕೋಸ್ಕರವೋ ಹಾಗೆಯೇ ಲಕ್ಷ್ಮಿಯ ಭೋಗಕ್ಕಾಗಿಯೂ ಏರ್ಪಟ್ಟ್ಯರುತ್ತ್ತದೆಂದು "**ಭೋಗೇ ವಿಭೂತಿಃ ಪರಾಪುಣ್ಯಾಸ್ತೇ ಪರಿಚಾರಕರ್ಮಣಿ ಸದಾ ಪಶ್ಯನ್ತಿ ಯೇ ಸೂರಯಃ**" ಎಂಬ ಶ್ರೀ ಪರಾಶರ ಭಟ್ಟ್ಯರ ವಾಕ್ಯ್ಯದಿಂದ ತೋ ರಿಬರುತ್ತ್ತದೆ. ಮುಂದೆ ಲೀಲಾವಿಭೂತಿಗೂ ಕೂಡ ಈಕೆಯು ನಾಯು ಕಳೆಂದು ಹೇಳಲ್ಪಡುವವರಿಂದ, ಅದೇ ಶ್ಲೋಕದಲ್ಲೇ "**ಹೇಲಾಯಾ ಮಖಿಲಂ ಚರಾಚರಮಿದಂ**" "ಈ ಲೋಕದ ಸರ್ವ ಚರಾಚರ ಗಳೂ ಆ ಲಕ್ಷ್ಮಿಯ ಲೀಲಾವಿಹಾರಕ್ಕಾಗಿ ಏರ್ಪಟ್ಟಿರುತ್ತವೆಂದು ಹೇ ಳಿರುವ ಹಾಗೆ ಉಭಯ ವಿಭೂತಿಗಳಿಗೂ ಸ್ವಾಮಿಯ ಹಾಗೆ ಈಕೆಯೂ ಈಶ್ವರಳೆಂದು ತೋರಿಬರುತ್ತ್ತದೆ" "**ಅಸ್ಯಾಮಮಚ ಶೇಷಂಶಿ ವಿಭೂತಿರುಭಯಾತ್ಮಕಾ**" ಎಂಬ ಸರ್ವೇಶ್ವರನ ವಾಕ್ಯ್ಯವೇ ಇದ ನ್ನು ಉಪಪಾದಿಸುತ್ತ್ತದೆ.

3. **ವಾಹನಂ ಯೇವಾತ್ಮಾ ವಿಹಗೇಶ್ವರಃ**—ಪಕ್ಷಿರಾಜನಾದ ಗರುಡನು ವಿಷ್ಣುವಿಗೆ ಹೇಗೆ ವಾಹನವೋ, ಹಾಗೆಯೇ ಲಕ್ಷ್ಮ್ಯರಿಗೂ ಸಹ **ವಾಹನವು.** ಲಕ್ಷ್ಮ್ಯರೂ ಅನಪಾಯಿನಿಯಾಗಿ ಸರ್ವದಾ ಸರ್ವೇಶ್ವರ ನೊಂದಿಗೇ ಇರುವವರಿಂದ, ಯಾವಾಗ ವಿಷ್ಣುವಿಗೆ ವಾಹನವೋ ಆಗ ಲಕ್ಷ್ಮ್ಯರಿಗೂ ಸಹ ವಾಹನವಾಗಲೇಬೇಕು. ಹೀಗೆ ಕೈಙ್ಕರ್ಯವಾ ಡುವ ವೈನತೇಯನು ಸಾಧಾರಣನಲ್ಲವೆಂದು ತಿಳಿಸುವದಕ್ಕಾಗಿ **ಯೇ ವಾತ್ಮಾ** ಎಂಬ ಪ್ರಯೋಗವು. **ವೇದ**ಗಳೇ ಈತನಿಗೆ ಶರೀರವಾದು ದರಿಂದಲಾಗಲಿ **ಅಥವಾ ವೇದ**ಗಳಿಗೆ ಈತನು ಅಭಿಮಾನದೇವತೆಯಾ ದುದರಿಂದಲಾಗಲಿ, **ವೇದಾತ್ಮಾ** ಎಂದು ಹೇಳಬಹುದು ಇದರಿಂದ ಈತನು ಸರ್ವಜ್ಞನೆಂದು ಹೇಳಿದಂತಾಯಿತು. (1) "**ವೈನತೇಯಶ್ಚ ಪಕ್ಷಿಣಾಂ**" ಎಂದು ಸ್ವಾಮಿಯು ಅರ್ಜುನನಿಗೆ ತನ್ನ ವಿಭೂತಿ ವಿಸ್ತಾರ ತ್ರ್ಯಾಯವನ್ನು ತಿಳಿಸುವಾಗ ತಾನು ಪಕ್ಷಿಗಳಲ್ಲೆಲ್ಲಾ ಶ್ರೇಷ್ಠವಾದ ವೈನ

(1) ಗೀತೆ 10. 30.

ತೇಯ ಶರೀರಕನೆಂದು ಹೇಳಿಕೊಂಡಿದುದರಿಂದ, ಗರುಡನು ಪಕ್ಷಿಗಳಲ್ಲೆಲ್ಲಾ ಶ್ರೇಷ್ಠನು. ಸುವರ್ಣದೋಪಾದಿಯಲ್ಲಿರುವ ಸುಪರ್ಣಗಳುಳ್ಳವನಾದುದರಿಂದಲೂ, (1) "**ಸಾಗರಸ್ಯಾಸ್ಯ ಲಂಘನೆ ಶಕ್ತಿಸ್ಯಾದ್ವೈನತೇಯಸ್ಯ**" ಸಾಗರವನ್ನು ದಾಟಲು ಶಕ್ತಿಯು ವೈನತೇಯನಿಗುಂಟು ಎಂಬ ಸೀತಾವಾಕ್ಯದಿಂದಲೂ, "**ಗರುಡಾ ನಿಲಯೋ ಶೈಘ್ರ್ಯಂ,**" ಗರುಡನಿಗೆ ಬಹು ಶೀಘ್ರವಾಗಿ ಸಂಚರಿಸುವ ಶಕ್ತಿಯಿರುವದರಿಂದಲೂ, ಆತನು ಪಕ್ಷಿಶ್ರೇಷ್ಠನು. ಆರ್ತರಾದ ಭಕ್ತರ ಪರಿಪಾಲನೆಗೆ ಉಪಯುಕ್ತವಾದ ತ್ವರೆಯುಳ್ಳ ಸಂಚಾರವುಳ್ಳವನಾಗಿ ಸ್ವಾಮಿಗೂ ಲಕ್ಷ್ಮಿಗೂ ಸಹ ಯೋಗ್ಯನಾದ ವಾಹನವು. ಈ ತ್ವರೆಯೂ ಕೂಡ ಗಜೇಂದ್ರಮೋಕ್ಷಾವಸರದಲ್ಲಿ ಸಾಕಾಗದೆ, (2) "**ಸಹ ಸಾವತೀರ್ಯ ಸಗ್ರಾಹಮಾಶು ಸರಸಃ ಕೃಪಯೋಜ್ಜಹಾರ**" ಬೇಗ ಗರುಡನಿಂದಿಳಿದು ತಾವೇ ಬೇಗ ಹೋಗಿ ಸರಸ್ಸಿನಿಂದ ಗಜೇಂದ್ರನನ್ನು ಮೊಸಳೆಯೊಂದಿಗೆ ಕೃಪಯಾ ಮೇಲಕ್ಕೆ ಎತ್ತಿದರೆಂದು ಹೇಳಿರುತ್ತದೆ. ಇದೂ ಅಲ್ಲದೆ ವಿನತೆಯ ಸುತನಾಗಿ ಅಮೃತಕಲಶವನ್ನು ತಂದು ಮಹಾ ಸಾಹಸ ತೋರಿದುದರಿಂದಲಾಗಲಿ ಅಥವಾ ಲಕ್ಷ್ಮಣನ ನಾಗಾಸ್ತ್ರಬಂಧನವನ್ನು ಬಿಡಿಸಿದುದರಿಂದಾಗಲಿ, ವಿಷಗೇಶ್ವರನು; ಅಂಥವನೇ ಈ ಲಕ್ಷ್ಮಿಗೂ ವಾಹನವು.

ಈ ಸಂದರ್ಭದಲ್ಲಿ ಇನ್ನೊಂದು ಸ್ವಾರಸ್ಯವೂ ತೋರಿಬರುತ್ತದೆ. ನಿತ್ಯವಿಭೂತಿಯು ಶುದ್ಧ ಸತ್ವಮಯವಾಪುದರಿಂದ, ಅಲ್ಲಿ ಈರ್ಷ್ಯಾಸೂಯೆಗಳಿಗೆ ಅವಕಾಶವೇ ಇಲ್ಲವು. ಇಂತಪ ಹೇಯಗುಣಗಳೆಲ್ಲಾ ಕರ್ಮ ಬಲದಿಂದ ರಜೋಗುಣ ತಮೋಗುಣ ಪ್ರಾಬಲ್ಯವುಳ್ಳ ನಮ್ಮಲ್ಲಿ ಉಂಟೇವಿನಾ, ನಿತ್ಯವಿಭೂತಿಯಲ್ಲಿರುವ ನಿತ್ಯ ಮುಕ್ತರುಗಳಲ್ಲಿ ಸುತರಾಂ ಇಲ್ಲವು. ಅವರುಗಳಲ್ಲಿ ಪರಮಾತ್ಮನಲ್ಲಿ ತೋರುವ ಪರಸ್ಪರಾನುರಾಗವೇ ಉಂಟೆಂದು ತೋರ್ಪಡಿಸುವ ಹಾಗೆ, ಇಲ್ಲಿ ವಿರುದ್ಧ ಧರ್ಮಗಳುಳ್ಳ ಶೇಷನೂ ಗರುಡನೂ ನಿತ್ಯವಿಭೂತಿಯಲ್ಲಿ ಲಕ್ಷ್ಮಿಗೆ ಕೈಙ್ಕರ್ಯವನ್ನೆಸಗುತ್ತಾ ಪರಸ್ಪರಾನುರಾಗ ವಿಶಿಷ್ಟರಾಗಿರುತ್ತಾರೆಂಬುವದನ್ನೂ, ಲಕ್ಷ್ಮೀನಾರಾಯಣರ ಸಾನ್ನಿಧ್ಯದಿಂದ ನಿತ್ಯವಿಭೂತಿಯ

---

(1) ರಾಮಾ. ಸುಂ. 39. 26. (2) ಭಾಗ. 8. 3. 33.

ಮಹಿಮೆಯು ಅಂಥಾದ್ದೆಂಬುವದನ್ನೂ ಸಹ ಊಹಿಸಬಹುದು. ಈ ಲೀಲಾ ವಿಭೂತಿಯಲ್ಲೇ ಸತ್ತ್ವೋದ್ರೇಕವುಳ್ಳ ಐಶ್ವರ್ಯಮಗಳಲ್ಲೇ ಪರಸ್ಪರ ವೈರವುಳ್ಳ ಮೃಗಗಳು ಪರಮ ಮೈತ್ರಿಯಿಂದ ವಾಸ ಮಾಡುತ್ತಿದ್ದವೆಂಬುವದನ್ನು ಕೇಳಿರುವೆವು.

ಯಾವಾಗ ನಿತ್ಯರೂ ಮುಕ್ತರೂ ಸಹ ಲಕ್ಷ್ಮಿಗೆ ಕೈಙ್ಕರ್ಯಪರರೆಂದು ಹೇಳಲ್ಪಟ್ಟಿತೋ, ಆಗ ಅವರಿಗೆಲ್ಲಾ ಲಕ್ಷ್ಮಿಯೂ ನಿಯಾಮಕಳೆಂದೂ, ಅವರೆಲ್ಲಾ ನಿಯಾಮ್ಯವರ್ಗಕ್ಕೆ ಸೇರದವರೆಂದೂ ಹೇಳಿದಂತಾಯಿತು. ಶ್ರೀ ಯತಿವರ್ಯರು ಈ ಅಭಿಪ್ರಾಯವನ್ನು ತಮ್ಮ ಶ್ರೀ ವೈಕುಂಠಗದ್ಯದಲ್ಲಿ "**ಶೇಷ ಶೇಷಾಶನಾದಿ ಸರ್ವಂ ಪರಿಜನಂ ಭಗವತ ಸತ್ತದವಸ್ಥೋಚಿತ ಪರಿಚರ್ಯಾಯಾಂ ಆಜ್ಞಾಪಯನ್ತ್ಯಾ ಶ್ರಿಯಾಸಹಾಸೀನಂ**" ಸಮಸ್ತ ಪರಿಜನರನ್ನೂ ಸರ್ವೇಶ್ವರನಿಗೆ ಆಯಾಕಾಲದಲ್ಲಿ ಬೇಕಾದ ಮತ್ತು ಯೋಗ್ಯವಾದ ಪರಿಚರ್ಯೆಯಲ್ಲಿ ಆಜ್ಞಾಪಿಸುವ ಲಕ್ಷ್ಮಿಯೊಂದಿಗೆ ಸಿಂಹಾಸನದಲ್ಲಿ ಕೂತಿರುವ ಸರ್ವೇಶ್ವರನನ್ನು" ಎಂಬ ವಾಕ್ಯದಿಂದ ತೋರ್ಪಡಿಸಿರುತ್ತಾರೆ.

4. **ಯವನಿಕಾ ಮಾಯಾಜಗನ್ಮೋಹಿನೀ** ಜಗತ್ತುಗಳನ್ನೆಲ್ಲಾ ಭ್ರಮಿಸುವಹಾಗೆ ಮಾಡುವಪ್ರಕೃತಿಯೇ ಒಂದು ಪರದೆಯು. ತೆರೆಯ ಈಚೆಯಲ್ಲಿನಿಂತು ಇಂದ್ರಜಾಲ ಮಹೇಂದ್ರಜಾಲ ವಿದ್ಯೆಗಳನ್ನು ತೋರ್ಪಡಿಸುವ ಹಾಗೆ ಲೀಲಾವಿಹಾರದಲ್ಲಿ ಸರ್ವೇಶ್ವರನು ಹೇಗೆ ಅನುರಕ್ತನೋ, ಹಾಗೆಯೇ ಈ ಸರ್ವೇಶ್ವರಿಯೂ ಅನುರಕ್ತಳು ಎಂಬ ಭಾವದಿಂದ, **ಯವನಿಕಾ** ಎಂದು ಪ್ರಯೋಗವಿರಬಹುದು; ಅಥವಾ ಪ್ರಕೃತಿಯಿಂದ ಆಚ್ಛಾದಿತವಾಗಿರುವದರಿಂದ, ಪದಾರ್ಥಗಳ ನೈಜಸ್ಥಿತಿಯೂ, ಚೇತನನ ದಿವ್ಯಸ್ವರೂಪವೂ, ನಿಯನ್ತೃವಾದ ಈಶ್ವರನ ಶೇಷಿತ್ವವು ಒಂದೂ ಗೋಚರವಾಗದಿರುವದರಿಂದಲಾಗಲಿ, ಯವನಿಕಾ ಎಂಬ ಪ್ರಯೋಗವಿರಬಹುದು. ಈಶ್ವರನು ದಯಪಾಲಿಸಿರುವ ಕರಣಕಳೇಬರಾದಿಗಳು ಸ್ವಾಮಿಯನ್ನು ಹೊಂದಲುಪಯುಕ್ತವಾದ ಸಾಮಗ್ರಿಗಳಾಗಿರುವಾಗ, ಈ ತೆರೆಯಿಂದ ಆಚ್ಛಾದಿತನಾಗಿ ಆ ದೇಹೇಂದ್ರಿಯಾದಿಗಳನ್ನು ದುರುಪಯೋಗಪಡಿಸಿ ದುರವಸ್ಥೆಯನ್ನು ಹೊಂದುವನು ಎಂಬ ಭಾವವು ತೋರಿಬರುತ್ತದೆ.

ಸರ್ವೇಶ್ವರನು ತನ್ನ ಸಂಕಲ್ಪಮೂಲಕವಾಗಿ ಅಜಿತ್ತಿಗೆ ವೈಜಿತ್ರ್ಯತೆಯನ್ನು ಕಲ್ಪಿಸಿ ವಿಧ ವಿಧ ಗುಣಗಳನ್ನಾರೋಪಿಸಿ ಅವುಗಳಿಗೆ ಭೋಗ್ಯಭಾವವನ್ನುಂಟುಮಾಡಿ, ತಮ್ಮತಮ್ಮ ಕರ್ಮಾನುಗುಣವಾಗಿ ಸುಖದುಃಖಗಳ ಮೂಲಕ, ಅವುಗಳನ್ನನುಭವಿಸುವ ಭೋಕ್ತೃಭಾವವನ್ನು ಚೇತನರುಗಳಲ್ಲುಂಟುಮಾಡಿ, ತಾನು ಹೇಗೆ ಎಲ್ಲಾದಕ್ಕೂ ಪ್ರೇರಕನಾಗಿ ನಿಂತಿರುತ್ತಾನೋ, ಹಾಗೆಯೇ ಈ ಲಕ್ಷ್ಮಿಯೂಕೂಡ ಈ ಪ್ರಕೃತಿಯೆಂಬ ಯವನಿಕಾ ಮೂಲಕ ಕರ್ಮಾನುಗುಣಪ್ರೇರಕಳೆಂಬುವ ಭಾವವೂ ಸೂಚಿಸಲ್ಪಟ್ಟಿತು.

ಯಾವಾಗ ಪ್ರಕೃತಿಯ ಆಚ್ಛಾದನೆಯಿಂದ ಜ್ಞಾನ ಸಚಿತ್ಕೀಚಕ ಉಂಟಾಯಿತೋ ಒಡನೇ ಭ್ರಾಮಕವೂ ಉಂಟಾಗುತ್ತದೆ. ಆದುದರಿಂದಲೇ ಇಲ್ಲಿ ಪ್ರಕೃತಿಯು ಜಗನ್ಮೋಹಿನಿಯು ಎಂದು ಹೇಳಲ್ಪಟ್ಟಿತು. ಅದೂ ಅಲ್ಲದೆ ಪ್ರಕೃತಿ ಸೃಷ್ಟಿಯ ವಿಚಿತ್ರತೆಯನ್ನೆಲ್ಲಾ ಚನ್ನಾಗಿ ಪರಿಶೀಲಿಸಿದುದಾರೆ ಜಗನ್ಮೋಹಿನಿಯು ಎಂಬುವದು ಸುವ್ಯಕ್ತವಾಗುತ್ತದೆ.

"ಮಾಯಾಂತುಪ್ರಕೃತಿ ವಿದ್ಧಿ ಮಾಯಿನಂತು ಮಹೇಶ್ವರಂ" ಎಂದರೆ ಮಾಯಾಶಬ್ದವನ್ನು ಸತ್ವ ರಜಸ್ತಮೋಗುಣಗಳಿಂದ ಕೂಡಿದ ಪ್ರಕೃತಿಯೆಂದೂ, ಆ ಮಾಯೆಯನ್ನು ಶರೀರವಾಗಿ ಉಳ್ಳವನನ್ನೇ ಸರ್ವೇಶ್ವರನೆಂದು ತಿಳಿ ಎಂದೂ ಶ್ವೇತಾಶ್ವೇತರೋಪನಿಷತ್ತಿನಲ್ಲಿ ಹೇಳಿರುವದರಿಂದ, ಇಲ್ಲಿ ಮಾಯಾಶಬ್ದಕ್ಕೆ ಪ್ರಕೃತಿಯೆಂದೇ ಅರ್ಥವು. ಶ್ರೀ ಯತಿವರ್ಯರೂ ಕೂಡ ಸರ್ವೇಶ್ವರನನ್ನು ಕುರಿತು ಪ್ರಕೃತಿ ಸಂಬಂಧವನ್ನು ತಪ್ಪಿಸು ಎಂದು ಶರಣಾಗತಿಗದ್ಯದಲ್ಲಿ ಪ್ರಾರ್ಥಿಸುವಾಗ **" ಭಗವತ್ಸ್ವರೂಪ ತಿರೋಧಾನಕರೀಂ ವಿಪರೀತಜ್ಞಾನಜನನೀಂ ಸ್ವವಿಷಯಾಯಾಶ್ಚ ಭೋಗ್ಯ ಬುದ್ಧೇರ್ಜನನೀಂ ದೈವೀಂ ಗುಣಮಯೀಂ ಮಾಯಾಂ "** ಎಂಬಲ್ಲಿ ಈ ಮಾಯೆಯಾದ ಪ್ರಕೃತಿಯು ಭೋಗ್ಯಬುದ್ಧಿ ಜನನಿಯೆಂದು ಹೇಳಲ್ಪಟ್ಟಿರುತ್ತದೆ. **ಈ ಜಗನ್ಮೋಹಿನೀ** ಒಂಬ ಪ್ರಯೋಗದಿಂದ ವಿಚಿತ್ರ ವಿವಿಧಭ್ರಮೆಯನ್ನುಂಟುಮಾಡುವ ಹಾಗೆ ಇರುವ ಜಗತ್ಸೃಷ್ಟಿಗೆ, ಈ ಪ್ರಕೃತಿಯು ಮೂಲಭೂತವಾದ ಉಪಕರಣವೆಂದೂ ಹೇಳಲ್ಪಟ್ಟಿತು.

ಆದುದರಿಂದ **“ ಯವನಿಕಾ ಮಾಯಾ ಜಗಸ್ಮೋಹಿನೀ ”** ಎಂಬ ಪ್ರಯೋಗದಿಂದ ಲಕ್ಷ್ಮಿಗೂ ಸಹ, ಸರ್ವೇಶ್ವರನ ಹಾಗೆ, ಲೀಲಾವಿಭೂತಿಯ ಸೃಷ್ಟಿ ಸ್ಥಿತಿ ಲಯಾದಿಗಳಲ್ಲಿ ಅನ್ವಯ ಉಂಟೆಂಬುವದು ವ್ಯಕ್ತಪಡುತ್ತದೆ.

4. ಬ್ರಹ್ಮೇಶಾದಿ ಸುರ ವ್ರಜ ಸ್ಯದಯಿತ ಸ್ತ್ವದ್ದಾಸ ದಾಸೀ ಗಣಃ—ಚತುರ್ಮುಖಬ್ರಹ್ಮ, ರುದ್ರ, ಇಂದ್ರ, ಯಮ, ವರುಣ, ಮೊದಲಾದ ದೇವತೆಗಳ ಸಮೂಹವೆಲ್ಲಾ ನಿನಗೆ ದಾಸ ದಾಸಿಯರ ಸಮೂಹವು. ಇಲ್ಲಿ ದಾಸಿಯರು ಎಂದು ಹೇಳಿರುವದರಿಂದ ಈ ದೇವತೆಗಳ ಪತ್ನಿಗಳಾದ ಸರಸ್ವತಿ, ಪಾರ್ವತಿ, ಶಚೀ ಮೊದಲಾದವರೆಲ್ಲಾ ಲಕ್ಷ್ಮಿಯ ದಾಸೀಗಣಕ್ಕೆ ಸೇರಿದವರೆಂಬಭಿಪ್ರಾಯವು. ಈ ದೇವತೆಗಳೆಲ್ಲಾ ತಮ್ಮತಮ್ಮ ಲೋಕಗಳಿಗೆ ಅಧಿಪರಾಗಿ, ಅವರುಗಳೆಲ್ಲಾ ಲಕ್ಷ್ಮಿಗೂ ಕೂಡ ಶೇಷಭೂತರಾದ ಪ್ರಯುಕ್ತ, ಅವರವರುಗಳ ಪತ್ನಿಗಳೊಂದಿಗೆ ದಾಸಭೂತರು ಎಂಬಭಿಪ್ರಾಯವು. **“ ಏತೌದ್ವೌ ವಿಬುಧ ಶ್ರೇಷ್ಠೌ ಪ್ರಸಾದ ಕ್ರೋಧಸಮ್ಭವೌ । ಮುದಾದರ್ಶಿತ ಪನ್ಥಾನೌ ಸೃಷ್ಟಿ ಸಂಹಾರ ಕಾರಕೌ ॥ ”** ಇಲ್ಲಿ ದೇವಶ್ರೇಷ್ಠರಾದ ಚತುರ್ಮುಖ ರುದ್ರರಿಬ್ಬರೂ ಪ್ರಸಾದ ಕ್ರೋಧದಿಂದ ಉತ್ಪನ್ನರಾಗಿ, ತನ್ನಿಂದ ನಿಯಮಿಸಲ್ಪಟ್ಟ ಇತಿಕರ್ತವ್ಯತೆಯುಳ್ಳವರಾಗಿ, ಸೃಷ್ಟಿ ಸಂಹಾರರೂಪ ಕರ್ಮಗಳುಳ್ಳವರಾಗಿದ್ದಾರೆಂದು ಹೇಳಿರುವದರಿಂದ, ಇಂತಹ ದೇವಶ್ರೇಷ್ಠರೂ ಕೂಡ ತಮ್ಮ ಪತ್ನಿಯರೊಂದಿಗೆ ದಾಸಭೂತರು. ರುದ್ರನು ಮಾಡಿರುವ ಮಂತ್ರರಾಜ ಪದಸ್ತೋತ್ರದಲ್ಲಿ **“ ದಾಸಭೂತಾ ಸ್ಸ ಹ ಸ್ಸರ್ವೇ ಹ್ಯಾತ್ಮಾನಃ ಪರಮಾತ್ಮನಃ ”** ಪರಮಾತ್ಮನಿಗೆ ಎಲ್ಲಾ ಜೀವಾತ್ಮರೂ ದಾಸಭೂತರೆಂದು ಹೇಳಿರುತ್ತದೆ. ಇನೂ ಅಲ್ಲದೆ ಬ್ರಹ್ಮ ರುದ್ರಾದಿಗಳಿಗೆ ವಿಷ್ಣುವೇ ಆರಾಧ್ಯನೆಂಬುವದು ಅನೇಕ ಕಡೆಗಳಲ್ಲಿ ಪ್ರತಿಪಾದಿಸಲ್ಪಟ್ಟಿರುತ್ತದೆ. ವಿಷ್ಣುಸಹಸ್ರನಾಮ ಫಲಶ್ರುತಿಯಲ್ಲಿ:— **“ ಪಾರ್ವತ್ಯುವಾಚ, ಕೇನೋಪಾಯೇನ ಲಘುನಾ ವಿಷ್ಣೋರ್ನಾಮ ಸಹಸ್ರಕಂ । ಪಠ್ಯತೇ ಪಂಡಿತೈರ್ನಿತ್ಯಂ ಶ್ರೋತು ಮಿಚ್ಛಾಮ್ಯ ಹಂ ಪ್ರಭೋ ॥ ”** ಎಂದು ಪಾರ್ವತಿಯು ತನ್ನ ಪತಿಯನ್ನು ಕುರಿತು ವಿಷ್ಣುಸಹಸ್ರನಾಮವನ್ನು ಸಂಗ್ರಹವಾಗಿ ಪಠಿಸುವ ಕ್ರಮವನ್ನು ತಿಳಿಸಬೇಕು ಮಹಾಪ್ರಭೋ ಎಂದು ಪ್ರಾರ್ಥಿಸಲು,

“ ಶ್ರೀರಾಮರಾಮ ರಾಮೇತಿ ರಮೆ ರಾಮೇ ಮನೋರಮೇ। ಶ್ರೀ ಸಹಸ್ರನಾಮ ತತ್ತುಲ್ಯಂ ” ಎಂದು ರಾಮನಾಮ ಜಪವು ಅದಕ್ಕೆ ಸಮಾನವಾದುದೆಂದು ರುದ್ರನು ಉತ್ತರ ಕೊಟ್ಟ ಹಾಗೆ ಹೇಳಿರುತ್ತದೆ. ಹಾಗೆಯೇ ಬ್ರಹ್ಮನಿಗೂ,

ಯುಗಕೋಟಿ ಸಹಸ್ರಾಣಿ ವಿಷ್ಣು ಮಾರಾಧ್ಯ ಪದ್ಮಭೂಃ।
ಪ್ರಾಪ್ತವಾ ನಿತಿ ಶುಶ್ರುಮ ಸ್ತ್ರಿಲೋಕ್ಯಧಾತೃತ್ವಂ ॥

“ ಚತುರ್ಮುಖನು ಅನೇಕಕಾಲ ವಿಷ್ಣುವನ್ನು ಆರಾಧಿಸಿ ಮೂರು ಲೋಕಕ್ಕೂ ಬ್ರಹ್ಮಪಟ್ಟವನ್ನು ಹೊಂದಿದನೆಂದು ಕೇಳಿರುವೆವು ” ಎಂಬುವದರಿಂದ ಬ್ರಹ್ಮನೂ ಸರ್ವೇಶ್ವರನಿಗೆ ದಾಸನು ಎಂಬುವದು ವ್ಯಕ್ತಪಡುತ್ತದೆ.

ಯಾವಾಗ ಇಂತಹ ಮಹಾನುಭಾವರಾಗಿ ದಿವ್ಯಪದವಿಯುಳ್ಳವರೇ ತಮ್ಮ ಪತ್ನಿಯರೊಂದಿಗೆ ದಾಸವರ್ಗಕ್ಕೆ ಸೇರಿದರೋ, ಆವಾಗ ಮಾನುಷವರ್ಗಕ್ಕೆ ಸೇರಿದ ಸ್ತ್ರೀ ಪುರುಷರೂ, ತಿರ್ಯಕ್ಕುಗಳೂ ಮೊದಲಾದವರೆಲ್ಲಾ ದಾಸಭೂತರೆಂಬುವದು ಕೈಮುತಿಕ ನ್ಯಾಯಸಿದ್ಧವು ಎಂಬಭಿಪ್ರಾಯದಿಂದ, ಅದನ್ನು ಇಲ್ಲಿ ಹೇಳಲಿಲ್ಲವು. ಮಹಾರಾಜರಿಗೆ ಮಂತ್ರಿಗಳೇ ದಾಸಭೂತರೆಂದರೆ ಇನ್ನು ಇತರ ಪ್ರಜೆಗಳೆಲ್ಲಾ ದಾಸವರ್ಗಕ್ಕೆ ಸೇರಿದವರೆಂದು ಬೇರೆ ಹೇಳಬೇಕೆ? ಅರ್ಥಾತ್ ಸಿದ್ಧವೆಂಬ ಭಾವವು. ಇದರಿಂದ ಲೀಲಾವಿಭೂತಿಯು ಸರ್ವಚೇತನರಿಗೂ ಶೇಷಿಯು ಎಂಬುವದು ತೋರಿಬರುತ್ತದೆ. ಇದರಿಂದ **“ ಅಸ್ಯೇಶಾನಾ ಜಗತೋ ವಿಷ್ಣುಪತ್ನೀ ”** ಎಂಬ ಶ್ರುತ್ಯರ್ಥವು, ಪ್ರತಿಪಾದಿಸಲ್ಪಟ್ಟಿತು.

ಶ್ರೀ ಮಹಾವಿಷ್ಣುವು ಅನೇಕ ಬ್ರಹ್ಮಾಂಡಗಳಿಗೆ ನಾಯಕನು. ಪ್ರತಿಯೊಂದು ಅಂಡದ ವ್ಯಷ್ಟಿಸೃಷ್ಟಿಕ್ರಮಕ್ಕಾಗಿಯೂ ಬಬ್ಬೊಬ್ಬ ಬ್ರಹ್ಮನನ್ನೂ, ಪ್ರಳಯಕಾರ್ಯಕ್ಕೆ ಬಬ್ಬೊಬ್ಬ ರುದ್ರನನ್ನೂ ನಿರ್ಮಾಡುವುದಾಗಿ, ಅವುಗಳ ಪಾಲನಕಾರ್ಯಕ್ಕೆ ವಿಷ್ಣುರೂಪದಿಂದ ನಿಂತಿರುವನೆಂದೂ ಶಾಸ್ತ್ರಗಳಿಂದ ತೋರಿಬರುತ್ತದೆ. ಆದುದರಿಂದ ಬ್ರಹ್ಮರುದ್ರಾದಿಗಳು ನಮ್ಮಹಾಗೆ ಜೀವಕೋಟಿಗೆ ಸೇರಿದವರು; ಅವರುಗಳಿಗೂ ನಮ್ಮಹಾಗೆಯೇ ರಜೋಗುಣ ತಮೋಗುಣ ವಿಶಿಷ್ಟವಾದ ಶರೀ

ರಗಳೇ ವಿನಾ, ಅಪ್ರಾಕೃತ ಶರೀರಗಳಿಲ್ಲವು; ಅವರುಗಳಿಗೆ ಇನ್ನೂ ಮುಕ್ತಿಯಿಲ್ಲವು; ಆದುದರಿಂದ ಮುಕ್ತಿಯನ್ನು ಕೊಡುವ ಶಕ್ತಿ ಅವರುಗಳಿಗಿಲ್ಲವು. ಇದರಿಂದ ಮೋಕ್ಷಾರ್ಥಿಗೆ ಅವರುಗಳು, ಆರಾಧ್ಯ ದೇವತೆಗಳಲ್ಲವು; ಅವರೂ ಕೂಡ ನಮ್ಮ್ರಪಾಗೆ ಇನ್ನೂ ಕರ್ಮವಶ್ಯರು. ಅವರುಗಳು ಸರ್ವೇಶ್ವರನೆಂಬ ಭ್ರಾಂತಿಯಿಂದಾರಾಧಿಸುವದು ಹೇಗೆ ಅಸಂಗತವಾದುದೋ ಹಾಗೆಯೇ ಅವರ ಪತ್ನಿಯರನ್ನೂ ಲಕ್ಷ್ಮೀ ಎಂಬ ಭಾವನೆಯಿಂದ ಆರಾಧಿಸುವದು ಅಯುಕ್ತವೆಂದು ಸೂಚಿಸಲು **"ಸದಯಿತಃ"** ಎಂಬ ಪ್ರಯೋಗವು.

ಇಷ್ಟುದೂರ ಶ್ರುತಿ ಮೊದಲಾದ ಪ್ರಮಾಣಗಳಿಂದ ಲಕ್ಷ್ಮಿಯ ಮಹಿಮೆಯನ್ನು ವ್ಯಕ್ತಪಡಿಸುವದು ಹಾಗಿರಲಿ. ಆಕೆಯ **"ಶ್ರೀ"** ಎಂಬ ನಾಮಧೇಯವೇ ಆಕೆಗಿರುವ ಸರ್ವಮಹಿಮೆಯನ್ನೂ ಉಪದೇಶಿಸುತ್ತದೆ:—

"ಶೃಣಾತಿ ನಿಖಿಲಂ ದೋಷಂ ಶ್ರೀಣಾತಿಚ ಗುಣೈರ್ಜಗತ್।
ಶ್ರೀಯತೇ ಚಾಖಿಲೈರ್ನಿತ್ಯಂ ಶ್ರಯತೇಚ ಪರಂಪದಂ॥"

ಇವೇ ಮೊದಲಾದ ವಾಕ್ಯಗಳಿಂದ ಶ್ರೀ ಶಬ್ದಕ್ಕೆ ನಿರುಕ್ತಿಯು ಹೇಳಲ್ಪಟ್ಟಿರುತ್ತದೆ.

ಶ್ರೀ ಶಬ್ದವು ನಾಲ್ಕು ಧಾತುಗಳಿಂದ ಉಂಟಾದುದಾಗಿ, ಆರುವಿಧ ಯೋಜನೆಯಿಂದ ಅರ್ಥ ಹೇಳಬಹುದು. ಹೇಗೆಂದರೆ:—

1. ಶ್ರೀಞ್ ಸೇವಾಯಾಂ, ಎಂಬ ಧಾತುವಿನಿಂದ, "ಶ್ರೀಯತೇ ಚೇತನೈಃ ಇತಿ ಶ್ರೀಃ" ಚೇತನರುಗಳಿಂದ ಆಶ್ರಯಿಸಲ್ಪಡುವವಳು. ಇದರಿಂದ ದಯಾ, ವಾತ್ಸಲ್ಯ, ಶಕ್ತಿ ಮೊದಲಾದವುಗಳನ್ನುಳ್ಳವಳೆಂದು ಹೇಳಲ್ಪಟ್ಟಿತು.

2. ಅದೇ ಧಾತುವಿನಿಂದಲೇ **ಶ್ರಯತೇ ಭಗವನ್ತಂ ಇತಿ ಶ್ರೀಃ** ಚೇತನರನ್ನುದ್ಧಾರ ಮಾಡುವದಕ್ಕಾಗಿ ಸ್ವಾಮಿಯನ್ನಾಶ್ರಯಿಸುವವಳು ಇಲ್ಲಿ ವಾಲ್ಲಭ್ಯಾತಿಶಯವೂ, ದಯೆಯೂ ಪುರುಷಕಾರತ್ವವೂ ಸೂಚಿಸಲ್ಪಟ್ಟವು.

3. ಶೃ ಶ್ರವಣೇ, ಎಂಬ ಧಾತುವಿನಿಂದ " ಶೃಣೋತೀತಿ ಶ್ರೀಃ " ಎಂಬುವದರಿಂದ ಆಶ್ರಿತರ ಪ್ರಾರ್ಥನೆಯನ್ನು ಕೇಳುವವಳು. ಇಲ್ಲಿ ಪರಮ ಸೌಲಭ್ಯವು ವ್ಯಕ್ತಪಟ್ಟಿತು.

4. ಅದೇ ಧಾತುವಿನಿಂದಲೇ **" ಶ್ರಾವಯತಿ ವಿಮುಖಾ ಹಿತಂ "** ಎಂಬುವದರಿಂದ ವಿಮುಖರಾದವರಿಗೂ ಹಿತವನ್ನು ಬೋಧಿಸಿ ಸರಿಯಾದ ಮಾರ್ಗಕ್ಕೆ ತರುವವಳು. ಇದರಿಂದ ಉಪಾಯಭೂತಳೆಂದು ಹೇಳಲ್ಪಟ್ಟಿತು.

5. ಶೃಹಿಂಸಾಯಾಂ ಎಂಬ ಧಾತುವಿನಿಂದ **" ಶೃಣಾತಿ ಆಶ್ರಿತಾನಾಂ ದೋಷಾನ್ "** ಆಶ್ರಿತರ ದೋಷಗಳನ್ನು ನಾಶಮಾಡುವವಳು. ಇಲ್ಲಿ ಮೋಕ್ಷಪ್ರದತ್ವವು ಸೂಚಿಸಲ್ಪಟ್ಟಿತು.

6. ಶೃವಿಸ್ತಾರೇ ಎಂಬ ಧಾತುವಿನಿಂದ **" ಶೃಣಾತಿ ಗುಣೈರಾಶ್ರಿತಾನ್ "** ಆಶ್ರಿತರ ಗುಣಗಳನ್ನು ಅಭಿವೃದ್ಧಿ ಹೊಂದಿಸುವವಳು.

ಹೀಗೆ ದಯಾ, ವಾತ್ಸಲ್ಯ, ಸೌಲಭ್ಯ, ಸೌಶೀಲ್ಯಾದಿ ಕಲ್ಯಾಣ ಗುಣ ಮಹೋದಧಿಯಾಗಿ, ಪರವ್ಯೋಮಾರಭೂವಯುಕ್ತಳಾಗಿ, ಅನುಗ್ರಹಮಯಳಾಗಿ, ಉಪಾಯೋಪೇಯ ಪುರುಷಕಾರರೂಪದಲ್ಲಿ ಚೇತನನಿಗೆ ಸರ್ವವಿಧ ಶ್ರೇಯಸ್ಸನ್ನೂ ದಯಪಾಲಿಸುವಳೆಂದು ಶ್ರೀ ಎಂಬ ನಾಮಧೇಯವೇ ತಿಳಿಸುತ್ತದೆ ಎಂದು ಹೇಳುತ್ತಾರೆ.

ಸರ್ವೇಶ್ವರನು ಹೇಗೆ ಹೇಯಪ್ರತ್ಯನೀಕನೋ ಮತ್ತು ಪಾಡ್ಗುಣ್ಯಾಪರಿಪೂರ್ಣನೋ ಹಾಗೆಯೇ ಸರ್ವೇಶ್ವರಿಯು ಎಂದು ಸಮರ್ಥನೆ ಮಾಡಿ ಹೇಳುವದಕ್ಕಾಗಿ ಮುನಿವರ್ಯರು ಭಗವತಿ ಎಂಬ ಸಂಬೋಧನೆಯನ್ನು ಪ್ರಯೋಗಿಸಿರುತ್ತಾರೆ.

ಜ್ಞಾನ ಶಕ್ತಿ ಬಲೈಶ್ವರ್ಯ ವೀರ್ಯತೇ ಜಾಂ ಸ್ಯಶೇಷತಃ ।
ಭಗವಚ್ಛಬ್ದವಾಚ್ಯಾನಿ ವಿನಾ ಹೇಯೈ ರ್ಗುಣಾದಿಭಿಃ ॥

(ವಿ. ಪು. 6. 5. 75.) ಎಂಬದಾಗಿ ಶ್ರೀ ಪರಾಶರ ಮಹರ್ಷಿಯು ಭಗವಚ್ಛಬ್ದಕ್ಕೆ ಹೇಯಗುಣರಾಹಿತ್ಯವೂ ಷಾಡ್ಗುಣ್ಯಾದಿ ಕಲ್ಯಾಣ ಗುಣ ಪೂರ್ಣತ್ವವೂ ಅರ್ಥವೆಂದು ಬೋಧಿಸಿದರು.

ಇಂತಹ ಸ್ವರೂಪ ರೂಪ ಗುಣ ವಿಭವೈಶ್ವರ್ಯಾದಿಗಳಿಂದ ಸರ್ವೇಶ್ವರನಿಗೆ ಸಮನಾದ ಸರ್ವೇಶ್ವರಿಯನ್ನು ಭಜಿಸುವದು ಸಾಧ್ಯವೇ ಎಂದು **ಭೂಮಃ ಕಥಂ ತ್ವಾಂ ವಯಂ** ಎಂಬುವದರಿಂದ ಹೇಳುತ್ತಾರೆ. ವಿಷ್ಣುಪುರಾಣಾನ್ತರ್ಗತವಾದ ಶ್ರೀ ಸ್ತುತಿಯಲ್ಲೂ **ನತೇವರ್ಣಯಿತುಂ ಶಕ್ತಾಗುಣಾ ಜಿಹ್ವಾಪಿಸೇಧಸಃ,** "ನಿನ್ನ ಕಲ್ಯಾಣಗುಣಗಳನ್ನು ವರ್ಣಿಸಲು ಚತುರ್ಮುಖನ ನಾಲಿಗೆಗೂ ಕೂಡ ಸಾಧ್ಯವಲ್ಲವು" ಎಂದು ಇಂದ್ರನು ಹೇಳುತ್ತಾನೆ. ಸರಸ್ವತಿಗೆ ಗಂಡನಾಗಿ, ನಾಲ್ಕು ನಾಲಿಗೆಗಳನ್ನುಳ್ಳವನಾಗಿ, ಲಕ್ಷ್ಮಿಯು ತನಗೆ ತಾಯಿಯಾದುದರಿಂದೇನಾದರೂ ಆಕೆಯ ಮಾಹಾತ್ಮ್ಯವನ್ನು ತಿಳಿದವನಾಗಿ ಸ್ತುತಿಸಲೇನಾದರೂ ಶಕ್ತನೋ ಎಂದರೆ ಆತನೂ ಕೂಡ ಶಕ್ತನಲ್ಲವು. ಹೀಗಿರುವಲ್ಲಿ ತಮ್ಮ ಪಾಡೇನು; ಕೈಮುತಿಕನ್ಯಾಯದಿಂದ ತಮಗೂ ಸಾಧ್ಯವಲ್ಲವೆಂಬ ಭಾವವು.

ತ್ವಾಂ ವಯಂ ಎಂದು ಒಟ್ಟಿಗೆ ಪ್ರಯೋಗಿಸಿರುವದು, ಇಂತಹ ಅಪಾರಮಹಿಮೆಯುಳ್ಳ ಶ್ರೀ ಮಹಾಲಕ್ಷ್ಮಿಯು ಎಲ್ಲಿ, ಮೃದುಪ್ರಜ್ಞೆಯುಳ್ಳ ತಾವುಗಳೆಲ್ಲಿ, ಸ್ತೋತ್ರವು ಸಾಧ್ಯವೇ ಎಂಬ ಭಾವವು. ಈ ಅಭಿಪ್ರಾಯವನ್ನೇ ಶರಣಾಗತಿ ದೀಪಿಕೆಯಲ್ಲಿ, ಶ್ರೀ ನಿಗಮಾನ್ತದೇಶಿಕರವರು ಸಮರ್ಥನೆ ಮಾಡಿ ಹೇಳಿರುತ್ತಾರೆ:—"**ಕ್ವಾಸೌ ವಿಭುಃ ಕ್ವೇವಯ ಮಿತ್ಯುಪಸತ್ತಿ ಭೀತಾನ್ನಸ್ತ್ವ ನ್ಮಹಿಮ್ನಾತ್ಮವನು ವೃತ್ತಿಪುಯೋಗ್ಯಯನ್ನಿ**" (20) ನಿರವಧಿಕಾತಿಶಯ ಸ್ವರೂಪ ರೂಪ ಗುಣ ವಿಭವೈಶ್ವರ್ಯಾದಿ ಮಹಿಮೆಗಳಿಂದ ಸರ್ವೋತ್ಕೃಷ್ಟನಾದ ಸರ್ವಜ್ಞನಾದ ಸರ್ವೇಶ್ವರನಾದ ಪ್ರಭುವೆಲ್ಲಿ; ಹೇಯಗುಣಾವಿಷ್ಟನಾಗಿ, ಮೃದುಪ್ರಜ್ಞನಾಗಿರುವ ತಾನೆಲ್ಲಿ; ಎಂಬೀಕಾರಣದಿಂದ ಆಶ್ರಯಿಸಲು ಭಯಪಟ್ಟು ಹಿಂತೆಗೆದ ಚೇತನರನ್ನು ಒಡನೆ ನೀನು ಅವರ ದೈನ್ಯತೆಯನ್ನು ನೋಡಿ ಕೃಪೆಗೈಯ್ದು, ನಿನಗೆ ಕೈಙ್ಕರ್ಯವಾಡಲು ಯೋಗ್ಯತೆಯಿಲ್ಲದಿದ್ದರೂ, ಅಂತಹ ಕೈಙ್ಕರ್ಯವನ್ನು ಮಾಡುವ ಯೋಗ್ಯತೆಯನ್ನು ಒಂದು ಕ್ಷಣದಲ್ಲಿ ಉಂಟುಮಾಡುತ್ತೀಯೆ" ಎಂದು ಹೇಳಿರುತ್ತಾರೆ.

ಇಷ್ಟೇ ಅಲ್ಲದೆ ಈ ಶ್ಲೋಕದಿಂದ ಶ್ರೀತತ್ವ ಯಾಥಾರ್ಥ್ಯವನ್ನು ಸಂಗ್ರಹಿಸಬಹುದು. ಹೇಗೆಂದರೆ:—ಕೆಲವರು, ಲಕ್ಷ್ಮ್ಯಯು ಚೇತನವಸ್ತುವೇ ಅಲ್ಲವೆಂದೂ, ಸ್ವಾಮಿಗೆ ಅಧಿಷ್ಠಾನರೂಪವಾದ ಪ್ರಕೃತಿಯೇ ಲಕ್ಷ್ಮೀ ಶಬ್ದದಿಂದ ಹೇಳಿಸಿಕೊಳ್ಳುತ್ತದೆಂದೂ ಅಭಿಪ್ರಾಯಪಡುವರು. **"ಮೂಲಪ್ರಕೃತಿರೀಶಾನೀ"** ಮೂಲಪ್ರಕೃತಿಯು ಈಶ್ವರೀ ಎಂದು ಹೇಳಿಸಿಕೊಳ್ಳುವದು" ಎಂಬ; **"ಜಗದುತ್ಪಾದಿಕಾಶಕ್ತಿ ಸ್ತವಪ್ರಕೃತಿರಿಷ್ಯತೇ। ಸೈನಾಮ ಸಹಸ್ರೈಸ್ತು ಲಕ್ಷ್ಮೀ ಶ್ರೀ ರಿತಿಕೀರ್ತ್ಯತೇ"** ಜಗತ್ತನ್ನು ಸೃಷ್ಟಿಸುವ ಶಕ್ತಿಯು ಪ್ರಕೃತಿಯು ಎಂಬದಾಗಿ ಅಜಿಜ್ಞೀಕರಿಸಲ್ಪಟ್ಟಿದೆ. ಆ ಪ್ರಕೃತಿಯೇ, ಅನೇಕ ಹೆಸರುಗಳಿಂದಲೇ, ಲಕ್ಷ್ಮೀ ಶ್ರೀ ಎಂಬದಾಗಿ ಹೇಳಿಸಿಕೊಂಡಿರುತ್ತದೆ." ಎಂಬೀ ವಾಕ್ಯಗಳು ಮೇಲಿನಭಿಪ್ರಾಯಕ್ಕೆ ಮೂಲಭೂತಗಳು. ಇನ್ನೂ ಕೆಲವರು ಸ್ವಾಮಿಯ ಶಕ್ತಿ, ದಯೆ, ಸಙ್ಕಲ್ಪ, ವಿದ್ಯಾ ಇವುಗಳು ಲಕ್ಷ್ಮಿ ಎಂದು ಹೇಳುವರು. ಈ ಅಭಿಪ್ರಾಯಗಳೆಲ್ಲಾ ಶಾಸ್ತ್ರ ಸಮ್ಮತಗಳಲ್ಲವೆಂದು ತಿಳಿಸುವದಕ್ಕಾಗಿ, **ತ್ವಾಂ, ವಯಂ** ಎಂಬ ಪ್ರಯೋಗಗಳಿಂದಲೂ, **"ಕಾನ್ತಸ್ತೆ ಪುರುಷೋತ್ತಮಃ"** ಎಂಬುವದರಿಂದಲೂ, ಲಕ್ಷ್ಮ್ಯಯೂ ಚೇತನವೆಂಬುವದು ವ್ಯಕ್ತಪಡುತ್ತದೆ. ಪ್ರಕೃತಿಯೇ ಲಕ್ಷ್ಮೀ ಎಂಬಭಿಪ್ರಾಯವು ಸರ್ವಾತ್ಮನಾ ಅಸಾಧುವೆಂಬುವದು **"ತೇ ಯುವನಿಕಾ ಮಾಯಾ"** ಎಂಬುವದರಿಂದಲೇ ತೋರಿಬರುತ್ತದೆ. **ತ್ವಾಂ ವಯಂ** ಇತ್ಯಾದಿ ಪ್ರಯೋಗ ಮಾತ್ರವೇ ಅಲ್ಲದೆ, ಉಭಯ ವಿಭೂತಿಯ ಚೇತನರೆಲ್ಲಾ **"ತ್ವದ್ದಾಸ ದಾಸೀ ಗಣಃ"** ಎಂದು ಹೇಳಿರುವದರಿಂದಲೂ, ಲಕ್ಷ್ಮ್ಯಗೆ ಚೇತನತ್ವವು ಏರ್ಪಟ್ಟಿತು. ಲಕ್ಷ್ಮ್ಯಯು ಚೇತನವಾದರೆ, ಜೀವಕೋಟಿಗೆ ಸೇರಿದವಳೇ ಅಥವಾ ಈಶ್ವರಕೋಟಿಗೆ ಸೇರಿದವಳೇ ಎಂಬ ಚರ್ಚೆಯಲ್ಲಿ, ಕೆಲವರು ಲಕ್ಷ್ಮ್ಯಯು ಜೀವಕೋಟಿಗೆ ಸೇರಿದವಳೆಂದು ಅಭಿಪ್ರಾಯಪಡುವರು. ಏಕೆಂದರೆ, **"ಸದೇವ ಸೋಮ್ಯೇದ ಮಗ್ರ ಆಸೀತ್, ಏಕಮೇವಾ ದ್ವಿತೀಯಂ"** ಎಂಬ ಛಾಂದೋಗ್ಯವಾಕ್ಯದ ಸಚ್ಛಬ್ದಕ್ಕೆ ಸರಿಯಾದ ಅರ್ಥ ಹೇಳದೆ ಜಗತ್ಕಾರಣನಾಗಿ ಈಶ್ವರನು ಒಬ್ಬನೇ ಎಂದೂ, ಲಕ್ಷ್ಮ್ಯಯೂ ಈಶ್ವರಳಾದರೆ ಈಶ್ವರದ್ವಿತ್ವವಾಗು

ವದರಿಂದ, ಜಗತ್ತಿನ ಸೃಷ್ಟಿ ಸ್ಥಿತಿ ಲಯಾದಿಗಳು ಸರಿಯಾಗಿ ನಡೆಯಲು ಪ್ರತಿಬಂಧಕವಾಗುತ್ತದೆಂದೂ, ಹೇಳುವರು. ಹಾಗೆ ಲಕ್ಷ್ಮಿಯು ಜೀವಕೋಟಿಗೆ ಸೇರಿದರೆ, ಲಕ್ಷ್ಮಿಗೆ ಅಣುತ್ವವನ್ನು ಕಲ್ಪಿಸಬೇಕಾಗುವದು. ಆದರೆ ಶ್ರೀ ವಿಷ್ಣುಪುರಾಣದಲ್ಲಿ **"ಯಥಾ ಸರ್ವಗತೋ ವಿಷ್ಣು ರ್ತಥೈವೇಯಂ ದ್ವಿಜೋತ್ತಮ"** ಎಂದು ಶ್ರೀ ಪರಾಶರರು ಲಕ್ಷ್ಮಿಗೆ ಸರ್ವೇಶ್ವರನ ಹಾಗೆ ವಿಭುತ್ವವನ್ನು ಕಂಠೋಕ್ತವಾಗಿ ಹೇಳಿರುತ್ತಾರೆ. ಆದುದರಿಂದ ಲಕ್ಷ್ಮೀ ಅಣುವು ಎಂಬುವದು ಅಪಸಿದ್ಧಾನ್ತವು. ಅದೇ ಪುರಾಣದ ಇನ್ನೊಂದು ಕಡೆಯಲ್ಲೂ, **"ತ್ವಯೈತದ್ವಿಷ್ಣುನಾ ಚಾಂಬ ಜಗದ್ವ್ಯಾಪ್ತಂ ಚರಾಚರಂ"** "ಓ ತಾಯಿಯೇ ನಿನ್ನಿಂದಲೂ ವಿಷ್ಣುವಿನಿಂದಲೂ ಈ ಚರಾಚರಗಳುಳ್ಳ ಜಗತ್ತು ವ್ಯಾಪಿಸಲ್ಪಟ್ಟಿರುತ್ತದೆ" ಎಂದಿರುವದರಿಂದ ವಿಭುತ್ವವನ್ನೇ ಹೇಳಬೇಕಾಗಿರುತ್ತದೆ. **ಜಗದ್ಧಾತ್ರೀ,** ಜಗತ್ತಿಗೆ ಧಾರಕಳೆಂದೂ **ಸರ್ವಲೋಕ ಮಹೇಶ್ವರೀಂ,** ಎಂದೂ ಪ್ರಯೋಗಗಳಿವೆ. ಶ್ರುತಿಯಲ್ಲೂ **"ಈಶಾನಾ ಜಗತೋ ವಿಷ್ಣುಪತ್ನೀ"** ಎಂದೂ **"ಈಶ್ವರೀಂಗ್ ಸರ್ವಭೂತಾನಾಂ"** ಎಂದೂ ಪ್ರಯೋಗಗಳಿವೆ.

ಹೀಗೆ ಈಶ್ವರಕೋಟಿಗೆ ಶೇರಿದವಳೆಂದೂ ಅಂಗೀಕರಿಸಿದರೂ, ಕೆಲವರು ಲಕ್ಷ್ಮಿಗೆ ನಾರಾಯಣನೊಂದಿಗೆ ಸ್ವರೂಪೈಕ್ಯವನ್ನು ಹೇಳುವರು. ಸರ್ವೇಶ್ವರನ ಅರ್ಧಭಾಗವೇ ಸ್ತ್ರೀ ಎಂದೂ, ಅಥವಾ ಕೆಲವು ವೇಳೆಗಳಲ್ಲಿ ತಾನೇ ಸ್ತ್ರೀಯಾಗುವನೆಂದೂ, ಅಥವಾ ತನ್ನ ಭೋಗಾರ್ಥವಾಗಿ ತಾನೇ ಸ್ತ್ರೀಯಾಗಿಯೂ ಆಗುವನೆಂದೂ ಹೀಗೆಲ್ಲಾ ಅಪಸಿದ್ಧಾನ್ತವನ್ನು ಬೋಧಿಸುವರು. ಇದಕ್ಕೆ ಪ್ರಮಾಣವನ್ನು **"ನರ ನಾರೀ ಮಯೋಹರಿಃ"** ಎಂದು, ಹೇಳುವರು. ಆದರೆ **"ಅಸ್ಯಾ ಮುಮಚ ಶೇಷಂಹಿ ವಿಭೂತಿರುಭಯಾತ್ಮಿಕಾ"** ಎಂಬ ವಾಕ್ಯದಲ್ಲೂ, **"ತ್ವಯೈತದ್ವಿಷ್ಣುನಾ ಚಾಂಬ ಜಗದ್ವ್ಯಾಪ್ತಂ ಚರಾಚರಂ"** ಎಂಬ ವಾಕ್ಯದಲ್ಲೂ, **ಚ** ಕಾರವನ್ನು ಪಯೋಗಿಸಿರುವದರಿಂದ **ಲಕ್ಷ್ಮಿಯೂ ನಾರಾಯಣನೂ** ಸಹ ಭಿನ್ನ ಸ್ವರೂಪವುಳ್ಳ ಈಶ್ವರೀಶ್ವರರೆಂಬುವದು ಸಿದ್ಧವು. ಶ್ರೀ ಭಾಷ್ಯಕಾರರೂ ಭಗವನ್ನಾರಾಯಣಾಭಿಮತಾ

ಯಸ್ಯಾಸ್ತೇ ಮಹಿಮಾನ ಮಾತ್ಮನ ಇವ ತ್ವದ್ವಲ್ಲಭೋಪಿ ಪ್ರಭು ರ್ನಾಲಂ ಮಾತು ಮಿಯತ್ತಯಾ ನಿರವಧಿಂ ನಿತ್ಯಾನುಕೂಲಂ ಸ್ವತಃ ।

ನುರೂಪಸ್ವರೂಪವುಳ್ಳವಳು ಲಕ್ಷ್ಮ್ಯಾಯು ಎಂದು ಹೇಳಿರುವದರಿಂದ ಸ್ವರೂಪೈಕ್ಯವಾದಗಳೆಲ್ಲವೂ ನಿರಾಕರಿಸಲ್ಪಟ್ಟವು. ಸ್ವರೂಪವು ಸಮನಾದರೂ, ಭಿನ್ನರಾದ ಆತ್ಮರೆಂಬುವನು ಇದರಿಂದ ತೋರಿಬರುತ್ತದೆ. ಆದುದರಿಂದ ಈ ಅಭಿಪ್ರಾಯಗಳಿಗೆ ವಿರೋಧವಿಲ್ಲದಹಾಗೆ **"ನರನಾರೀ ಮಯೋಹರಿಃ"** ಎಂಬ ಬ್ರಹ್ಮಪುರಾಣವಚನಕ್ಕೆ ಅರ್ಥ ಹೇಳತಕ್ಕದ್ದು ಉಚಿತವು. ಶ್ರೀ ಪರಾಶರರು ಉಪಪಾದಿಸಿರುವ,

" ದೇವ ತಿರ್ಯಙ್ಮನುಷ್ಯೇಷು ಪುನ್ನಾಮಾ ಭಗವಾ ಹರಿಃ ।
ಸ್ತ್ರೀನಾಮ್ನಾ ಶ್ರೀಶ್ಚ ವಿಜ್ಞೇಯಾ ನಾನಯೋರ್ವಿದ್ಯತೇ ಪರಂ ॥"

(ವಿ. ಪು. 9. 15.) "ದೇವತೆಗಳು, ಮೃಗಗಳು, ಮನುಷ್ಯರುಗಳಲ್ಲಿ ಪುರುಷವಾಚಕವಾದುವೆಲ್ಲಾ ಶ್ರೀಹರಿಯು, ಹಾಗೆಯೇ ಅವರುಗಳಲ್ಲಿ ಸ್ತ್ರೀವಾಚಕ ಶಬ್ದಗಳೆಲ್ಲಾ ಲಕ್ಷ್ಮ್ಯೇ ಎಂದು ತಿಳಿಯತಕ್ಕದ್ದು. ಇವರಿಬ್ಬರುಗಳಿಂದ ಅನ್ಯವಾದವು ಬೇರೆ ಇಲ್ಲವು" ಎಂಬಭಿಪ್ರಾಯವು ಬಹುಶಃ ಉಪಪಾದಿತವಾಗಿದೆ ಎಂದು ಭಾವಿಸಬಹುದು. ಈ ಅಭಿಪ್ರಾಯವೇ ಇನ್ನೊಂದುಕಡೆಯಲ್ಲೂ ಉಪಪಾದಿತವಾಗಿರುತ್ತದೆ:—**"ಯೋ ಯೋಜಗತಿ ಪುಂಭಾವಸ್ಸವಿಷ್ಣುರಿತಿ ನಿಶ್ಚಯಃ । ಯೋಯಸ್ತು ನಾರೀ ಭಾವಸ್ಯಾ ತ್ತತ್ರಲಕ್ಷ್ಮೀರ್ವ್ಯವಸ್ಥಿತಾ ॥"** ಜಗತ್ತಿನಲ್ಲಿ ಪುಂಭಾವವಿರುವದೆಲ್ಲಾ ವಿಷ್ಣುವು, ಸ್ತ್ರೀಭಾವವಿರುವದೆಲ್ಲಾ ಲಕ್ಷ್ಮ್ಯಾಯು, ಹೀಗೀಗ ನಿಶ್ಚಯವು" ಎಂಬಭಿಪ್ರಾಯವು. ಹೀಗೆ ಈ ಅಮೋಘ ಶ್ಲೋಕದಿಂದ ಶ್ರೀ ಯಾಮುನ ಮುನಿಗಳು ಅನೇಕ ಸಿದ್ಧಾನ್ತಗಳ ನಿರಾಕರಣೆಯನ್ನೂ ಸ್ವಸಿದ್ಧಾನ್ತಾಭಿಪ್ರಾಯವನ್ನೂ ಸಹ ತೋರ್ಪಡಿಸಿರುತ್ತಾರೆ. ॥೧॥

ಮುಂದಿನ ಶ್ಲೋಕದ ಅವತಾರಿಕೆಯು:—

ಯನ್ನದೇವಾ ನಮುನಯೋ ನಚಾಹಂ ನಚಶಂಕರಃ ।
ಜಾನನ್ತಿ ಪರಮೇಶಸ್ಯ ಕದ್ವಿಷ್ಣೋಃ ಪರಮಂ ಪದಂ ॥

ಕಾಂ ತ್ವಾಂ ದಾಸ ಇತಿ ಪ್ರಪನ್ನ ಇತಿ ಚ ಸ್ತೋಷ್ಯಾಮ್ಯಹಂ ನಿರ್ಭಯೋ। ಲೋಕೈಕೇಶ್ವರಿ ಲೋಕನಾಥ ದಯಿತೇ ದಾಸ್ತೇ ದಯಾಂತೇ ವಿದ೯ ॥೨॥

(ವಿ. ಪು. 1. 9. 55.) ಎಂದರೆ ದೇವತೆಗಳೇ ಆಗಲಿ, ಮುನಿಗಳೇ ಆಗಲಿ, ಶಂಕರನೇ ಆಗಲಿ, ನಾನೇ ಆಗಲಿ ಪರಮೇಶ್ವರನಾದ ವಿಷ್ಣು ವಿನ ಸರ್ವೋತ್ಕೃಷ್ಟಪದದ ವಿಷಯಾತ್ಮಕ್ರಿಯೆಯನ್ನು ಅರಿಯರು ಎಂದು ಚತುರ್ಮುಖಬ್ರಹ್ಮನ ವಚನಾನುಸಾರ, ಸರ್ವೇಶ್ವರನ ಹಾಗೆಯೇ ಅಪಾರ ಮಹಿಮೆಯುಳ್ಳ ಸರ್ವೇಶ್ವರಿಯನ್ನೂ ಸ್ತೋತ್ರಮಾಡುವದು ಸಾಧ್ಯವಿಲ್ಲವಾದರೂ, ಯಾವಾಗ ದೈನ್ಯ ಉಂಟಾಗಿ ಶರಣಾಗತಿ ಮಾಡಲ್ಪಟ್ಟಿತೋ, ಒಡನೆಯೇ ಲಕ್ಷ್ಮಿಯ ಕೃಪೆಯು ದೊರೆತು ಸ್ತೋತೃವಿನ ಕೋರಿಕೆಯು ಪೂರ್ಣವಾಗುತ್ತದೆಂದು ಹೇಳುತ್ತಾರೆ:—

ಅರ್ಥ—ಯಸ್ಯಾಃ—ಈ ಮೇಲೆ ಹೇಳಿದ ಸ್ವರೂಪ ರೂಪ ಗುಣ ವಿಭವೈಶ್ವರ್ಯಾದಿಗಳುಳ್ಳ ಯಾವ, **ತೇ**—ಲಕ್ಷ್ಮಿಯಾದ ನಿನ್ನ, **ನಿರವಧಿಂ**, ಅವಧಿ ಎಂದರೆ ಎಲ್ಲೆ, **ನಿರವಧಿಂ**—ಎಲ್ಲೆ ಇಲ್ಲದಿರುವ, **ಸ್ವತಃ**—ನೈಜವಾಗಿಯೇ, **ನಿತ್ಯಾನುಕೂಲಂ**—ಯಾವಾಗಲೂ ಅನುಕೂಲವಾಗಿರುವ, **ಮಹಿಮಾನಂ**—ಮಹಿಮೆಯನ್ನು, ಪ್ರಾಪ್ಯದೆಶೆಯಲ್ಲಿರುವದಕ್ಕೆ ಯೋಗ್ಯವಾದ ಮಹಿಮೆಯನ್ನು, **ಪ್ರಭುಃ**—ಸರ್ವಜ್ಞನಾಗಿ ಸರ್ವಶಕ್ತನಾಗಿ ಸರ್ವೇಶ್ವರನಾದ, **ತ್ವದ್ವಲ್ಲಭೋಪಿ**—ನಿನ್ನ ಪ್ರಿಯವಲ್ಲಭನಾದ ನಾರಾಯಣನೂ ಕೂಡ, **ಆತ್ಮನ ಇವ**—ತನ್ನ ಮಹಿಮೆಯನ್ನು ಹೇಗೋ ಹಾಗೆ, **ಇಯತ್ತಯಾ**—ಇಷ್ಟೆಂದು, **ಮಾತುಂ**—ಅಳತೆ ಮಾಡಲು, **ನಾಲಂ**—ಸಮರ್ಥನಲ್ಲವು. ಏಕೆಂದರೆ, ಆ ಮಹಿಮೆಯು ಅಪಾರವಾದುದಾಗಿ ಎಲ್ಲಿಯೇ ಅದಕ್ಕೆ ಇಲ್ಲದುದರಿಂದ ಅಳತೆ ಮಾಡಲು ಸಾಧ್ಯವಿಲ್ಲವೆಂದು ಮೇಲೆ **ನಿರವಧಿಂ** ಎಂದು ಪ್ರಯೋಗಿಸಿರುತ್ತಾರೆ. **ಹೇ ಲೋಕೈಕೇಶ್ವರಿ**—ಸರ್ವಲೋಕಗಳಿಗೂ ಒಬ್ಬಳಾದ ಈಶ್ವರಿಯೇ, **ಹೇ ಲೋಕನಾಥದಯಿತೇ**—ಸರ್ವಲೋಕಗಳಿಗೂ ಈಶ್ವರನಾದ ಭಗವಂತನ ಪ್ರಿಯಪತ್ನಿಯೇ, **ದಾಸ್ತೇ**—ಆಶ್ರಿತನಾದ ಪ್ರಪನ್ನನಲ್ಲಿ, **ತೇ**—ಅನುಗ್ರಹಪರಳಾದ ನಿನ್ನ, **ದಯಾಂ ವಿದ೯**—ದಯೆಯನ್ನು ತಿಳಿದವ

ನಾಗಿ, **ತಾಂ** – ಅಂತಹ ದಯಾ, ಔದಾರ್ಯ, ವಾತ್ಸಲ್ಯ, ಸೌಲಭ್ಯ, ಸೌಶೀಲ್ಯಾದಿ ಆಶ್ರಿತ ಪರಿಪಾಲನೋಪಯುಕ್ತ ಕಲ್ಯಾಣಗುಣಾಕರಳಾದ, **ತ್ವಾಂ**–ನಿನ್ನನ್ನು, **ಅಹಂ** – ನಾನು, **ದಾಸ ಇತಿ**–ದಾಸನೆಂದೂ, **ಪ್ರಪನ್ನ ಇತಿ**–ಪ್ರಪನ್ನನೆಂದೂ, **ನಿರ್ಭಯಃ**–ಭಯವಿಲ್ಲದವನಾಗಿ, **ಸ್ತೋಷ್ಯಾಮಿ**–ಸೋತ್ರವಾಡುತ್ತೇನೆ.

ತಾತ್ಪರ್ಯ—ಅಪಾರವಾದ ವಿಭವವೈಶ್ವರ್ಯಯುಕ್ತಳಾದ ಪ್ರಯುಕ್ತ ಅಂತಹ ಮಹಿಮೆಯನ್ನು ಹೊಂದಿದವಳನ್ನು ಸ್ತೋತ್ರವಾಡುವದು ಅಸಾಧ್ಯವೆಂದು ಹಿಂದೆ ಹೇಳಿದ ಅಭಿಪ್ರಾಯವನ್ನೇ ಈ ಶ್ಲೋಕದಲ್ಲೂ ಉಪಪಾದಿಸುವವರಾಗಿ, ಅಂತಹ ಮಹಿಮೆಯನ್ನು ಸಂಪೂರ್ಣವಾಗಿ ತಿಳಿಯಲು ತನಗೂ ತನ್ನ ಪತಿಯಾದ ಸರ್ವೇಶ್ವರನಿಗೂ ಕೂಡ ಸಾಧ್ಯವಿಲ್ಲವೆಂದು ಹೇಳಿ, ಆದರೂ ಆಶ್ರಿತನ ವಿಷಯದಲ್ಲಿ ಅಪಾರ ಕಾರುಣ್ಯವನ್ನು ಹೊಂದಿದವಳಾದ ಪ್ರಯುಕ್ತ, ಆಶ್ರಿತನಾದ ಪ್ರಪನ್ನನ ಸ್ತೋತ್ರವಾಡಬೇಕೆಂಬ ಕೋರಿಕೆಯನ್ನು ಸಫಲವಾಡದೆ ಇರುವದಿಲ್ಲವೆಂದು ದೃಢವಾಗಿ ನಂಬಿ ಸೋತ್ರವಾಡಲುಪಕ್ರಮಿಸಿರುತ್ತೇನೆಂದು ಹೇಳುತ್ತಾರೆ.

ಓ ಲಕ್ಷ್ಮಿಯೆ, ನಿನ್ನ **ಮಹಿಮೆಯಾದರೋ ಅಪಾರವಾದುದು,** ಅವಧಿಯಿಲ್ಲದುದು; ಅದಕ್ಕೆ ಎಲ್ಲೆ ಎಂಬುವದೇ ಇಲ್ಲವು; ಆದುದರಿಂದ ಸಿರವಧಿ ಯಾದುದು. ಆದುದರಿಂದ ಅದು ಎಷ್ಟು ಎಂದು ತಿಳಿಯುವದು ಯಾರಿಗೂ ಸಾಧ್ಯವಲ್ಲವು; **ಇಯತ್ತಯಾ ಮಾತುಂ ನಾಲಂ,** ನಾವೇನೋ **ಕರ್ಮವಶ್ಯರಾಗಿ** ತತ್ಪ್ರಯುಕ್ತ ಜ್ಞಾನಸಜಿಕ್ಕೀಚವುಳ್ಳವರಾದುದರಿಂದ, **ಅದು ಇಷ್ಟೆಂದು** ತಿಳಿಯಲು ಯೋಗ್ಯತೆ ಇಲ್ಲದವರು. ಶ್ರುತಿಗಾದರೂ ಸಾಧ್ಯವೋ ಎಂದರೆ ಅದಕ್ಕೂ ಸಾಧ್ಯವಿಲ್ಲವೆಂದು ತೋರುತ್ತದೆ. ಏಕೆಂದರೆ ಶ್ರೀ ಪರಾಶರಭಟ್ಟರು " **ನಪೃಥಗಭಿದತ್ತೆ ಶೃತಿರಪಿ** " (ಶ್ರೀಗುಣ. 28) ಎಂದು, ಅನೇಕ ಕಡೆಗಳಲ್ಲಿ ನಿನ್ನನ್ನು ಪೃಥಕ್ಕರಿಸಿಯೇ ಹೇಳದೇ ಇರುವ ಶ್ರುತಿಯು, ನಿನ್ನ ಮಾಹಾತ್ಮೆಯನ್ನು ಹೇಳಬಲ್ಲದೇ ? ಸರ್ವೇಶ್ವರನು, ಸರ್ವಜ್ಞನು, ಸರ್ವಶಕ್ತನು. ಅವನಿಗೇನಾದರೂ ಸಾಧ್ಯವೊ ಎಂದರೆ ಅವನಿಗೂ ಸಾ

ಧ್ಯವಲ್ಲವು. ಆತನು **ತ್ವದ್ವಲ್ಲಭಃ**, ನಿನ್ನ ಪರಮ ಪ್ರೀತಿಗೆ ಪಾತ್ರನು; ಆದುದರಿಂದ ಆತನಿಗೆ ನಿನ್ನ ವಿಷಯವಾದುದು, ತಿಳಿಯದೇ ಇರುವಂಥಾದ್ದು ಯಾವದೂ ಇರಲಾರದು. ಐಹಿಕದಂಪತಿಗಳು ಪರಸ್ಪರಸ್ವಭಾವಗಳನ್ನು ಮರೆವಾಚಿಡಬಹುದು. ಲಕ್ಷ್ಮೀನಾರಾಯಣರು ಲೋಕದಂಪತಿಗಳ ಹಾಗಲ್ಲವು. ಇದಲ್ಲದೆ ಪರಸ್ಪರ ಮನಸ್ಸನ್ನು ಚನ್ನಾಗಿ ತಿಳಿಯುವ ಸರ್ವಜ್ಞತೆಯು ಇಬ್ಬರಿಗೂ ಉಂಟು "**ಅಸ್ಯಾ ದೇವ್ಯಾ ಮನಸ್ತನ್ಮಿ ತಸ್ಯಚಾಸ್ಯಾಂ ಪತಿಷ್ಮಿತಂ** (ರಾ. ಸುಂ.) "ಈ ದೇವಿಯ ಮನಸ್ಸು ಆ ಶ್ರೀರಾಮನಲ್ಲೂ, ಆ ಶ್ರೀರಾಮನ ಮನಸ್ಸು ಈಕೆಯಲ್ಲೂ" ಎಂಬ ಆಂಜನೇಯನ ವಾಕ್ಯದಿಂದ ವ್ಯಕ್ತಪಡುತ್ತದೆ. ಆದುದರಿಂದ ನಿನ್ನ ಪತಿಗೆ ನಿನ್ನ ಮಹಿಮೆಯು ಚನ್ನಾಗಿ ತಿಳಿದಿರಬೇಕಲ್ಲವೇ ಎಂದರೆ ಹಾಗೂ ಅಲ್ಲವು ಆತನಿಗೆಕೂಡ ತಿಳಿಯದು. ಇಲ್ಲಿ **ತ್ವದ್ವಲ್ಲಭೋಪಿ,** ಎಂದು ಅಪಿಶಬ್ದವನ್ನುಪಯೋಗಿಸಿರುವದರಿಂದ, ಇನ್ಯಾರಿಗೋ ತಿಳಿಯದೇ ಇರಬಹುದೆಂಬ ಊಹೆಯು ತೋರಿಬರುತ್ತದೆ. ಈ ಅಭಿಪ್ರಾಯವನ್ನೇ ಶ್ರೀ ಭಾಷ್ಯಕಾರರ ಮುಖ್ಯ ಶಿಷ್ಯರಾದ ಶ್ರೀ ಕೂರನಾಥರು ತಾವು ಬರದ **ಶ್ರೀ ಸ್ತವದಲ್ಲಿ**

ದೇವಿತ್ವನ್ಮ ಹಿಮಾವಧಿರ್ನಹರಿಣಾ ನಾಪಿತ್ವಯಾಜ್ಞಾಯತೇ।
ಯದ್ಯಪ್ಯೇವ ಮಥಾಪಿನೈವ ಯುವಯೋಃಸ್ವಜ್ಞತಾಹೀಯತೇ॥

ಎಂದರೆ, "ಓ ಲಕ್ಷ್ಮಿಯೇ ನಿನ್ನ ಮಹಿಮೆಯ ಎಲ್ಲೆಯು, ಶ್ರೀಹರಿಗೂ, ನಿನಗೂ ಸಹ ತಿಳಿಯದು. ಹಾಗಾದರೆ ನಿಮ್ಮಿಬ್ಬರ ಸರ್ವಜ್ಞತೆಗೇನಾದರೂ ಕುಂದಕವೋ, ಎಂದರೆ, ಏನೊಂದೂ ಕುಂದಕವಿಲ್ಲೆಂದು ಉತ್ತರಾರ್ಧದಿಂದ ಸಮರ್ಥನೆ ಮಾಡುತ್ತಾರೆ; ಹೇಗೆಂದರೆ:-

ಯನ್ನಾಸ್ತ್ಯೇವತದಜ್ಞತಾ ಮನುಗುಣಾಂ ಸರ್ವಜ್ಞತಾಯಾವಿದು। ರ್ಯೋಷ್ಯೇವಾಂಭೋಜ ಮಿದನ್ತಯಾ ಕಿಲವಿದ ಭ್ರಾನ್ತೋ ಯ ಮಿತ್ಯುಚ್ಯತೇ॥

ಯಾವುದು ಇಲ್ಲವೋ, ಅದನ್ನು ತಿಳಿಯದೇ ಇರುವದೇ ಸರ್ವಜ್ಞತೆಗೆ ಸಾಧಕವು. ಗಗನ ಕಮಲ ಪುಷ್ಪವು ಇಲ್ಲವಾದ ವಸ್ತುವು, ಅದನ್ನು ತಿಳಿದಿರುವೆನೆಂದು ಯಾರಾದರೂ ಹೇಳಿಕೊಂಡರೆ, ಅವನು

ಭ್ರಾನ್ತನು, ಉನ್ಮತ್ತನೆಂದು ಭಾವಿಸತಕ್ಕದ್ದು. ಹಾಗೆಯೇ ಲಕ್ಷ್ಮೀ ಯ ಮಹಿಮೆಗೆ ಎಲ್ಲೆ ಎಂಬುವದು ಇಲ್ಲವಾದ ವಿಷಯವು. ಅದು ತನಗೂ ತನ್ನ ಪತಿಗೂ ತಿಳಿಯದೇ ಹೋಯಿತು ಎಂಬುವದರಿಂದ ಅವರುಗಳ ಸರ್ವಜ್ಞತೆಗೇನೂ ಹಾನಿಯಿಲ್ಲವೆಂಬ ಭಾವವು.

ಶ್ರೀ ಯತಿವರ್ಯರು ಶರಣಾಗತಿಗದ್ಯದಲ್ಲಿ "**ವಿಭವೈಶ್ವರ್ಯ ಶೀಲಾದ್ಯನವಧಿಕಾತಿಶಯಾ ಸಂಖ್ಯೇಯ ಕಲ್ಯಾಣ ಗುಣಗಣಾಂ**" ಎಂಬುವದರಿಂದ, ಲಕ್ಷ್ಮೀಯ ಮಹಿಮೆಯು ಅಪಾರವಾದುದೆಂದು ಅಪ್ಪಣೇ ಕೊಡಿಸಿರುತ್ತಾರೆ. ವೇದಾರ್ಥಸಂಗ್ರಹದಲ್ಲೂ "**ಅನವಧಿಕ ಮಹಿಮ ಮಹಿಷೀ**" "ಅವಧಿಯಿಲ್ಲದ ಮಹಿಮೆಯುಳ್ಳ ಸ್ವಾಮಿಯ ಪಟ್ಟಮಹಿಷಿಯು" ಎಂಬುದಾಗಿ ಹೇಳಲ್ಪಟ್ಟಿರುತ್ತದೆ.

ಈ ಮಹಿಮೆಯು **ಸ್ವತಃ ನಿತ್ಯಾನುಕೂಲಂ** ಎಂದರೆ ಸ್ವಭಾವತಃ ಯಾವಾಗಲೂ ಚೇತನನಿಗೆ **ಅನುಕೂಲವಾದುದು**. ಅದು ಹೇಗೆಂದರೆ:— ಈ ಉಭಯ ವಿಭೂತಿಗಳ ಶೇಷಿತ್ವವು ಇವರಿಬ್ಬರನ್ನೂ ಆಶ್ರಯಿಸಿರುತ್ತದೆ. ಈ ಅಭಿಪ್ರಾಯವು "**ಉಭಯಾಧಿಷ್ಠಾನಂ ಜೈಕಶೇಷಿತ್ವಂ**" ಎಂಬುವದರಿಂದ ವ್ಯಕ್ತಪಡುತ್ತದೆ. ಹೀಗೆ ಈ ದಂಪತಿಗಳಿಬ್ಬರೂ ಈಶ್ವರೀಶ್ವರರಾದುದರಿಂದ ಇವರುಗಳು ತಮ್ಮ ಕಾರ್ಯಭಾಗಗಳನ್ನು ವಿಭಾಗಿಸಿಕೊಂಡಿರುತ್ತಾರೆ. ಶಾಸ್ತ್ರೋಲ್ಲಂಘನ ಮಾಡಿದ ಅಪರಾಧಿಗಳನ್ನು ಶಿಕ್ಷಿಸುವ ಕಾರ್ಯವನ್ನು ಸರ್ವೇಶ್ವರನು ವಹಿಸಿರುವನಾಗಿಯೂ, ಆಶ್ರಿತರನ್ನನುಗ್ರಹಿಸುವ ಕಾರ್ಯವನ್ನು ಲಕ್ಷ್ಮೀಯು ಸ್ವೀಕರಿಸಿರುವಳಾಗಿಯೂ ಹೇಳಲ್ಪಟ್ಟಿರುತ್ತದೆ. ಈ ಅಭಿಪ್ರಾಯವು ಶ್ರೀ ಮಹಾವಿಷ್ಣು ಲಕ್ಷ್ಮೀಯವರುಗಳಿಗೆ ಸ್ವರೂಪಭೇದಾದಿಗಳನ್ನು ಪಪಾದಿಸುವ ಶ್ರೀ ಪರಾಶರಭಟ್ಟರವರ ಶ್ಲೋಕವಾದ

ಯುವತ್ವಾದೌ ತುಲ್ಯೇ ಪ ಪರವಶತಾ ಶತ್ರುಶಮನ ಸ್ಥಿರ
ತ್ವಾದೀ ಕೃತ್ವಾ ಭಗವತಿಗುಣಾ ನ್ಪ್ರಂಸ್ತ್ವಸುಲಭಾ ।
ತ್ವಯಿಸ್ತ್ರೀತ್ವೈ ಕಾಂತಾ ರ್ಮ್ರದಿಮ ಪತಿಪಾರಾರ್ಥ್ಯ ಕರು
ಣಾಕ್ಷಮಾದೀನ್ಪಾ ಭೋಕ್ತುಂ ಭವತಿಯುವಯೋ ರಾತ್ಮ
ನಿಭಿದಾ ॥೩೫॥

ಎಂದರೆ "ಯೌವನ ಮೊದಲಾದ ಗುಣಗಳು ನಿಮ್ಮಿಬ್ಬರಿಗೂ ಸಮಾನವಾಗಿದ್ದರೂ, ಪುರುಷಧರ್ಮಕ್ಕೆ ಸುಲಭವಾದ, ಇತರರಿಗೆ ವಶವಾಗದಿರೋಣವು, ಶತ್ರುನಿಗ್ರಹ, ಚಾಂಚಲ್ಯರಾಹಿತ್ಯ, ಮೊದಲಾದ ಗುಣಗಳನ್ನು ನಿನ್ನ ಪತಿಯಾದ ಭಗವಂತನಲ್ಲಿರಿಸಿ, ನಿನ್ನ ಸ್ತ್ರೀ ಸ್ವಭಾವಕ್ಕನುಗುಣವಾದ, ಮೃದುಸ್ವಭಾವ, ಪತಿವಿಧೇಯತ್ವ, ಕರುಣೆ, ಕ್ಷಮಾ ಮೊದಲಾದವುಗಳನ್ನು ನಿನ್ನಲ್ಲಿಟ್ಟುಕೊಂಡು, ಹೀಗೆ ನಿಮ್ಮಿಬ್ಬರಿಗೂ ಸ್ವಭಾವದಲ್ಲಿ ವ್ಯತ್ಯಾಸವನ್ನುಂಟುಮಾಡಿರುತ್ತೀಯೆ" ಎಂಬ ಶ್ಲೋಕದಲ್ಲಿ ಉಪಪಾದಿತವಾಗಿರುತ್ತದೆ. ಹೀಗೆ ಚೇತನನ ವಿಷಯದಲ್ಲಿ ಅನುಗ್ರಹಮಯಳಾದ ಪ್ರಯುಕ್ತ **ನಿತ್ಯಾನುಕೂಲಂ ಸ್ಪೃತಃ** ಎಂಬ ಪ್ರಯೋಗವು. ಈ ಅಭಿಪ್ರಾಯವನ್ನೇ ಶ್ರೀ ನಿಗಮಾನ್ತ ಮಹಾದೇಶಿಕರವರು ಶ್ರೀಮದ್ರಹಸ್ಯತ್ರಯಸಾರದ ತತ್ವತ್ರಯಾಧಿಕಾರದಲ್ಲಿ ಸಮರ್ಥನೆ ಮಾಡಿರುತ್ತಾರೆ.

ಇದರಿಂದ ಲಕ್ಷ್ಮಿಯಲ್ಲಿ ದುಷ್ಟನಿಗ್ರಹವೂ ಸರ್ವೇಶ್ವರನಲ್ಲಿ ಅನುಗ್ರಹವೂ ಇಲ್ಲವೆಂದು ತಾತ್ಪರ್ಯವಲ್ಲವು. ಇಬ್ಬರೂ ದುಷ್ಟನಿಗ್ರಹ ಶಿಷ್ಟಪರಿಪಾಲನೆಗಾಗಿಯೇ ಅವತಾರಗಳನ್ನು ಮಾಡಿ, ಕಂಕಣ ಬದ್ಧರಾಗಿ ಸಮರ್ಥರಾಗಿದ್ದರೂ ಬಂದು ಆಡಳಿತದಲ್ಲಿ ಈ ಎರಡುವಿಧ ಪ್ರವೃತ್ತಿಗಳೂ ಇರುವದರಿಂದ ದುಷ್ಟನಿಗ್ರಹವನ್ನು ಸರ್ವೇಶ್ವರನೂ, ಶಿಷ್ಟಪರಿಪಾಲನೆಯನ್ನೂ ಲಕ್ಷ್ಮಿಯೂ ವಿಭಾಗಿಸಿಕೊಂಡಿರುತ್ತಾರೆಂಬ ಭಾವವು. **"ಬಲಾನಿ ಸಂಕುಲಾಂಕೃತ್ವಾ ಲಂಕಾಂ ಪರಬಲಾರ್ದನಃ।**
ಮಾಂ ನಯೇದ್ಯದಿ ಕಾಕುತ್ಸ್ಥ ಸ್ತತ್ತಸ್ಯ ಸದೃಶಂಭವೇತ್॥"
ಎಂದರೆ ಶತ್ರು ಸಂಹಾರದಲ್ಲಿ ಮಹಾಸಮರ್ಥನಾದ ಶ್ರೀರಾಮನು ಸೈನ್ಯವನ್ನು ತಂದು ಲಂಕೆಯನ್ನು ಮುತ್ತಿ, ಅದನ್ನು ಮರ್ದಿಸಿ ತನ್ನನ್ನು ಕರೆದುಕೊಂಡು ಹೋದರೆ ಆಗೀಗ ಆತನ ಧೀರೋದಾತ್ತತೆಗೆ ಸದೃಶವಾದುದು ಆದೀತು" ಎಂದು ಹೇಳಿಕಳುಹಿಸಿದ ಸೀತೆಗೆ, ದುಷ್ಟನಿಗ್ರಹವೂ ತುಂಬಾ ಅಭಿಮತವೆಂಬುವದು ವ್ಯಕ್ತವಾಗುತ್ತದೆ. ಹಾಗೆಯೇ **"ಯದಿವಾ ರಾವಣಸ್ವಯಂ"** ಎಂದು ಮಹಾ ಪಾಪಿಯಾದ ರಾವಣನೂ ಕೂಡ ಶರಣಾಗತನಾದರೂ ರಕ್ಷಿಸಲ್ಪಡುವನು ಎಂದು ಹೇಳಿದವನು, ಅನುಗ್ರಹಮಯನು ಎಂಬುವದು ವ್ಯಕ್ತಪಡು

ತ್ತದೆಯಷ್ಟೇ; ಮತ್ತು ಪರಮದ್ರೋಹಿಯಾದ ಕಾಕಾಸುರನು ಶರಣಾಗತನಾದುದರಿಂದ **"ಕೃಪಯಾ ಪರ್ಯಪಾಲಯತ್"** ಎಂದು ಹೇಳಿದುದರಿಂದ, ಸರ್ವೇಶ್ವರನೂ ಮಹಾ ಕೃಪಾಶಾಲಿಯು ಎಂಬುವದು ಸಿದ್ಧವು. ಆದುದರಿಂದ ಅವರುಗಳ ಅಭಿಮತಾನುಸಾರ ಕಾರ್ಯ ವಿಭಾಗ್ಧ ಮಾಡಿಕೊಂಡಿರುತ್ತಾರೆಂದು ಭಾವಿಸತಕ್ಕದ್ದು. ಆ ಕಾರಣದಿಂದ, **ನಿತ್ಯಾನುಕೂಲಂ ಸ್ವತಃ** ಎಂಬ ಪ್ರಯೋಗವು.

ನಿತ್ಯಾನುಕೂಲಂ ಸ್ವತಃ ಎಂಬುವದಕ್ಕೆ ಇನ್ನೊಂದು ವಿಧವಾಗಿಯೂ ಅರ್ಥ ಹೇಳಬಹುದು. ಸರ್ವೇಶ್ವರನ ಜಗತ್ಸೃಷ್ಟಿ, ಸ್ಥಿತಿ, ಪಾಲನ, ಲಯಾದಿ ವ್ಯಾಪಾರಗಳಲ್ಲೂ, ಮತ್ತು ದುಷ್ಟನಿಗ್ರಹ, ಶಿಷ್ಟ ಪರಿಪಾಲನ, ಧರ್ಮಸಂಸ್ಥಾಪನ, ಆಶ್ರಿತಾಭೀಷ್ಟಪ್ರದಾನ ಇತ್ಯಾದಿ ಸರ್ವೇಶ್ವರನ ಸಕಲ ವ್ಯಾಪಾರಗಳಲ್ಲೂ, ಆ ತನಿಗೆ ಸಹಧರ್ಮಚರೀಯಾಗಿ, ಸ್ವಭಾವತಃ ಅನುಕೂಲಳಾಗಿರುವಳೆಂಬ ಭಾವವೂ ತೋರಿಬರುತ್ತದೆ. ಐಹಿಕ ಸ್ತ್ರೀಗಳಹಾಗೆ ಭಯದಿಂದ ಮಾತ್ರವೇ ಅನುಕೂಲಳಲ್ಲವು, ಸ್ವಭಾವತಃ ಅನುಕೂಲಳು. ಐಹಿಕ ಸ್ತ್ರೀಗಳಲ್ಲಿರುವ ಹಾಗೆ ಪತಿಯ ವಿಷಯದಲ್ಲಿ ಸುತರಾಂ ವೈಮನಸ್ಯವು ಇಲ್ಲವು ಎಂಬ ಭಾವವು. ತಾನು ಎಂದಿಗೂ ಪ್ರತಿಕೂಲಳಲ್ಲವೆಂದು, **" ನತೇದುಃ ಖಂ ಕರಿಷ್ಯಾಮಿ ನಿವಸಂತೀತ್ವಯಾಸಹ "** ನಿನ್ನೊಡನೆ ಇರುವಳಾಗಿ ನಿನಗೆ ಎಂದಿಗೂ ಕ್ಲೇಶವನ್ನುಂಟುಮಾಡುವದಿಲ್ಲವು " ಎಂದು ಸೀತೆಯು ಪ್ರತಿಜ್ಞೆಮಾಡಿರುತ್ತಾಳೆ. ಹೀಗೆ ಪರಸ್ಪರಾನುರಾಗವಿದ್ದು ಪತಿಗೆ ಅನುಕೂಲಳಾಗಿದ್ದರೆ ಭರ್ತಾವಾದವನು ತನ್ನ ಸತಿಯ ಮಾಹಾತ್ಮ್ಯೆಯನ್ನೆಲ್ಲಾ ಚನ್ನಾಗಿ ತಿಳಿಯುವದರಲ್ಲಿ ಸಂದೇಹವಿಲ್ಲವು. ಆದರೆ ಈ ಸಂದರ್ಭದಲ್ಲಿಯಾದರೋ ಸರ್ವೇಶ್ವರನೂ ಶ್ರೀ ಮಹಾಲಕ್ಷ್ಮಿಯ ಮಾಹಾತ್ಮ್ಯೆಯ ಎಲ್ಲೆಯನ್ನು ತಿಳಿಯದೇ ಹೋದನೆಂಬ ಭಾವವು.

ಹೀಗೆ ನಿನ್ನ ಮಹಿಮೆಯನ್ನು ಕುರಿತು ಸ್ತುತಿಸುವದು ಅಸಾಧ್ಯವಾದುದಾದರೂ, **ದಾಂತೇ ದಯಾಂತೇ ವಿದ್ಯ,** ಆಶ್ರಿತರ ವಿಷಯದಲ್ಲಿರುವ ನಿನ್ನ ಪರಮ ಕೃಪೆಯನ್ನರಿತವನಾದುದರಿಂದ, ನಿನ್ನ ಸೇವಕನಾಗಿಯೂ, ಶರಣಾಗತಿಯನ್ನನುಷ್ಠಿಸಿ ಪ್ರಪನ್ನನಾಗಿಯೂ ಇರುವ

ನಾನು ನಿರ್ಭಯವಾಗಿ ಸ್ತೋತ್ರವಾಡಲುದ್ಯುಕ್ತನಾಗಿದ್ದೇನೆ. **"ದಾಸ ಭೂತಾಸ್ಸ್ವತಸ್ಸರ್ವೆ"** ಎಂದು ಹೇಳಿರುವಹಾಗೂ, **" ಮಕಾರಸ್ತು ತಯೋದರ್ದಾಸ ಇತಿಪ್ರಣವಲಕ್ಷಣಂ"** "ಮಕಾರ ವಾಚ್ಯನಾದ ಜೀವನು ಅಕಾರ ವಾಚ್ಯನಾದ ವಿಷ್ಣುವಿಗೂ, ಉಕಾರ ವಾಚ್ಯಳಾದ ಲಕ್ಷ್ಮಿಗೂ ಶೇಷನು ದಾಸಭೂತನು ಎಂಬುವದು ಪ್ರಣವಾರ್ಥವು." ಎಂದು ಹೇಳಿರುವ ಹಾಗೂ, ಚೇತನರೆಲ್ಲರೂ ಲಕ್ಷ್ಮಿಗೆ ದಾಸಭೂತರು. ಹೀಗೆ ತಾನು ದಾಸನು ಎಂಬ ಶಾಸ್ತ್ರಜನ್ಯಜ್ಞಾನವನ್ನು ಚನ್ನಾಗಿ ಅರಿತರೆ ಪ್ರಪನ್ನನಾಗಿ ಸಾಧ್ಯೋಪಾಯವನ್ನನುಷ್ಠಿಸುವನು. ಹಾಗೆ ಪ್ರಪನ್ನನಾದ ಹೊರತು ಲಕ್ಷ್ಮೀನಾರಾಯಣರ ಕೃಪೆಯು ದೊರೆಯುವದಿಲ್ಲವು. ಇಂತಹ ಪ್ರಪನ್ನನ ವಿಷಯದಲ್ಲಿ ಲಕ್ಷ್ಮಿಯು ಕರುಣಾಮಯಳಾದುದರಿಂದಲೇ ಆತನ ಸಕಲ ಕೋರಿಕೆಗಳೂ ಸಿದ್ಧಿಸುವವು. ಹೀಗೆ ದಾನ್ತನ ವಿಷಯದಲ್ಲಿ ನಿನಗೆ ವಿಶೇಷ **ದಯೆಯು** ಎಂಬುವದನ್ನು, **ವಿದಣ,** ನಾನು ಚನ್ನಾಗಿ ತಿಳಿದಿರುವೆನು ಎಂದು ಹೇಳಿಕೊಳ್ಳುತ್ತಾರೆ. ಇಂತಹ ಲಕ್ಷ್ಮಿಯ ಸಾನ್ನಿಧ್ಯದಿಂದಲೇ ಮಹಾಪರಾಧಿಗಳನ್ನೂ ಕೂಡ ಸರ್ವೇಶ್ವರನು ರಕ್ಷಿಸುವನು. ಈ ಅಭಿಪ್ರಾಯವನ್ನು ಲಕ್ಷ್ಮೀತಂತ್ರವಾಕ್ಯವಾದ

ಲಕ್ಷ್ಮ್ಯಾ ಸಹ ಹೃಷೀಕೇಶೋ ದೇಪ್ಯಾ ಕಾರುಣ್ಯ ರೂಪಯಾ ।
ರಕ್ಷಕ ಸ್ಸರ್ವಸಿದ್ಧಾನ್ತೇ ವೇದಾನ್ತೇಷು ಚ ಗೀಯತೇ ॥

ಎಂಬುವದು ಉಪಪಾದಿಸುತ್ತದೆ. "ದೇವಿಯಾದ, ಕರುಣಾಮೂರ್ತಿಯಾದ ಲಕ್ಷ್ಮಿಯೊಡನೆ ಸೇರಿಯೇ ಹೃಷೀಕೇಶನು ರಕ್ಷಕನು ಎಂಬುವದು ಸಮಸ್ತ ಸಿದ್ಧಾನ್ತಗಳಲ್ಲೂ ವೇದಾನ್ತಗಳಲ್ಲೂ ಉಪಪಾದಿತವಾಗಿರುತ್ತದೆ" ಎಂಬುವದು ಈ ಶ್ಲೋಕಾರ್ಥವು. ಆದುದರಿಂದಲೇ **"ದಯಾಂತೇ ವಿದಣ"** ಎಂಬ ಪ್ರಯೋಗವು, ಲಕ್ಷ್ಮಿಯ ಕರುಣೆಯು ಮುಖ್ಯವಾಗಿ ಪ್ರಪನ್ನನಲ್ಲಿ ವಾಸವಾಡುತ್ತದೆಂದು ಲಕ್ಷ್ಮಿಯು ತಾನೇ ಹೇಳಿಕೊಂಡಿರುತ್ತಾಳೆ:—

ಧರ್ಮನಿತ್ಯೇ ಮಹಾಬುದ್ಧೌ ಬ್ರಹ್ಮಣ್ಯೇ ಸತ್ಯವಾದಿನಿ ।
ಪ್ರಶ್ರಿತೇ ದಾನ ಶೀಲೇಚ ಸದೈವ ನಿವಸಾಮ್ಯಹಂ ॥"

ಎಂದರೆ ಧರ್ಮವು ನಿತ್ಯವಾಗಿರುವನಲ್ಲೂ, ಮಹಾವಿಜ್ಞಾನವನ್ನು ಹೊಂದಿರುವನಲ್ಲೂ, ಬ್ರಾಹ್ಮಣನಲ್ಲೂ, ಸತ್ಯವಾದಿಯಲ್ಲೂ, ಪ್ರಪನ್ನನಲ್ಲೂ, ದಾನಶೀಲನಲ್ಲೂ ನಾನು ನಿರಂತರವಾಗಿರುವೆನು. ಇಂತಹ ಪ್ರಪನ್ನನಾದ ದಾನ್ತನು ಎಂತವನೆಂದರೆ:—

ಅನೃತಂ ಚಾಭ್ಯಸೂಯಾಚ ಕಾಮೋರ್ಥೌ ಚ ತಥಾ ಸ್ಪೃಹಾ ।
ಕ್ರೋಧಃ ಶೋಕಸ್ತಥಾ ತೃಷ್ಣಾ ಲೋಭಃ ಪೈಶುನ ಮೇವಚ ।
ಮತ್ಸರಶ್ಚ ವಿಹಿಂಸಾಚ ಪರಿತಾಪ ಸ್ತಥಾರತಿಃ ।
ಅಪಸ್ಮಾರ ಶ್ಚಾತಿವಾದ ಸ್ತಥಾ ಸಂಭಾವನಾತ್ಮನಿ ।
ಏತೈರ್ವಿಮುಕ್ತೋ ದೋಷೈರ್ಯಃ ಸದಾನ್ತಃ ಸದ್ಭಿರುಚ್ಯತೇ ।

(ಉದ್ಯೋಗ 43. 24-6.) ಎಂದು ಸನತ್ಸುಜಾತರು ಧೃತರಾಷ್ಟ್ರನಿಗೆ ಉಪದೇಶಿಸುವ ಈ ವಾಕ್ಯಗಳಲ್ಲಿರುವ ೧೮ ದುರ್ಗುಣಗಳಿಲ್ಲದವನು ದಾನ್ತನು. ಅಂತವನಲ್ಲಿ ಲಕ್ಷ್ಮ್ಯಾಯು ದಯೆಯು ಅಪಾರವಾದುದು ಎಂಬುವದನ್ನು ತಿಳಿದಿರುವೆನು ಎಂದು ಯಾವುನೇಯರು ಹೇಳುತ್ತಾರೆ:—

ಇಲ್ಲಿ **ಪ್ರಪನ್ನಃ** ಎಂದು ಹೇಳಿಕೊಂಡಿರುವದರಲ್ಲಿ ಬಂದು ಆಕ್ಷೇಪವನ್ನು ಆರೋಪಿಸಬಹುದು. ಹೇಗೆಂದರೆ:—ಶರಣಾಗತಿಗೆ ಕಾರ್ಪಣ್ಯವು ಬಂದು ಅಜ್ಞವಾಗಿ ಸರ್ವೇಶ್ವರನೇ ತನಗೆ ಗತಿಯು, ಇನ್ನು ಯಾರೂ ತನಗೆ ಗತಿಯಿಲ್ಲವೆಂದು ತನ್ನ ಭರವನ್ನೂ ಅತನಲ್ಲಿ ಸಮರ್ಪಿಸಿ, ಲಕ್ಷ್ಮ್ಯಗೂ ತಾನು ಪ್ರಪನ್ನನೆಂದು ಶ್ರೀ ಶರಣಾಗತಿಯನ್ನೂ ಮಾಡಬಹುದೋ ಎಂದರೆ, ಪರತತ್ವವೇ ಲಕ್ಷ್ಮೀನಾರಾಯಣರಾದುದರಿಂದ, ಉಭಯಾಧಿಷ್ಠಾನಂಬ್ಯೈಕ ಶೇಷಿತ್ವವೆಂಬುವ ಶ್ರೀ ಸಾತ್ವತವಚನರೀತ್ಯಾ ಬಾಧಕವಿಲ್ಲವು. ಪ್ರಪನ್ನನು ಮೊದಲು ಶ್ರೀ ಶರಣಾಗತಿಯನ್ನು ಮಾಡಿದನಂತರವೇ ಸರ್ವೇಶ್ವರನಲ್ಲಿ ಶರಣಾಗತಿಯನ್ನು ಮಾಡುವದೇ ವಿಧಾಯಿಕವು ಎಂದು ಶ್ರೀ ಯತಿವರ್ಯರು ಪೃಥುಗದ್ಯದಲ್ಲಿ ತೋರಿಸಿರುತ್ತಾರೆ. ಏಕೆಂದರೆ, ಶ್ರೀ ಭಾಷ್ಯಕಾರರೂ ಸಹ ಲಕ್ಷ್ಮ್ಯಾಯ ಕೃಪಾ ಪ್ರಭಾವವನ್ನು **ವಿದಣ್,** ಅರಿತವರಾದ ಪ್ರಯುಕ್ತ ಇತರರಿಗೂ ಸಹ ಇದೇ ಸಾಧುವಾರ್ಗವೆಂದು ತೋರ್ಪಡಿಸಿದರು. ಹೀಗೆ **ಮಾಡಿದರೇನೇ, ನಿರ್ಭಯ**ವಾಗಿ ತನ್ನ ಮನೋರಥವು ಕೂಡುತ್ತದೆಂ

ಬಭಿಪ್ರಾಯದಿಂದ **ಸ್ತೋಷ್ಯಾಮ್ಯಹಂ ನಿರ್ಭಯಃ** ಎಂದು ಹೇಳುತ್ತಾರೆ.

ಪೂರ್ಣವಾಗಿ ಸ್ತೋತ್ರವಾಡಲು ವೇದಗಳಿಗೂ ನಿತ್ಯಸೂರಿಮೊದಲಾದವರುಗಳಿಗೂ ಸಾಧ್ಯವಿಲ್ಲವು. ಹೀಗಿರುವಲ್ಲಿ ಮನುಷ್ಯನಿಂದ ಸಾಧ್ಯವೇ? ಕರ್ಮ ಅವಿದ್ಯಾದಿಗಳಿಂದ ಜ್ಞಾನಸಜ್ಜೀವನ್ನು ಹೊಂದಿರುವಾಗ ಅಲ್ಪಸ್ತುತಿ ಕೂಡ ಸಾಧ್ಯವಿಲ್ಲವು. ಯಾವಾಗ ಲಕ್ಷ್ಮಿಯನ್ನು ಆಶ್ರಯಿಸಿ ಶರಣಾಗತಿಯನ್ನು ಮಾಡಿದರೋ, ಆಗ ಪಾಪರಾಶಿಗಳೆಲ್ಲಾ ತೊಲಗಿ ಲಕ್ಷ್ಮಿಯ ಕೃಪಾಪ್ರಭಾವದಿಂದ ಅತ್ಯಧಿಕ ವಿಕಾಸವನ್ನು ಹೊಂದುವದರಿಂದ ಸ್ತುತಿಯು ಕೈಗೂಡುತ್ತದೆಂಬ ಪೂರ್ಣನಂಬಿಕೆಯಿಂದ **ಸ್ತೋಷ್ಯಾಮ್ಯಹಂ ನಿರ್ಭಯಃ** ಎಂದು ಹೇಳಿರಬಹುದು. ಆ ಕೃಪಾಪ್ರಭಾವದಿಂದಲೇ ಸ್ತುತಿಯು ಅಸ್ವಾರಸ್ಯವಾಗಿ ಶಿಷ್ಟಪರಿಗ್ರಹವಿಲ್ಲದೆ ಹೋಗುತ್ತದೆಂಬ ಭಯವೂ ಕೂಡ ಇಲ್ಲವೆಂಬಭಿಪ್ರಾಯದಿಂದಾಗಲಿ **ನಿರ್ಭಯಃ** ಎಂದು ಪ್ರಯೋಗಿಸಿರಬಹುದು.

ನಾವು ನಮ್ಮ ಕೋರಿಕೆಯನ್ನು ಹೊಂದಬೇಕಾದರೆ ಪ್ರಾರ್ಥಿಸಲ್ಪಟ್ಟವರಲ್ಲಿ ಎರಡು ಗುಣಗಳು ಮುಖ್ಯವಾಗಿರಬೇಕು;— ಅನುಗ್ರಹಿಸಲು ದಯೆಯೂ, ಕೋರಿಕೆಯನ್ನು ಸಲ್ಲಿಸಲು ಸಾಮರ್ಥ್ಯವೂ, ಇರಬೇಕು. ದಯೆಯಿದ್ದು ಸಾಮರ್ಥ್ಯವಿಲ್ಲದಿದ್ದರೂ ಸಾಧಿಸಿಕೊಡಲಾರನು; ಸಾಮರ್ಥ್ಯವೇನೋ ಇರಬಹುದು, ದಯೆ ಇಲ್ಲದಿದ್ದರೆ, ಆಗಲು ಕೋರಿಕೆಯು ಸಿದ್ಧಿಸಲಾರದು. ಆದುದರಿಂದ ದಯೆಯಿಲ್ಲದ ಬರೀ ಸಾಮರ್ಥ್ಯವೂ, ಸಾಮರ್ಥ್ಯವಿಲ್ಲದ ಬರೀ ಔದಯೆಯೂ, ಎರಡೂ ಕಾರ್ಯಕಾರಿಯಲ್ಲವು. ಆದುದರಿಂದ ಎರಡೂ ಅವಶ್ಯಕವು. **ದಯಾಂ ತೇವಿದ** ಎಂಬುವದರಿಂದ ದಯೆಯುಂಟೆಂಬುವದು ಉಕ್ತವಾಯಿತು. ಹಾಗೆಯೇ ಲಕ್ಷ್ಮೀಸಹಸ್ರನಾಮದಲ್ಲಿ "**ಕರುಣಾಂ ವೇದಮಾತರಂ**" ಎಂದೂ, ಲಕ್ಷ್ಮೀತಂತ್ರದಲ್ಲೂ "**ಕಾರುಣ್ಯರೂಪಯಾ**" ಎಂದೂ, ಹೇಳಿರುವದರಿಂದ, ಲಕ್ಷ್ಮಿಯು ಕರುಣಾಮಯಳೆಂಬುವದು ಸುಸ್ಪಷ್ಟವು. ಸಾಮರ್ಥ್ಯ ಉಂಟೆಂಬುವದನ್ನು ಮುಂದೆ ಎರಡು ಸಂಬೋಧನೆಗಳಿಂದ ತಿಳಿಸುತ್ತಾರೆ:—

ಲೋಕೈಕೇಶ್ವರಿ ಲೋಕನಾಥದಯಿತೇ—ಲೋಕಗಳಿಗೆಲ್ಲಾ ಒಬ್ಬಳಾದ ಈಶ್ವರಿಯಾಗಿ, ಸರ್ವನಿಯಂತೃತ್ವವೂ ಆಕೆಗೆ ಸರ್ವೇಶ್ವರನ ಹಾಗೆಯೇ ಇರುವದರಿಂದ ಸಾಮರ್ಥ್ಯವೂ ಉಂಟೆಂಬುವದು ತೋರಿಬರುತ್ತದೆ. ಹೀಗೆ ದಯೆಯೂ ಸಾಮರ್ಥ್ಯವೂ ಇರುವದರಿಂದ ಆಶ್ರಿತರ ಸರ್ವಾಭೀಷ್ಟಗಳನ್ನೂ ಕೊಡುವ ಯೋಗ್ಯತೆಯುಳ್ಳವಳೆಂದೂ ಹೇಳಿದಂತಾಯಿತು.

ಆದರೆ ಕೆಲವರು, ಲಕ್ಷ್ಮಿಯು ಜೀವಕೋಟಿಗೆ ಸೇರಿದವಳೆಂದೂ ಆಕೆಯು ಅಣುಭಾವವನ್ನು ಹೊಂದಿರುವದರಿಂದ ಆಕೆಗೆ ವಿಭುತ್ವವಿಲ್ಲವೆಂದೂ, ಆ ಕಾರಣದಿಂದ ಆಕೆಗೆ ಜಗತ್ಕರ್ತೃತ್ವ, ಚೇತನರ ವಿಷಯದಲ್ಲಿ ಉಪಾಯತ್ವ, ಮೋಕ್ಷಪ್ರದತ್ವಾದಿಗಳಿಲ್ಲವೆಂದು ಹೇಳುವರು. ಈ ಅಭಿಪ್ರಾಯಗಳು ಯಾವುನೇಯರಿಗೆ ಅಭಿಮತವಾದವಲ್ಲವೆಂಬ ವಿಷಯವು ಇಲ್ಲಿ ವ್ಯಕ್ತಪಡುತ್ತದೆ. ನಮ್ಮ ಯತಿವರ್ಯರ ಪ್ರಾಚಾರ್ಯರಿಗೆ ಸಮ್ಮತವಲ್ಲದ್ದನ್ನು ಅಙ್ಗೀಕರಿಸುವದು ಉಚಿತವಲ್ಲವು. ಆದುದರಿಂದ ಲೋಕನಾಥ ದಯಿತೆಯನ್ನು ಲೋಕೈಕೇಶ್ವರಿ ಎಂದೇ ಭಾವಿಸಿ, ಈಶ್ವರಕೋಟಿಯಲ್ಲೇ ಸೇರಿಸುವುದೇ ನ್ಯಾಯವು. ಇದಕ್ಕಾಗಿಯೇ ಈ ಮಹನೀಯರು ಲೋಕೈಕೇಶ್ವರಿ, ಲೋಕನಾಥದಯಿತೇ ಎಂಬ ಸಂಬೋಧನೆಗಳನ್ನು ಪ್ರಯೋಗಿಸಿರುತ್ತಾರೆ. ಲಕ್ಷ್ಮಿಗೆ ಈಶ್ವರತ್ವವು ಶ್ರುತಿಪ್ರತಿಪಾದ್ಯವು:— **"ಈಶ್ವರೀಂಗ್ ಸರ್ವಭೂತಾನಾಂ"** ಎಂಬ, **"ಅಸ್ಯೇಶಾನಾ ಜಗತೋ ವಿಷ್ಣುಪತ್ನೀ"** ಎಂಬ ವಾಕ್ಯಗಳುಂಟು. ಮೂರು ಇತಿಹಾಸಗಳೂ, ವಿಷ್ಣುಪುರಾಣವೂ ಕೂಡ ಸ್ಪುಟವಾಗಿ, ಲಕ್ಷ್ಮಿಯು ಈಶ್ವರೀ ಎಂದು ಸ್ಥಾಪಿಸುತ್ತವೆ. ವಿಷ್ಣುವಿಗೆ ಪಟ್ಟಮಹಿಷಿಯಾದುದರಿಂದಲೇ ಈ ಜಗತ್ತಿಗೆ ಈಶಾನಾ - ನಿಯಮಿಸುವ ಈಶ್ವರಳು. ಈಶ್ವರಭಾವನನ್ನು ಸ್ಥಾಪಿಸುವ ಧರ್ಮಗಳಾವುವು ಎಂಬುವದನ್ನು

"ಯೋಲೋಕತ್ರಯಮಾವಿಶ್ಯಬಿಭರ್ತ್ಯವ್ಯಯ ಈಶ್ವರಃ"

"ಯಾವನು ಮೂರುಲೋಕಗಳನ್ನು ಅನುಪ್ರವೇಶಮಾಡಿರುತ್ತಾನೋ ಅವನೇ ನಾಶರಹಿತನಾದ ಈಶ್ವರನು" ಎಂಬ ಗೀತಾಶ್ಲೋಕವು ಉಪಪಾದಿಸುತ್ತದೆ. ಅನುಪ್ರವೇಶ, ಜಗತ್ತನ್ನು ಭರಿಸುವ

ಶಕ್ತಿ ಮತ್ತು ಸ್ವಾಮ್ಯತ್ವ ಎಂದರೆ "**ಸ್ವಂ**" ಸ್ವತ್ತನ್ನು ಹೊಂದಿರುವಿಕೆ, ಇವು ಮೂರೂ ಈಶ್ವರತ್ವಕ್ಕೆ ಅಜ್ಞಗಳು. ಹಾಗೆಯೇ ಶ್ರೀ ಯಾಮುನೇಯರಾದ ಈ ಗ್ರಂಥಕರ್ತರೇ ತಾವು ರಚಿಸಿರುವ ಗೀತಾರ್ಥಸಜ್ಞ್ರಹದಲ್ಲಿ ಹೇಳಿರುತ್ತಾರೆ:—

"ವ್ಯಾಪನಾದ್ಭರಣಾತ್ಸ್ವಮ್ಯಾದನ್ಯಃ ಪಂಚದಶೋದಿತಃ"

ವ್ಯಾಪಿಸುವ ಶಕ್ತಿಯಿಂದಲೂ, ಭರಿಸುವದರಿಂದಲೂ, ಸ್ವತ್ತನ್ನು ಹೊಂದಿರುವದರಿಂದಲೂ, ಭಗವಂತನು **ಬೇರೆ**ಯಾಗಿ ವಿಲಕ್ಷಣನಾಗಿ **ಈಶ್ವರ**ನಾಗಿದ್ದಾನೆಂದು, ಈ ೧೫ನೇ ಗೀತಾಧ್ಯಾಯದಲ್ಲಿ ಹೇಳಲ್ಪಟ್ಟಿದೆ ಎಂಬ ಭಾವವು. ಇಂತಹ ಸರ್ವೇಶ್ವರನ ಪತ್ನಿಯಾಗಿ, **ಲೋಕನಾಥದಯಿತೆ** ಯಾಗಿರುವದರಿಂದ ಈಕೆಯೂಕೂಡ ಆತನ ಹಾಗೆಯೇ **ಲೋಕೈಕೇಶ್ವರಳು.** ಇವಳಿಗೂ ವ್ಯಾಪಕತ್ವ, ಭರಣಾದಿ ಸರ್ವನಿಯನ್ತೃತ್ವ, ಸ್ವಾಮ್ಯತ್ವಾದಿಗಳುಂಟೋ ಎಂದರೆ, **"ಯಥಾ ಸರ್ವಗತೋ ವಿಷ್ಣುರ್ತಥೈವೇಯಂದ್ವಿಜೋತ್ತಮ"** ಸರ್ವವನ್ನೂ ವಿಷ್ಣುವು ಹೇಗೆ ವ್ಯಾಪಿಸಿರುವನೋ, ಹಾಗೆಯೇ ಓ ಬ್ರಾಹ್ಮಣಶ್ರೇಷ್ಠನಾದ ಮೈತ್ರೇಯನೇ ಈ ಲಕ್ಷ್ಮಿಯೂಕಡ ಹಾಗೆಯೇ ಎಲ್ಲವನ್ನೂ ವ್ಯಾಪಿಸಿರುವಳು" ಎಂಬ ಶ್ರೀವಿಷ್ಣುಪುರಾಣವಾಕ್ಯವೂ, **"ಯಥಾ ಮಯಾಜಗದ್ವ್ಯಾಪ್ತಂ ಸ್ವರೂಪೇಣ ಸ್ವಭಾವತಃ। ತಥಾವ್ಯಾಪ್ತಂ ತಯಾಸರ್ವಂ ನಿಯುನ್ತ್ರೀಚತಥೇಶ್ವರೀ। ಮಚ್ಛೇಷಭೂತಾ ಸರ್ವೇಷಾಮೀಶ್ವರೀ ವಲ್ಲಭಾಮಮ। ಅಸ್ಯಾಮನುಚ ಶೇಷಂಹಿ ವಿಭೂತಿರುಭಯಾತ್ಮಕಾ"** ಎಂಬ ವಿಷ್ವಕ್ಸೇನಸಂಹಿತಾ ವಾಕ್ಯವೂ ಅನುಪ್ರವೇಶ, ನಿಯಮನತ್ವಾದಿಗಳೂ ಸಹ ಉಂಟೆಂದು ಸಮರ್ಥನೆ ಮಾಡುತ್ತದೆ. ಇಂತಹ ಸಾಮರ್ಥ್ಯವೂ ಅಂತಹ ದಯೆಯೂ ಇರುವದರಿಂದ, ಕೋರಿಕೆಯು ಪೂರ್ಣತೆಯನ್ನು ಹೊಂದುವದರಲ್ಲಿ ಈಷದಪಿ ಸಂದೇಹವಿಲ್ಲವಾದುದರಿಂದ ನಿರ್ಭಯನಾಗಿ ಪ್ರವರ್ತಿಸಿರುತ್ತೇನೆಂದು ಹೇಳಿಕೊಂಡಿರುತ್ತಾರೆ.

ಆದರೆ ಇವಳನ್ನು ಲೋಕೈಕೇಶ್ವರಿ ಎಂದು ಹೇಳಿದುದಾದರೆ, ಅನೇಕ ಆಕ್ಷೇಪಗಳಿಗೆ ಕಾರಣವಾಗುವದಿಲ್ಲವೇ ಎಂಬ ಪೂರ್ವಪಕ್ಷವನ್ನು ತರಬಹುದು. ಅವುಗಳು ಯಾವುವೆಂದರೆ:—

೧. ಅನೇಕ ಶ್ರುತಿಗಳಲ್ಲಿ ಪರಮಾತ್ಮನೊಬ್ಬನೇ ಈಶ್ವರನೆಂದು ಹೇಳಿರುತ್ತದೆ :—

"ಸದೇವ ಸೋಮ್ಯೇದ ಮಗ್ರ ಆಸೀತ್ ಏಕಮೇವಾ ದ್ವಿತೀಯಂ", **"ಏಕೋಹವೈ ನಾರಾಯಣ ಆಸೀತ್"**, **"ನತತ್ಸಮ ಶ್ಚಾಭ್ಯಧಿಕಶ್ಚ ದೃಶ್ಯತೇ"** "ಆ ಪರಮಾತ್ಮನಿಗೆ ಸಮರೂ ಅಧಿಕರೂ ಕೂಡ ಇಲ್ಲವು." **"ಯಸ್ಮಾತ್ಪರಂ ನಾಪರ ಮಸ್ತಿ ಕಿಂಚಿತ್, ತವಿಶ್ವರಾಣಾಂ ಪರಮಂ ಮಹೇಶ್ವರಂ"**, **ಕ್ಷರಾತ್ಮಾನಾ ವೀಶತೇ ದೇವ ಏಕಃ,** ಇತ್ಯಾದಿ ಶ್ರುತಿಗಳು. ನಾರಾಯಣನೊಬ್ಬನೇ ಈಶ್ವರನೆಂದು ಹೇಳುವದರಿಂದ ಲಕ್ಷ್ಮ್ಯಾಯೂ ಕೂಡ ಈಶ್ವರಳಾದರೆ ಇವುಗಳಿಗೆಲ್ಲಾ ವಿರೋಧ ಉಂಟಾಗುತ್ತದೆ ಎಂಬಾಕ್ಷೇಪವನ್ನು ತರುವರು. ಇಲ್ಲಿ ಸಚ್ಛಬ್ದವು ಪರಮಾತ್ಮನೊಬ್ಬನನ್ನೇ ಬೋಧಿಸುವುದಿಲ್ಲವು. ಚೆದಚೆತ್ತುಗಳಿಂದ ಯುಕ್ತನಾಗಿರುವ ಲಕ್ಷ್ಮೀಪತಿಯನ್ನೇ ಬೋಧಿಸುತ್ತದೆ. ಚೆದಚೆತ್ತುಗಳು ಸೂಕ್ಷ್ಮದೆಸೆಯಲ್ಲಿರುವುದಕ್ಕೆ ತಮಸ್ಸೆಂಬ ಹೆಸರು. ಈ ತಮಸ್ಸು **ಪರೇ ದೇವೇ ಏಕೀಭವತಿ** ಎಂದು ಹೇಳಿರುವ ಹಾಗೆ ಪ್ರಳಯ ದೆಸೆಯಲ್ಲಿ ತಮಸ್ಸು ಪರಮಾತ್ಮನಲ್ಲಿ ಏಕೀಭವಿಸುತ್ತದೆ ಎಂಬಭಿಪ್ರಾಯವು. ಆದರೆ ಲಕ್ಷ್ಮ್ಯಯು ಯಾವಾಗಲೂ ಅನಪಾಯನಿಯಾಗಿ ಸರ್ವೇಶ್ವರನೊಂದಿಗೇನೇ ಇರುವುದರಿಂದ, ಇವರುಗಳೊಂದಿಗೇನೆ ತ ತಮಸ್ಸು ಏಕೀಭವಿಸುತ್ತದೆಂಬ ಭಾವವು; ಈ ಅನಪಾಯಿತ್ವವಿರುವುದರಿಂದಲೇ **"ನಪೃಥಗಭಿಧತ್ತೇ ಶ್ರುತಿರಪಿ"** (ಶ್ರೀಗುಣ 28) ಶ್ರುತಿಗಳು ನಿನ್ನನ್ನು ಬೇರೆಯಾಗಿ ಹೇಳಲೇ ಇಲ್ಲವು ಎಂದು ಶ್ರೀ ಪರಾಶರಭಟ್ಟರು ಉಪದೇಶಿಸಿರುತ್ತಾರೆ. ಇದರಿಂದ ಶ್ರುತಿಯು ಎಲ್ಲಿಯೂ ಹೇಳಲೇ ಇಲ್ಲವೆಂಬ ಭಾವವಲ್ಲವು. ಒಂದೆರಡು ಕಡೆಯಲ್ಲಿ ಪರಬ್ರಹ್ಮನು ಪ್ರಳಯದೆಸೆಯಲ್ಲಿ ಲಕ್ಷ್ಮ್ಯಾಯೊಂದಿಗೆ ಇದ್ದಾನೆಂದು ಶ್ರುತಿಯಲ್ಲಿ ಹೇಳಿರುತ್ತದೆ :—**"ಆನೀದ ವಾತಗ್ಸ್ವಧಯಾ ತದೇಕಂ। ಯಸ್ಮಾದ್ಧಾನ್ಯಂ ನಪರಃಕಿಞ್ಚಿನಾಸ। ತಮ ಆಸೀ ತ್ತಮಸಾ ಗೂಢಮಗ್ರೇ ಪ್ರಕೇತಂ"** ಎಂಬೀ ಶ್ರುತಿಯ ಪ್ರಕಾರ ಸೃಷ್ಟಿಗೆ ಮೊದಲು **ಸ್ವಧಯಾ** ಎಂದರೆ ಲಕ್ಷ್ಮ್ಯಾಯೊಂದಿಗೆ ಆ ಪರಬ್ರಹ್ಮವೊಂದೇ ತಮಸ್ಸಿ

ನೊಂದಿಗೆ ಗಾಳಿಯ ಅವಶ್ಯಕತೆಯಿಲ್ಲದೆ ಇತ್ತು ಎಂಬ ಪ್ರಮಾಣವಿರುತ್ತದೆ. ಇಲ್ಲಿ **ಸ್ವಧಾ** ಶಬ್ದವು ಲಕ್ಷ್ಮೀವಾಚಕವೆಂದು ಮೋಕ್ಷಧರ್ಮದ ಶ್ರೀವಾಸವ ಸಂವಾದದಲ್ಲೂ, ವಿಷ್ಣುಪುರಾಣ, ಬ್ರಾಹ್ಮಪುರಾಣ ವಾಕ್ಯಗಳಿಂದಲೂ, ಲಕ್ಷ್ಮೀಸಹಸ್ರನಾಮ ಅಷ್ಟೋತ್ತರಗಳಿಂದಲೂ ವ್ಯಕ್ತಪಡುತ್ತದೆ. ಮೋಕ್ಷಧರ್ಮದಲ್ಲಿ ಶ್ರೀ ವ್ಯಾಸಮಹರ್ಷಿಯು ಈ ಶ್ರುತಿಯ ಉಪಬೃಹಣದಲ್ಲಿ ಈ ಅಭಿಪ್ರಾಯವನ್ನೇ ವ್ಯಕ್ತಪಡಿಸಿರುತ್ತಾರೆ :

ಅವ್ಯಕ್ತೇ ಪುರಷಂ ಯಾತೇ ಪುಂಸಿ ಸರ್ವಗತೇಪಿಚ ।
ತಮ ಏವಾ ಭವತ್ಸರ್ವಂ ನಪ್ರಜ್ಞಾಯತ ಕಿಂಚನ ।
ವಿದ್ಯಾ ಸಹಾಯವಾ೯ ದೇವೋ ವಿಷ್ವಕ್ಸೇನೋ ಹರಿಃಪ್ರಭುಃ॥

ಪ್ರಳಯಕಾಲದಲ್ಲಿ ಅಚಿತ್ತೂ ಚಿತ್ತೂ ಒಟ್ಟಿಗೆ ಸೇರಿ, ತಮುಶಬ್ದವಾಚ್ಯವಾಗಿ ಸೂಕ್ಷ್ಮದೆಸೆಯಲ್ಲಿ ಲಕ್ಷ್ಮೀಸಹಾಯಕನಾದ ಈಶ್ವರನಲ್ಲಿ ಏಕೀಭವಿಸಿತ್ತೆಂದು ಹೇಳಿರುತ್ತದೆ. ಇಲ್ಲಿ ಸ್ವಧಾ ಶಬ್ದಕ್ಕೆ ಬದಲಾಗಿ ಪರ್ಯಾಯಪದವಾದ ವಿದ್ಯಾಶಬ್ದವು ಲಕ್ಷ್ಮಿಯನ್ನು ಬೋಧಿಸುತ್ತದೆ. ಏಕಶಬ್ದಕ್ಕೆ ಲಕ್ಷ್ಮಿಯುಕ್ತನಾದ ಪರಮಾತ್ಮನೆಂಬರ್ಥವೆಂದೇ ಶ್ರೀ ವ್ಯಾಸಮಹರ್ಷಿಯು ಇನ್ನೊಂದು ಸ್ಥಳದಲ್ಲಿ **"ಏಕಾಕೀ ವಿದ್ಯಯಾ ಸಾರ್ಧಂ"** "ಲಕ್ಷ್ಮಿಯೊಂದಿಗೇ ಒಬ್ಬನಾಗಿ" ಎಂದು ಪ್ರಯೋಗಿಸಿರುತ್ತಾರೆ. **" ಶ್ರದ್ಧಯಾ ದೇವೋ ದೇವತ್ವಮಶ್ನುತೇ"** "ಲೀಲಾಸಕ್ತನಾದ ಸರ್ವೇಶ್ವರನು ಲೀಲಾ ವ್ಯಾಪಾರಗಳನ್ನು ಲಕ್ಷ್ಮಿಯೊಂದಿಗೆ ಅನುಭವಿಸುವನೆ"ಂಬ ಶ್ರುತಿವಾಕ್ಯದಿಂದ **ಲೋಕೈಕೇಶ್ವರಿ**ಯಿಲ್ಲದೆ ಜಗದ್ವ್ಯಾಪಾರವು ಸರ್ವೇಶ್ವರನಿಗೆ ರುಜಿಸದು ಎಂದು ತೋರಿಬರುತ್ತದೆ.

೨. ಈಶ್ವರದ್ವಿತ್ವವು ಜಗದ್ವ್ಯಾಪಾರ ವಿಘಾತವಾದುದು ಎಂಬುವುದು ಎರಡನೇ ಆಕ್ಷೇಪವು. ಇಬ್ಬರೂ ಸರ್ವಜ್ಞರಾಗಿ, ಪರಸ್ಪರ ಇಂಗಿತಗಳನ್ನರಿತವರಾಗಿ ಮಹಾಶುದ್ಧ ಸತ್ವಮಯಗುಣಯುಕ್ತರಾಗಿ, ಜಗತ್ತಿನ ವ್ಯಾಪಾರಗಳನ್ನು ನಡಿಸುವವರಿಂದ ಜಗದ್ವ್ಯಾಪಾರ ವಿಘಾತಕ್ಕೆ ಕಾರಣವಿರುವುದಿಲ್ಲವು. ಯಾವಾಗಲಾದರೂ ಒಂದು ಕಾಲದಲ್ಲಿ ಏಕ ಪ್ರಯತ್ನಕ್ಕೆ ಕಾರಣವಾಗಕೂಡದು ಎಂದರೆ, ಲಕ್ಷ್ಮಿಯು

ತನ್ನ ಪತಿಗೆ ತುಂಬಾ ಪ್ರಿಯಳಾಗಿ ನಾಲ್ಲಭ್ಯಾತಿಶಯವನ್ನು ಹೊಂದಿದವಳಾಗಿ, ಪತಿಶೇಷ ಭಾವವನ್ನೂ, ಪತಿಪಾರಾರ್ಥ್ಯವನ್ನೂ ಚನ್ನಾಗಿ ಅರಿತವಳಾಗಿರುವಾಗ ವೈಮನಸ್ಯಕ್ಕೆ ಅವಕಾಶತಾನೇ ಎಲ್ಲಿಯದು? ಶ್ರೀರಾಮನ ಇಷ್ಟಾನುಸಾರ, ಜಗತ್ತನ್ನೆಲ್ಲಾ ರಾಕ್ಷಸರಿಲ್ಲದ ಹಾಗೆ ಪೂಡಬೇಕೆಂಬ ಅಭಿಪ್ರಾಯವಿದ್ದುದರಿಂದಲೇ **ಅಸಂದೇಶಾತ್ತು ರಾಮ್ಯ,** ಶ್ರೀರಾಮನ ಅನುಜ್ಞೆ ಇಲ್ಲದಿರುವದರಿಂದ ಮಹಾಪರಾಧಿಯಾದ ನೀಚನಾದ ದಶಕಂಧರನನ್ನು ಭಸ್ಮವಾಡಲು ಪಾತಿವ್ರತ್ಯ ಬಲವಿದ್ದರೂ, ಭಸ್ಮವಾಡದೇ ಇದ್ದ ಮಹನೀಯಳು ಸೀತೆಯು. ಇಂತಹ ದಂಪತಿಗಳಿಗೆ ವೈಮನಸ್ಯವು ತಲೆದೋರಲು ಅವಕಾಶವೇ ಇಲ್ಲವು. ಈಶ್ವರದ್ವಿತ್ವದಿಂದ ವಿರಸವೂ, ಅನರ್ಥವೂ ಹೇಗೆ ಪ್ರಾಪ್ತವಾದೀತು? ಇಂತಹ ಆಕ್ಷೇಪಕ್ಕೆ ಕಾರಣವೇ ಇಲ್ಲವೆಂದು ತೋರಿಸುವದಕ್ಕಾಗಿಯೇ **"ನಿತ್ಯಾನುಕೂಲಂ ಸ್ಮೃತಃ"** ಎಂದು ಪ್ರಯೋಗ ಮಾಡಿರಬಹುದಾಗಿ ತೋರುತ್ತದೆ. ಸತ್ತ್ವೋದ್ರೇಕವುಳ್ಳ ಮಹಾ ಋಷಿಗಳ ಸನ್ನಿಧಿಯಲ್ಲಿ ಅನೇಕ ಕ್ರೂರಸ್ವಭಾವ ಉಳ್ಳವರೂ ಕೂಡ ಪರಮ ಸಾತ್ವಿಕರಾಗಿ ವರ್ತಿಸಿದರೆಂಬುವದಕ್ಕೆ ಇತಿಹಾಸಗಳುಂಟು. ಶ್ರೀನಾರದ ಮಹರ್ಷಿಯ ಸಾನ್ನಿಧ್ಯವು ಪಾಪಿಷ್ಠನಾದ ಕ್ಷತ್ರಬಂಧುವನ್ನು ಪರಮಸಾತ್ವಿಕನನ್ನಾಗಿ ಮಾಡಿತು. ಪ್ರಹ್ಲಾದನ ಸಾನ್ನಿಧ್ಯದಿಂದ ರಾಕ್ಷಸಬಾಲರೆಲ್ಲಾ ಪರಮಸಾತ್ವಿಕರಾಗಿ ಪ್ರಹ್ಲಾದನ ಉಪದೇಶಾನುಸಾರವಾಗಿ ವರ್ತಿಸಿದರೆಂಬ ಪುರಾಣೋಕ್ತಿ ಇರುತ್ತದೆ. ಮುಪ್ಯಾಶ್ರಮಗಳಲ್ಲಿ ಘಾತುಕ ಮೃಗಗಳು ಪರಸ್ಪರ ಮೈತ್ರಿಯಿಂದಿದ್ದವೆಂದು ಕೇಳಿರುವೆವು. ಶ್ರೀ ಸೀತಾರಾಮರ ಸಾನ್ನಿಧ್ಯದಿಂದ ಜನಗಳು ಪರಸ್ಪರ ಒಬ್ಬರನ್ನೊಬ್ಬರು ಹಿಂಸಿಸಲಿಲ್ಲವೆಂದು **"ರಾಮಮೇವಾನು ಪಶ್ಯಂತೋ ನಾಭ್ಯ ಹಿಂಸ್ಯ ಪರಸ್ಪರಂ"** ಎಂದು ಮಹರ್ಷಿಯು ಹೇಳಿರುತ್ತಾರೆ. ಆದುದರಿಂದ ಈಕೆಯು ಲೋಕೈಕೇಶ್ವರಿಯಾಗಿರುವುದು ಜಗದ್ವ್ಯಾಪಾರ ವಿಘಾತಕ್ಕೇನೂ ಕಾರಣವಾಗಲಾರದು.

೩. ಇಂತಹ ಈಶ್ವರದ್ವಿತ್ವವು ಪ್ರಪನ್ನನ ಪರಮೈಕಾಂತಿತ್ವಕ್ಕೆ ಅನುಕೂಲವಿಲ್ಲವೆಂಬುವದು ಮೂರನೇ ಆಕ್ಷೇಪವು. ಉಪಾಸ್ಯವು ಲಕ್ಷ್ಮೀಯುಕ್ತನಾದ ನಾರಾಯಣನಾದರೆ ಐಕಾಂತ್ಯಕ್ಕೆ ಭಂಗವೆಂ

ಬಭಿಪ್ರಾಯವು. ಇದು ಸರಿಯಾದಭಿಪ್ರಾಯವಲ್ಲವು. ಅನೇಕ ಕಡೆಗಳಲ್ಲಿ, ಲಕ್ಷ್ಮೀಯುಕ್ತನಾದ ನಾರಾಯಣನೇ ಉಪಾಸ್ಯನೆಂದು ಯೋಗಿಗಳು ತಿಳಿದರೆಂದು ಹೇಳಿರುತ್ತದೆ. ಲಕ್ಷ್ಮೀಯು ನಾರಾಯಣನಿಗೆ ವಿಶೇಷಣವು. ವಿಶೇಷಣದಿಂದ ಯುಕ್ತನಾದ ಪರಮಾತ್ಮನು ಉಪಾಸ್ಯನಾಗಿರುವುದರಿಂದ ಐಕಾಂತ್ಯಕ್ಕೇನೂ ಬಾಧಕವಿಲ್ಲವು. ವಿಶೇಷಣವಾಗಿಯೂ ಬಾಧಕವಾಗಬಹುದು ಎಂದರೆ, ಆಗ ಪರಮಾತ್ಮನು ಅಪ್ರಾಕೃತಿಗಳು ಹೇಳುವ ಹಾಗೆ, ನಿರ್ವಿಶೇಷವಾಗಿರಬೇಕಾಗುತ್ತದೆ. ಪ್ರಾಪ್ಯದೆಸೆಯಲ್ಲಿ ಲಕ್ಷ್ಮೀಯು ಸರ್ವೇಶ್ವರನಿಗೆ ವಿಶೇಷಣವಾಗಿರಬಹುದೆಂದು ಒಪ್ಪಿಕೊಂಡರೆ ಉಪಾಯದೆಸೆಯಲ್ಲಿಯೂ ಸವಿಶೇಷಣವಾಗಿ ಲಕ್ಷ್ಮೀಯುಕ್ತನಾದ ಸರ್ವೇಶ್ವರನೇ ಏಕೆ ಕೂಡದೆಂಬ ಆಕ್ಷೇಪ ಉಂಟಾಗಬಹುದು. ಅದೂ ಅಲ್ಲದೆ ಉಪಾಸ್ಯನಾದ ಪರಬ್ರಹ್ಮನಿಗೆ ಕಲ್ಯಾಣಗುಣಗಳು ವಿಶೇಷಣವಾಗಿರಬೇಕೆಂದು ಒಪ್ಪಿಕೊಳ್ಳುವವರಿಂದ, ಲಕ್ಷ್ಮೀಯೂ ವಿಶೇಷಣವಾಗಿರುವವರಿಂದ ಪ್ರತ್ಯವಾಯವೇನೂ ಇಲ್ಲವು. ಆದುದರಿಂದ ಐಕಾಂತ್ಯಕ್ಕೇನೂ ಬಾಧಕವಿಲ್ಲವು.

೪. ಲಕ್ಷ್ಮೀಯು ಈಶ್ವರಿಯು, ನಾರಾಯಣನು ಈಶ್ವರನು ಎಂದು ಹೇಳಿದರೆ, ಇಬ್ಬರೂ ಸಮರು ಎಂದು ಹೇಳಿದಂತಾಯಿತು. ಆದರೆ ಪರಮಾತ್ಮನಿಗೆ ಸಮರೂ ಅಧಿಕರೂ ಇಲ್ಲವೆಂದು ಹೇಳುವ ಶ್ರುತಿಗೆ ಗತಿಯೇನು? ಎಂದು ನಾಲ್ಕನೇ ಆಕ್ಷೇಪವು. ಲಕ್ಷ್ಮೀಯು **ಲೋಕೈಕೇಶ್ವರಿ** ಯಾದರೆ ಸರ್ವೇಶ್ವರನಿಗೆ ಸಮನಾಗಿರಬೇಕೆಂಬ ನಿಯಮವೇನೂ ಇಲ್ಲವಾದುದರಿಂದ, ಆಕ್ಷೇಪಕ್ಕೆ ಕಾರಣವೇ ಇಲ್ಲವು. ಲಕ್ಷ್ಮೀಯು ಸರ್ವೇಶ್ವರನಿಗೆ ಶೇಷಭೂತಳೆಂಬುವದು ವಿಷ್ಣ್ವೇನೆ ಸಂಹಿತೆಯಲ್ಲಿ ಸುವ್ಯಕ್ತವು :—**"ಮಚ್ಛೇಷ ಭೂತಾ ಸರ್ವೇಷಾಂ ಈಶ್ವರೀ ವಲ್ಲಭಾಮಮ"** ಎಂದು ಸರ್ವೇಶ್ವರನ ವಾಕ್ಯವೇ ಇರುತ್ತದೆ.

೫. ಲಕ್ಷ್ಮೀಯು ಯಾವಾಗ ಈಶ್ವರ ಕೋಟಿಗೆ ಸೇರಲಿಲ್ಲವೋ ಆಗ ಜೀವಕೋಟಿಯಲ್ಲಿ ಸೇರಿಸಿ, ಆಕೆಗೆ ಅಣುತ್ವವನ್ನೂ, ವಿಭುರಾಹಿತ್ಯವನ್ನೂ ಹೇಳುವರು. ಆಗ ಈಶ್ವರತ್ವವನ್ನು ಬೋಧಿಸುವ ಶ್ರುತಿಗಳಿಗೂ, ವಿಷ್ಣುಪುರಾಣದಲ್ಲಿ ಹೇಳುವ, ಈಶ್ವರತ್ವ,

ಧಾರಕತ್ವ, ವ್ಯಾಪಕತ್ವಾದಿಗಳಿಗೂ, ವ್ಯಾಸಮಹರ್ಷಿಯ ಅನೇಕ ಭಾರತವಚನಗಳಿಗೂ ವಿರೋಧಲುಂಟಾಗುವದಲ್ಲದೆ, ಅನೇಕ ಪೂರ್ವಾಚಾರ್ಯರುಗಳ ಸೂಕ್ತಿಗಳಿಗೂ ವಿರುದ್ಧವಾದ ಅಭಿಪ್ರಾಯವಾಗುತ್ತದೆ. ಆಗ ಮೂಲಮಂತ್ರದ ಪ್ರಣವದ ಮಕಾರದಲ್ಲಿ ಲಕ್ಷ್ಮ್ಯಾಯೂ ಸೇರಬೇಕಾಗಿ ಬರುತ್ತದೆ. ಆದರೆ ಮಹಾಜ್ಞಾನಿಗಳಾದ ಶ್ರೀವಡಕ್ಕು ತಿರುವೀಧಿ ಪಿಳ್ಳೈಯವರು ಅನುಗ್ರಹಿಸಿದ ತಿರುವಾಯ್‌ಮೊಳಿ ವಾಖ್ಯಾನವಾದ ಈಡಿನಲ್ಲಿ, ಶ್ರಿಯಃಪತಿಯೇ ಪರತತ್ವವೆಂದೂ, ಶ್ರಿಯಃ ಪತಿತ್ವವೇ ಸ್ವರೂಪ ನಿರೂಪಕ ಧರ್ಮವೆಂದೂ, ಬೋಧಿಸಲು ಹೊರಟು **"ಶ್ರಿಯಃ ಪತಿಯಾಯ್"** ಎಂದು ಪ್ರಾರಂಭಿಸಿರುತ್ತಾರೆ. ಇದಕ್ಕೆ ಶ್ರೀ ಜೀಯರವರು **"ಶ್ರಿಯಃ ಪತಿಯಾಯ್ ಇತ್ಯಾದಿ ಯಾಲೇ ಪ್ರಾಪ್ಯ ಪ್ರಾಪಕ ವಿಭೂತಿಸ್ವರೂಪಂ ಶೊಲ್ಲಿತ್ತು"** ಎಂದು ಹೇಳಿರುವದರಿಂದ ಲಕ್ಷ್ಮೀಯುಕ್ತನಾದ ನಾರಾಯಣನೇ ಉಪಾಯವೂ ಉಪೇಯವೂ ಎಂದು ಸ್ಪಷ್ಟವಾಗಿ ವಾಖ್ಯಾನ ಬರೆದಿರುತ್ತಾರೆ. ಇದೂ ಅಲ್ಲದೆ ತಿರುವಾಯ್‌ಮೊಳಿಯ 6-9-3ನೇ ಅಮೋಘ ಪಾಶುರವಾದ **"ಇಾಲತ್ತೊೀಡೇ ನಡನ್ದು ನಿನ್ರು ಜುಕ್ಕಿಡನ್ದಿರುನ್ದುಂ"** ಎಂಬುವದರಲ್ಲಿ ಅರ್ಥಸ್ವಾರಸ್ಯವು ಅರ್ಥಪಂಚಕಗಳ ಅಭಿಪ್ರಾಯಗಳನ್ನೂ. ಮೂಲಮಂತ್ರಾರ್ಥಗಳನ್ನೂ ಒಳಗೊಂಡಿರುವದರಿಂದ, ಇವುಗಳನ್ನು ವಿವರಿಸುವಾಗ ಈಡಿನಲ್ಲಿ ಬರದಿರುತ್ತಾರೇನೆಂದರೆ :—"ಅಕಾರಾರ್ಥತ್ತೈ ಸಕ್ರಮವಾಗ ವ್ಯಾಖ್ಯಾನಂ ಪಣ್ಣುಕಿರಾರ್." ಅನ ರಕ್ಷಣೈ..... ಇಪ್ಪಡಿ ರಕ್ಷಕ್ಕು ಮಿಡತ್ತಿಲ್, ನಕಶ್ಚಿನ್ನಾಪರಾಧ್ಯತಿ ಎನ್ನುಮವಳುಂ " ಎನ್ನಡಿಯಾರ್ ಇದು ಶೆಯ್ಯಾರ್ ಎನ್ನುಮವನುಂ ಕೂಡವಾಯಿತ್ತು ; ಆ ಕೈ ಯಾ ಲೆ **ಅಕಾರಂ ಮಿಥುನ ತಕ್ಕು ವಾಚಕ ಮಾಯಿತ್ತು."** ಎಂದು ಇರುತ್ತದೆ. ಇದರಭಿಪ್ರಾಯವೇನೆಂದರೆ :—ಅವರಕ್ಷಣೈ ಎಂಬ ಧಾತುವಿನಿಂದ, ಅಕಾರವು ಸರ್ವರಕ್ಷಕ ಭಾವವನ್ನು ಬೋಧಿಸುತ್ತದೆ. ಹಾಗೆ ರಕ್ಷಿಸುವವರು ಯಾರೆಂದರೆ, "ಯಾರುತಾನೇ ಈ ಲೋಕದಲ್ಲಿ ದೋಷಿಗಳಲ್ಲವು, ಆದುದರಿಂದ ಪೂಜ್ಯರು ದೋಷಿಗಳಲ್ಲೂ ಕೂಡ ಕರುಣೆಯನ್ನು ಮಾಡುವುದು ಯುಕ್ತವೆಂದು ಹೇಳಿದ ಅನುಗ್ರಹಮಯಳಾದ ಲಕ್ಷ್ಮಿ

ಯೂ ಮತ್ತು "ನನ್ನ ದಾಸರಾದ ಭಾಗವತರು ಇಂಥಾದ್ದನ್ನು ಎಂ ದಿಗೂ ಮಾಡುವದಿಲ್ಲವು" ಎಂದು ಹೇಳಿದ ಕರುಣಾಸಾಗರನಾದ ನಾ ರಾಯಣನೂ ಸೇರಿ ಹೇಳಿದಂತಾಯಿತು. ಆದುದರಿಂದ ಅಕಾರವು ಲೋಕದಂಪತಿಗಳನ್ನು ಸೂಚಿಸುತ್ತದೆ" ಎಂದು ಹೇಳುತ್ತಾರೆ. ಈ ಮಹಾನುಭಾವರ ಅಭಿಪ್ರಾಯ ಪ್ರಕಾರ ಪ್ರಣವದ ಅಕಾರದಲ್ಲೇ ಲಕ್ಷ್ಮಿಯು ಸೇರಿರುವದರಿಂದ ಈಶ್ವರನಲ್ಲೇ ಅನ್ವಯವೇ ವಿನಾ, ಮಕಾರವಾದ ಜೀವಕೋಟಿಯಲ್ಲಿ ಸೇರಲಿಲ್ಲವು. ಈ ಮೇಲೆ ಉದಾ ಹರಿಸಿರುವ ಈಡಿನ ವಾಕ್ಯಕ್ಕೆ ಶ್ರೀ ಜೀಯರವರು ಬರವ ವ್ಯಾಖ್ಯಾನ ದಲ್ಲಿ "ಅಕಾರಂ ಪ್ರಾಪ್ಯಪ್ರಾಪಕ ವಾಚಕ ಮೆನ್ನುವನಕ್ಕು ಪ್ರಮಾಣ ತ್ವೇನ, **"ಏವಮಕ್ಷರ ರೂಪೇಣ ಕಾರಣತ್ವ ಮಿಪೋದಿತಂ। ರಕ್ಷಕ ತ್ವಂಚ ಧಾತ್ವರ್ಥಾಚ್ಛೇಷಿತ್ವಂ ಪದರೂಪತಃ। ಶ್ರೀಶತ್ವಂ ವಾಚ್ಯಗತ್ಯಾಚ ಯುಜ್ಯತೇ ಪರಮಾತ್ಮನಃ।"** ಎಂದು ಹೇಳಿರುವ ದರಿಂದ ಅವರಭಿಪ್ರಾಯವೂ ಹಾಗೆಯೇ ಎಂಬುವದು ಸ್ಫುಟವಾಗಿ ವ್ಯಕ್ತಪಡುತ್ತದೆ. ಅಕಾರದಿಂದ ಪರತತ್ವವು (1) ಜಗತ್ಕಾರಣ ನೆಂದೂ, (2) ಸರ್ವರಕ್ಷಕನೆಂದೂ, (3) ಸರ್ವಶೇಷಿ ಎಂದೂ, (4) ಶ್ರಿಯಃ ಪತಿ ಎಂದೂ ತೋರಿಬರುತ್ತದೆಂದು ಬರದಿರುತ್ತಾರೆ. ಹಾಗೆ ಯೇ ಇನ್ನೊಂದು ಅಮೋಘವಾದ ಪಾಶುರವಾದ **"ಅಗಲಗಿಲ್ಲೇ"** (6.10.10.) ಎಂಬ ನಮ್ಮಾಳ್ವಾರ್ರುವರ ಪಾಶುರದಲ್ಲೂ ಹೀಗೆಯೇ ಈಡಿನಲ್ಲಿ ಬರದಿರುತ್ತಾರೇನೆಂದರೆ :—ಲಕ್ಷ್ಮಿಯು "ತ್ರಿವಿಧ ಚೇತ ನರುಕ್ಕುಂ ಸ್ವಾಮಿನಿಯುಮಾಯ್ ಉಭಯ ವಿಭೂತಿ ನಾಥನುಕ್ಕು ನಿಯಾವಿಕ್ಕೈಯು ಮಾಯ್, ಇರುಕ್ಕುಮವಳ್ ಕಿಡೀರ್..... ಸರ್ವರಕ್ಕುಮ್ ನಿಯಾವಿಕ್ಕೈ ಎನ್ನು ಮಿಡಂ ಕೊಲ್ಲಿತ್ತು" ಎಂದು ಅಪ್ಪಣೆ ಕೊಡಿಸಿರುತ್ತಾರೆ. ಇದರ ವ್ಯಾಖ್ಯಾನದಲ್ಲಿ ಶ್ರೀ ಜೀಯ ರವರು ಈ ಅಭಿಪ್ರಾಯವನ್ನೇ ಅನುಮೋದಿಸಿರುತ್ತಾರೆ. ಹೀಗೆ ಲಕ್ಷ್ಮಿಗೆ ಈಶ್ವರತ್ವ ಉಂಟೆಂಬುವದೂ, ತತ್ಪ್ರಯುಕ್ತವಾಗಿ ಜಗತ್ಕಾ ರಣತ್ವ, ಚೇತನನಿಗೆ ಪ್ರಾಪಕತ್ವ ಮೋಕ್ಷ ಪ್ರದತ್ವಗಳೆಲ್ಲಾ ಉಂ ಟೆಂಬ ಶ್ರೀ ಯಾಮುನೇಯರ ಅಭಿಪ್ರಾಯವನ್ನೇ ಶ್ರೀಯತಿವರ್ಯರೂ, ಶ್ರೀ ಕೂರೇಶರೂ, ಶ್ರೀ ಪರಾಶರ ಭಟ್ಟರೂ ಸಹ ಸಮರ್ಥನೆ ಮಾಡಿ

ಈಷತ್ಪಕ್ಷರುಣಾ ನಿರೀಕ್ಷಣ ಸುಧಾ ಸಂಧುಕ್ಷಣಾದ್ರುಕ್ಷ್ಯತೇ

ರುವ ಹಾಗೆ, ಶ್ರೀ ವಡಕ್ಕುತಿರುವೀಧಿ ಪಿಳ್ಳೈಯವರೂ ಶ್ರೀ ಅಳಿಗಿಯ ಮಣವಾಳ್ ಜೀಯರವರೂ ಸಹ ಸಮರ್ಥನೆ ಮಾಡಿರುತ್ತಾರೆ. ಈದು ದರಿಂದ ಲಕ್ಷ್ಮಿಯು ಜೀವಕೋಟಿಗೆ ಸೇರಿದವಳೆಂಬ ವಾದವು ಅವರ ಈಜೆನವರ ಅಭಿಪ್ರಾಯವಾಗಿರುತ್ತದೆ. ಅದು ಸರಿಯಾದ ಅಭಿಪ್ರಾಯವಲ್ಲವೆಂದು ತೋರಿಸುವನಕ್ಕಾಗಿ ಶ್ರೀ ನಿಗಮಾನ್ತ ಮಹಾದೇಶಿಕರವರು ಶ್ರೀಮದ್ರಹಸ್ಯತ್ರಯಸಾರದ ಎರಡನೇದಾದ ಸ್ಥಿರೀಕರಣ ಭಾಗದಲ್ಲಿ ಉಪಪಾದಿಸಿರುತ್ತಾರೆ.

೬. ಲಕ್ಷ್ಮಿಯು ಜೀವಕೋಟಿಗೆ ಸೇರಿದವಳಾದರೆ, ನಿತ್ಯಮುಕ್ತರುಗಳಿಗೆ **"ಜಗದ್ವ್ಯಾಪಾರವರ್ಜಂ"** (ಬ್ರ. ಸೂ. ೪. ೪. ೧೭.) ಎಂದು ಹೇಳಿರುವಹಾಗೆ ಲಕ್ಷ್ಮಿಗೂ ಜಗದ್ವ್ಯಾಪಾರದಲ್ಲಿ ಅನ್ವಯ ವಿಲ್ಲದಿರಬೇಕಾಗುತ್ತದೆ. ಆದರೆ, ಶ್ರುತಿ ಇತಿಹಾಸ ಪುರಾಣಗಳೂ ಲಕ್ಷ್ಮಿಗೆ ಜಗದ್ವ್ಯಾಪಾರದಲ್ಲಿ ಅನ್ವಯ ಉಂಟೆಂದು ಉದ್ಘೋಷಿಸುತ್ತವೆ. ಹಾಗೆ ಜಗದ್ವ್ಯಾಪಾರದಲ್ಲಿ ಅನ್ವಯವನ್ನುಪದೇಸಿಸುವ ಶ್ರುತಿ ವಾಕ್ಯಗಳೂ, ಇತಿಹಾಸಾದಿ ವಾಕ್ಯಗಳೂ ಮೇಲೆ ಉದಾಹರಿಸಲ್ಪಟ್ಟವೆ.

ಆದುದರಿಂದ ಇಂತಹ ಪೂರ್ವ ಪಕ್ಷಗಳೆಲ್ಲಾ ದೂರೀಕೃತವಾಗಲೆಂದೇ ಶಾಸ್ತ್ರಗಳನ್ನೆಲ್ಲಾ ಪರಿಶೀಲಿಸಿ ತತ್ವಯಾಥಾತ್ಮ್ಯವನ್ನರಿತ ಮಹಾನೀಯರಾದ ಯಾಮುನೇಯರು **ಲೋಕೈಕೇಶ್ವರಿ, ಲೋಕನಾಥ ದಯಿತೇ** ಎಂಬೀ ಎರಡು ಸಂಬೋಧನೆಗಳನ್ನುಪಯೋಗಿಸಿರುತ್ತಾರೆ.

ಲೋಕೈಕೇಶ್ವರಿಯಾಗಿ ಶಕ್ತಿಯೂ ದಯೆಯೂ ಇರುವದರಿಂದ ನಿರ್ಭಯನಾಗಿ ಸ್ತೋತ್ರವಾಡಲು ಪ್ರವರ್ತಿಸಿರುತ್ತೇನೆಂದು ಹೇಳಿಕೊಂಡಿರುತ್ತಾರೆ. ॥೨॥

ಅವತಾರಿಕೆ :—ಈ ಶ್ಲೋಕದಿಂದ ಲಕ್ಷ್ಮೀಕಟಾಕ್ಷವಿನಾ ಇಹಲೋಕ ಸುಖಗಳೇ ಆಗಲಿ, ಸ್ವರ್ಗಾದಿಭೋಗಗಳೇ ಆಗಲಿ, ಅವುಗಳನ್ನು ಪಡೆಯುವ ಉಪಾಯಗಳೇ ಆಗಲಿ, ಲಭಿಸಲಾರದೆಂದು ತಿಳಿಸುತ್ತಾರೆ.

ನಷ್ಟಂಪ್ರಾಕ್ತದಲಾಭತ ಸ್ತ್ರಿಭುವನಂ ಸಂಪ್ರತ್ಯನಂತೋ ದಯಂ ।

ಅರ್ಥ :—ಈಷತ್ಪ್ರತ್ಯರುಣಾ ನಿರೀಕ್ಷಣ ಸುಧಾ ಸಂಧುಕ್ಷಣಾತ್, ಈಷತ್ - ಸ್ವಲ್ಪವಾದ, **ತ್ಪ್ರತ್** – ಶರಣಾಗತರಿಗೆ ಕ್ಷಿಪ್ರಪ್ರಸಾದಿನಿಯಾದ ನಿನ್ನ, **ಕರುಣಾ** - ದಯೆಯಿಂದುಂಟಾದ, ಆ ದಯೆ ಎಂಥಾದ್ದೆಂದರೆ ಅನಿಷ್ಟನಿವೃತ್ತಿ ಇಷ್ಟಪ್ರಾಪ್ತಿಯನ್ನುಂಟುಮಾಡುವಂಥಾದ್ದೆಂಬಭಿಪ್ರಾಯವು, **ನಿರೀಕ್ಷಣ** - ಕಟಾಕ್ಷವೀಕ್ಷಣವೆಂಬ, **ಸುಧಾ** - ಲೋಕೋಜ್ಜೀವನಕ್ಕೆ ಸಹಕಾರಿಯಾದ ಅಮೃತದಿಂದ, **ಸಂಧುಕ್ಷಣಾತ್** - ಚನ್ನಾಗಿ ವೃದ್ಧಿಹೊಂದುವದಕ್ಕಿಂತ, **ಪ್ರಾಕ್** - ಮೊದಲು ಎಂದರೆ ನಿನ್ನ ಕೃಪಾಕಟಾಕ್ಷವುಂಟಾಗುವದಕ್ಕಿಂತ ಮುಂದೆ, **ತದ ಲಾಭತಃ** - ಆ ಲಕ್ಷ್ಮೀಕಟಾಕ್ಷ ನಿರೀಕ್ಷಣ ಸುಧೆಯು ದೊರೆಯದಿರುವದರಿಂದ, **ನಷ್ಟಂ** - ನಷ್ಟವನ್ನು ಹೊಂದಿದ ಎಂದರೆ ನಿಶ್ರೀಕತ್ವವನ್ನು ಹೊಂದಿದ, **ತ್ರಿಭುವನಂ** ಮೂರು ಲೋಕವನ್ನೂ ಎಂದರೆ ಅಲ್ಲಿರುವ ಜನರನ್ನೂ ಸಹ, **ಸಂಪ್ರತಿ –** ಈಗ, **ಅನಸ್ತೋದಯಂ, ಅನಂತ** – ನಿರವಧಿಕವಾದ, **ಉದಯಂ** – ಐಶ್ವರ್ಯಾವಿರ್ಭಾವವುಳ್ಳದ್ದಾಗಿ ಎಂದರೆ ಮೊದಲು ಇದ್ದುದಕ್ಕಿಂತಲೂ ತುಂಬಾ ಅತಿಶಯವಾದ ಐಶ್ವರ್ಯವುಳ್ಳದ್ದಾಗಿ, **ರಕ್ಷ್ಯತೇ** – ರಕ್ಷಿಸಲ್ಪಡುತ್ತದೆ. ಅದನ್ನೇ ಉತ್ತರಾರ್ಧದಿಂದ ಸಮರ್ಥನೆ ಮಾಡುತ್ತಾರೆ. **ಹಿ** – ಯಾವಕಾರಣದಿಂದ, **ಅರವಿಂದ ಲೋಚನ ಮನಃಕಾನ್ತಾ ಪ್ರಸಾದಾದೃತೇ, ಅರವಿಂದ ಲೋಚನ** – ಕಮಲ ಸದೃಶವಾದ ಕಣ್ಣುಗಳುಳ್ಳ ಶ್ರೀಮಹಾವಿಷ್ಣುವಿನ, **ಮನಃಕಾನ್ತಾ** – ಇಲ್ಲಿ ಮನಸ್ಸೆಂದರೆ ಸರ್ವೇಶ್ವರನಿಗೆ ನಮ್ಮಹಾಗೆ ಇಂದ್ರಿಯಾದಿಗಳಿಲ್ಲವಾದುದರಿಂದ, ಬುದ್ಧಿ ಅಥವ ಜ್ಞಾನಕ್ಕೆ ಮನೋಹರಳಾದ ಎಂದರೆ ಅಭಿಮತಳಾದ ಲಕ್ಷ್ಮಿಯ **ಪ್ರಸಾದಾದೃತೇ** – ಅನುಗ್ರಹವಿಲ್ಲದೆ, **ಸಂಸೃತ್ಯಕ್ಷರ ಮೈಷ್ಣವಾಧ್ವಸು, ಸಂಸೃತಿ** – ಸಂಸಾರಾನುಭವರೂಪವಾದ ಇಹ ಮತ್ತು ಸ್ವರ್ಗಾದಿ ಲೋಕಭೋಗಗಳ, **ಅಕ್ಷರ** – ಕೈವಲ್ಯಾನುಭವದ, **ಮೈಷ್ಣವಾಧ್ವಸು** – ದೇವಯಾನ ಮೂಲಕ ಉಂಟಾಗುವ ಪರಮಪದದಾನಂದದ ಮಾರ್ಗಗಳಲ್ಲಿ, ಎಂದರೆ ಆ ಪ್ರಾಪ್ತಿಗಳಲ್ಲೂ ಮತ್ತು ಅವುಗಳನ್ನು ಹೊಂದುವ ಉಪಾಯಗಳೆಲ್ಲಾ, **ನೃಣಾಂ** – ಮನುಷ್ಯ

ಶ್ರೀಯೋ ಸಹ್ಯರವಿಂದ ಲೋಚನ ಮನಃ ಕಾನ್ತಾ ಪ್ರಸಾ
ದಾದ್ಯತೇ ಸಂಸೃತ್ಯಕ್ಷರ ವೈಷ್ಣವಾಧ್ವಸು ನೃಣಾಂ ಸಂ
ಭಾವ್ಯತೇ ಕರ್ಹಿಚಿತ್ ॥೩॥

ರಿಗೆ, **ಶ್ರೀಯಃ** – ಉತ್ಕೃಷ್ಟರೂಪ ಫಲಪ್ರಾಪ್ತಿಯು, **ಕರ್ಹಿಚಿತ್** – ಯಾವಾಗಲೂ, ಅಥವಾ ಎಂದಿಗೂ **ನಸಂಭಾವ್ಯತೇ** – ಉಂಟಾಗುವುದಿಲ್ಲವೋ, ಆ ಕಾರಣದಿಂದ ಮೂರು ಲೋಕವು ರಕ್ಷಿಸಲ್ಪಡುತ್ತದೆ ಎಂದು ಅನ್ವಯವು; ಲಕ್ಷ್ಮೀಕಟಾಕ್ಷ ನಿರೀಕ್ಷಣದ ಲವಾಂಶದಿಂದಲೇ ಸರ್ವ ಪುರುಷಾರ್ಥಗಳೂ ಸಿದ್ಧಿಸುತ್ತವೆ ಎಂಬುವದು ಮುಖ್ಯಾಭಿಪ್ರಾಯವು.

ತಾತ್ಪರ್ಯ.—ಲೋಕದಂಪತಿಗಳಾದ ಲಕ್ಷ್ಮೀನಾರಾಯಣರಿಬ್ಬರೂ ಸದಾ ಒಟ್ಟಿಗೆ ಇರುವದರಿಂದ "ಸಹವಾ ಪ್ರವೃತ್ತಿಃ ಸಹವಾ ನಿವೃತ್ತಿಃ" ಎಂದು ಹೇಳಿರುವ ಸನ್ನಿಯೋಗ ಶಿಷ್ಟನ್ಯಾಯಪ್ರಕಾರ, ಸಕಲ ಪ್ರವೃತ್ತಿ ನಿವೃತ್ತಿ ರೂಪವ್ಯಾಪಾರಗಳನ್ನು ಒಟ್ಟಿಗೆ ಸೇರಿಯೇ ನಡಿಸುತ್ತಾರೆ. ಆದುದರಿಂದ ಜೀತನರು ತಮ್ಮತಮ್ಮ ಕರ್ಮಾನುಸಾರ ಉಪಾಯಗಳನ್ನವಲಂಬಿಸುವ ಹಾಗೆ ಮಾಡುವದರಲ್ಲೂ, ಆಯಾ ಉಪಾಯಗಳಿಗನುಸಾರವಾಗಿ ಧರ್ಮಾರ್ಥಕಾಮಮೋಕ್ಷರೂಪಗಳಾದ ಸರ್ವಶ್ರೇಯಸ್ಸನ್ನುಂಟುಮಾಡುವದರಲ್ಲೂ ಇಬ್ಬರೂ ಸೇರಿಯೇ ಪ್ರವರ್ತಿಸುತ್ತಾರೆ. ಇದರಿಂದ ಸರ್ವೇಶ್ವರನ ಹಾಗೆಯೇ ಸರ್ವೇಶ್ವರಿಗೂ ಕೂಡ ಉಪಾಯದಲ್ಲೂ, ಐಶ್ವರ್ಯ ಕೈವಲ್ಯ ಮೋಕ್ಷ ಪ್ರದತ್ವದಲ್ಲೂ ಅನ್ವಯ ಉಂಟೆಂದು ಹೇಳುತ್ತಾರೆ. ಹೀಗೆ ಸಕಲವಿಧ ಭೋಗಗಳನ್ನುಂಟುಮಾಡುವ ಶಕ್ತಿಯು ಲಕ್ಷ್ಮಿಗೆ ಇರುವದರಿಂದಲೇ, ಹಿಂದೆ ದುರ್ವಾಸ ಶಾಪದಿಂದ ಸರ್ವೈಶ್ವರ್ಯವನ್ನೂ ಕಳೆದುಕೊಂಡು, ಮೂರು ಲೋಕವೂ ನಿಶ್ಶ್ರೀಕವಾಗಿರುವಾಗ, ಲಕ್ಷ್ಮಿಯ ಕಟಾಕ್ಷಮಹಿಮೆಯಿಂದ ದೇವೇಂದ್ರನು ತನ್ನ ಪೂರ್ವ ಸಾಮ್ರಾಜ್ಯವನ್ನು ಹೊಂದಿದನು, ಮತ್ತು ಮೂರು ಲೋಕಗಳೂ ಲಕ್ಷ್ಮೀ ಕಟಾಕ್ಷದಿಂದ ಸರ್ವೈಶ್ವರ್ಯಯುಕ್ತವಾದವು ಎಂಬ ವಿಷ್ಣುಪುರಾಣಕಥೆಯು ಈ ಶ್ಲೋಕದ ಪೂರ್ವಾರ್ಧದಲ್ಲಿ ಸಂಗ್ರಹಿಸಲ್ಪಟ್ಟಿರುತ್ತದೆ.

ಇಲ್ಲಿ ಪೂರ್ವಕಥಾಸಾರಾಂಶವೇನೆಂದರೆ :—ರುದ್ರಾಂಶರಾಗಿ ಸ್ವಲ್ಪ ತಪೋಗುಣಯುಕ್ತರಾದ ದುರ್ವಾಸ ಋಷಿಯು ಒಂದು ದಿನ ವಿದ್ಯಾಧರ ಸ್ತ್ರೀಕೈಯಲ್ಲಿದ್ದ ಮಹಾಪರಿಮಳವುಳ್ಳ ಸಂತಾನವೃಕ್ಷದ ಹೂವಿನ ಹಾರವನ್ನು ತನಗೆ ಬೇಕಾಗಿ ಪ್ರಾರ್ಥಿಸಿ, ತರುತ್ತಿದ್ದ ಕಾಲದಲ್ಲಿ, ಇಂದ್ರನು ಐರಾವತವನ್ನು ಆರೋಹಣಮಾಡಿ ಮಹಾ ವಿಜೃಂಭಣೆಯಿಂದ ಬರುತ್ತಿದ್ದುದನ್ನು ಕಂಡು, ಆ ಹಾರವು ಇಂದ್ರನಿಗೆ ಯೋಗ್ಯವಾದುದೆಂದು ಭಾವಿಸಿ, ಆತನಿಗೆ ದಯಪಾಲಿಸಿದರು. ಅಂತಹ ಮಹನೀಯರಾದ ಋಷಿಗಳು ಅನುಗ್ರಹಿಸಿದ ಹಾರವನ್ನು ಶಿರಸಾವಹಿಸದೆ, ಐಶ್ವರ್ಯಮದದಿಂದ ಅದನ್ನು ತನ್ನ ಐರಾವತದ ಕೊರಳ್ಳಲ್ಲಿ ಹಾಕಿಬಿಟ್ಟನು. ಆ ಗಜವು ಅದನ್ನು ಸೊಂಡಲಿನಿಂದ ತೆಗೆದು ಕೆಳಗೆಹಾಕಿ ಕಾಲಿನಿಂದ ತುಳಿದುಬಿಟ್ಟಿತು. ಇದನ್ನು ಕಂಡು ದುರ್ವಾಸ ಋಷಿಯು ಕೋಪಗೊಂಡು, ಇಂದ್ರನ ಐಶ್ವರ್ಯವೆಲ್ಲಾ ನಾಶವಾಗುವಹಾಗೆ ಶಾಪವನ್ನಿತ್ತರು. ಅಂದಿನಿಂದ ಸ್ವರ್ಗಲೋಕವೂ ಈ ಭೂಲೋಕವೂ ಸಹ ಕಳೆಗುಂದಿ ಸಮೃದ್ಧಿಶೂನ್ಯವಾದವು. ಆಗ ದೇವತೆಗಳೆಲ್ಲರೂ ಚತುರ್ಮುಖಬ್ರಹ್ಮನ ಮೂಲಕ ಶ್ರೀಮನ್ನಾರಾಯಣನಲ್ಲಿ ಮೊರೆಯಿಡಲಾಗಿ, ಆಗ ರಾಕ್ಷಸರೂ ದೈತ್ಯರೂ ಸಹ ಸೇರಿ ಸಮುದ್ರವನ್ನು ಮಥನಮಾಡಲೆಂದು ಆತನು ಆಜ್ಞಾಪಿಸಿದನು. ಆಗ ಮಂದರ ಪರ್ವತವನ್ನೇ ಕಡಗೋಲುಮಾಡಿಕೊಂಡು ವಾಸುಕಿಯನ್ನೇ ಹಗ್ಗಮಾಡಿಕೊಂಡು, ತಾನೇ ಕೂರ್ಮಾವತಾರಮಾಡಿ, ಪರ್ವತವನ್ನು ಮೇಲಕ್ಕೆ ಎತ್ತಿ ಹಿಡಿದವನಾಗಲು, ಈ ಎರಡು ಪಂಗಡದವರೂ ಸೇರಿ ಕ್ಷೀರಸಮುದ್ರವನ್ನು ಮಥಿಸಿದರು. ಆಗ ವಾಸುಕಿಯ ಮುಖದಿಂದ ಬಂದ ವಿಷಜ್ವಾಲೆಯಿಂದ ದೈತ್ಯರೆಲ್ಲಾ ವೈರೂಪ್ಯವನ್ನು ಹೊಂದಿದರು. ಆ ವಿಷವಾಪವು ದೇವತೆಗಳಿಗೂ ಬಾಧಕವಾಗಿ ಪರಿಣಮಿಸಿದುದರಿಂದ, (1) **"ದೇವದೇವೇಶ್ವರನಾಗಿ ಪ್ರಭುವಾದ"** ಶ್ರೀ ಮಹಾವಿಷ್ಣುವು (1) **"ಸುರಶ್ರೇಷ್ಠ"** ನಾದ ರುದ್ರನನ್ನು ಪ್ರೋತ್ಸಾಹಿಸಿ, ಆ ವಿಷವನ್ನು ಪಾನಮಾಡುವಹಾಗೆ ಮಾಡಿದನು. ಅನಂತರ ನಂದನವೃಕ್ಷ, ಕಾಮಧೇನು, ಉಚ್ಚೈಶ್ರವಸ್ಸು, ಚಂದ್ರ ಮೊಲಾದವರು ಹುಟ್ಟಿದರು.

(1.) ರಾ. ಬಾಲ. 54. 24.

ಕೊನೆಯಲ್ಲಿ ಲಕ್ಷ್ಮ್ಯಯು ಅವಿರ್ಭವಿಸಿ, ದಿಗ್ಗಜಗಳಿಂದ ಅಭಿಷಿಕ್ತಳಾಗಿ ವಿಷ್ಣುವಿನ ವಕ್ಷಸ್ಥಲವನ್ನು ಸೇರಿದಳು. ಆಗ ಇಂದ್ರನೂ ಇತರ ದೇವತೆಗಳೂ ಸಹ, ಈಕೆಯನ್ನು ಶರಣು ಹೊಂದಿ, ಸ್ತ್ರೋತ್ರ ಮಾಡಿದುದರಿಂದ ನಷ್ಟವಾದ ಐಶ್ವರ್ಯಗಳೆಲ್ಲಾ ಲಕ್ಷ್ಮ್ಯಯ ಕೃಪಾಕಟಾಕ್ಷ ಪ್ರಭಾವದಿಂದ ಪುನಃ ಇವರಿಗೆ ಪ್ರಾಪ್ತವಾಯಿತು. ಒಡನೇ ಅಮೃತ ಕಲಶವನ್ನು ಧನ್ವಂತರಿ ಎಂಬ ವಿಷ್ಣ್ವಂಶ ಸಂಭೂತ ಪುರುಷನು ತೆಗೆದುಕೊಂಡು ಬರಲು ; ಅದಕ್ಕಾಗಿ ದೇವತೆಗಳಿಗೂ ಅಸುರರಿಗೂ ಕಲಹಪ್ರಾಪ್ತವಾಗುವ ಸಂದರ್ಭದಲ್ಲಿ ಸ್ವಾಮಿಯು ಮೋಹಿನೀ ಅವತಾರವನ್ನು ತಾಳಿ, ಅಸುರರನ್ನು ಮೋಹಿಸಿ, ದೇವತೆಗಳು ಅಮೃತ ತವನ್ನು ಪಾನ ಮಾಡುವಹಾಗೆ ಮಾಡಿ, ಅದರಿಂದ ದೇವತೆಗಳಿಗೆ ಸತ್ಕೃಯುಂಟಾಗಿ, ಯುದ್ಧದಲ್ಲಿ ಅಸುರರನ್ನೆಲ್ಲಾ ಗೆದ್ದು, ಇಂದ್ರನೂ ದೇವತೆಗಳೂ ಸಹ ತಮ್ಮ ಪೂರ್ವವಿಭವೈಶ್ವರ್ಯಗಳನ್ನು ಹೊಂದಿದರೆಂಬುವದು ಪೂರ್ವಕಥೆಯು. ಇದನ್ನು ಶ್ರೀಯಾಮುನೇಯರು ಮನಸ್ಸಿನಲ್ಲಿಟ್ಟವರಾಗಿ ಲಕ್ಷ್ಮ್ಯಯ ಕೃಪಾಕಟಾಕ್ಷದ ಮಹಿಮೆಯನ್ನು ಶ್ಲಾಘಿಸುತ್ತಾರೆ. ತನಗೆ ಪ್ರಾಪ್ತವಾದ ದುರ್ಗತಿಯನ್ನು ಕಳೆದುಕೊಳ್ಳಲು, ಇಂದ್ರಾದಿ ದೇವತೆಗಳಿಗೆ ಲಕ್ಷ್ಮ್ಯಯ ಕಟಾಕ್ಷ ನಿರೀಕ್ಷಣೆಯ ಅಲ್ಪಾಂಶವೇ ಸಾಕಾಗಿ, ಅದರಿಂದ ಇಂದ್ರನು ತನಗೆ ತಪ್ಪಿ ಹೋಗಿದ್ದ ದೇವಲೋಕ ಸಾಮ್ರಾಜ್ಯವನ್ನೆಲ್ಲಾ ಪಡೆದನು :—

" ತತೋವ ಲೋಕಿತಾ ದೇವಾ ಹರಿ ವಕ್ಷ ಸ್ಥಲ ಶ್ರಿಯಾ ।
ಲಕ್ಷ್ಮ್ಯಾಶ್ಮೈತ್ರೇಯ ಸಹಸಾ ಪರಾಂ ನಿವೃತಿ ಮಾಗತಾಃ"॥

ಎಂದರೆ ವಿಷ್ಣು ವಕ್ಷಸ್ಥಲದಲ್ಲಿದ್ದ ಲಕ್ಷ್ಮ್ಯಯಿಂದ ಕಟಾಕ್ಷಿಸಲ್ಪಟ್ಟವರಾಗಿ, ದೇವತೆಗಳೆಲ್ಲರೂ ಶೀಘ್ರವಾಗಿ ಶ್ರೇಷ್ಠವಾದ ಸುಖವನ್ನು ಹೊಂದಿದರು ಎಂದು ವಿಷ್ಣುಪುರಾಣದಲ್ಲಿ ಹೇಳಿರುತ್ತದೆ. ಈ ಅಭಿಪ್ರಾಯವನ್ನೇ ಪರಾಶರಭಟ್ಟರೂ ಉಪಪಾದಿಸಿರುತ್ತಾರೆ.

"ಆ ಕುಗ್ರಾಮ ನಿಯಾಮಕಾದಪಿ ವಿಭೋ ರಾಸ್ವ ನಿರ್ವಾಹಕಾ
ದ್ಯೈಶ್ವರ್ಯಂ ಯದಿ ಹೋತ್ತರೋತ್ತರ ಗುಣಂ ಶ್ರೀರಙ್ಗ ಭರ್ತುಃ ಪ್ರಿ
ಯೇ । ತುಙ್ಗಂ ಮಙ್ಗಳ ಮುಜ್ಜ್ವಲಂ ಗರಿಮವತ್ ಪುಣ್ಯಂಪುನಃ

ಪಾವನಂ ಧನ್ಯಂ ಯತ್ತದದಶ್ಚ ವೀಕ್ಷಣ ಭುವಃ ಶೇ ಪಂಚಷಾ ವಿಪ್ರುಷಃ ॥

(ಶ್ರೀಗುಣ. 15) ಎಂದರೆ, ಓ ಶ್ರೀರಙ್ಗನಾಥನ ಪ್ರಿಯಳೇ ಬಂದು ಕು ಗ್ರಾಮಕ್ಕೆ ಅಧಿಪನ ಮೊದಲುಗೊಂಡು, ಸಮಸ್ತಕ್ಕೂ ನಿರ್ವಾಹಕನಾ ದ ಚತುರ್ಮುಖ ಬ್ರಹ್ಮನವರಿವಿಗೂ, ಬಬ್ಬರಿಗಿಂತ ಬಬ್ಬರಿಗೆ ಹೆಚ್ಚಾದ ಐಶ್ವರ್ಯ, ಗುಣ, ಉನ್ನತಪದವಿಯು, ಮಂಗಳ, ಪ್ರಕಾಶವು, ಶ್ರೇಷ್ಠ ತೆಯು, ಪರಿಶುದ್ಧತೆ, ಧನ್ಯತೆ ಮೊದಲಾದವು ಎಲ್ಲವೂ ನಿನ್ನ ಕಟಾಕ್ಷ ವರ್ಷದ ಐದಾರು ಬಿಂದುಗಳಿಂದಲೇ ಉಂಟಾದವು "ಎಂದು ಹೇಳಿರು ತ್ತದೆ. ಇನ್ನೊಂದು ಶ್ಲೋಕದಲ್ಲಿ.

ಅಪಾಂ ಗಾಭೂಯಾಂ ಸೋಯದುಪರಿ ಪರಂಬ್ರಹ್ಮತದಭೂ ದಮೀ ಯತ್ರ ದ್ವಿತ್ರಾಸ್ಸಚ ಶತಮುಖಾದಿ ಸ್ತದಧರಾತ್

ಶ್ರೀಗುಣ. 30. ಓ ಲಕ್ಷ್ಮಿಯೇ ಹೆಚ್ಚಾದ ಪರಿಪೂರ್ಣವಾದ ಕಟಾ ಕ್ಷವು ಯಾರಮೇಲೆ ಬಿತ್ತೋ ಆತನು ಪರಬ್ರಹ್ಮನೆನಿಸಿದನು. ಎರಡು ಮೂರು ಕಟಾಕ್ಷಗಳು ಎಲ್ಲಿ ಪ್ರಸರಿಸಿದವೋ ಅವೆಲ್ಲಾ ಚತುರ್ಮುಖ ರುದ್ರೇಂದ್ರಾದಿಗಳಾದರು" ಎಂದು ಹೇಳಿರುತ್ತದೆ. ಆದುದರಿಂದಲೇ ಇಲ್ಲಿ, **ಈಷತ್ಪತ್ಕರುಣಾ** ಎಂಬಲ್ಲಿ, **ಈಷತ್** ಶಬ್ದವು ಪ್ರಯೋಗಿಸಲ್ಪ ಟ್ಟಿರುತ್ತದೆ. ಕರುಣಾನೀಕ್ಷಣೆಯು" ಈಷದ್ಭಾಗವೇ ಸರ್ವಸಮೃ ದ್ಧಿಯನ್ನೂ ಉಂಟುಮಾಡಲು ಸಾಕೆಂಬ ಭಾವವು.

ತ್ಪತ್ಕರುಣಾ ನಿರೀಕ್ಷಣಸುಧಾ – ನೀನಾದರೋ **"ಪ್ರಣಿಪಾತ ಪ್ರಸನ್ನಾಹಿ ಮೈಥಿಲೀ ಜನಕಾತ್ಮಜಾ** ಎಂದು ಜನಕ ಸುತೆಯಾದ ಸೀತೆಯು ಶರಣಾಗತರಿಗೆ ಪ್ರಸನ್ನಳಾಗಿ ಸರ್ವಾಭೀಷ್ಟದಾಯಕಳೆಂದು ತ್ರಿಜಟೆಯಿಂದ ಸ್ತುತಿಸಲ್ಪಟ್ಟವಳು, ಅಜ್ಞಾತನಿಗ್ರಹವೆಂಬುವದನ್ನೇ ಅರಿಯದವಳು, ಅನುಗ್ರಹಮಯಳು; ಲೋಕಮಾತೆಯಾಗಿ ತನ್ನ ಪ್ರಜೆಯನ್ನೆಲ್ಲಾ ತುಂಬಾ ಕರುಣೆಯಿಂದ ನೋಡುವವಳು, ರಾಕ್ಷಸ ಸ್ತ್ರೀಯರೆಲ್ಲಾ ತುಂಬಾ ತೊಂದರೆ ಕೊಟ್ಟರೂ ಅವರನ್ನೆಲ್ಲಾ ನಾಶ ಮಾಡುವೆನೆಂದು ಅನುಜ್ಞೆಯನ್ನು ಬೇಡಿದ ಆಂಜನೇಯನಿಗೆ **"ಕಾರ್ಯಂ ಕರುಣ ಮಾರ್ಯೇಣ ನಕಶ್ಚಿನ್ನಾ ಪರಾಧ್ಯತಿ"** 'ಪೂಜ್ಯರು ದೋಷಿ

ಗಳಲ್ಲೂ ಕರುಣೆಯನ್ನು ತೋರುವದು ನ್ಯಾಯವು, ದೋಷಿಗಳಲ್ಲದವರು ಯಾರು' ಎಂದು ಹೇಳಿದ ಕರುಣಾಮಯಳು; ಪತಿಯಾದ ನಾರಾಯಣನೇನಾದರೂ ದೋಷಿಯಾದವನನ್ನು ಸ್ವಲ್ಪ ದಂಡಿಸಿ ಸರಿಯಾದ ಮಾರ್ಗಕ್ಕೆ ತರೋಣವೆಂದು ಶಿಕ್ಷಿಸಲೆತ್ನಿಸಿದರೆ, ಆಗ **"ಕಿಮೇತನ್ನಿರ್ದೋಷಃಕ ಇಹ ಜಗತೀತಿ ತ್ವಮುಚಿತೈರು ಪಾಯೈರ್ವಿಸ್ಮಾರ್ಯಸ್ವಜನಯಸಿ"** (ಶ್ರೀಗುಣ. 52) "ಇದೇನು ಹೀಗೆ ಎಂದು ಹೇಳಿ ಉಚಿತವಾದ ಮಾತುಗಳಿಂದ ಮರಿಸಿಬಿಟ್ಟು ಆಚೇತನನನ್ನು ಸ್ವಾಮಿಗೆ ಪ್ರಿಯನನ್ನಾಗಿ ಮಾಡಿಸುವೆ" ಎಂದು ಹೇಳಿರುವದರಿಂದ ಕರುಣಾಮೂರ್ತಿಯು; **"ದೇವ್ಯಾ ಕಾರುಣ್ಯರೂಪಯಾ"** ಎಂದು ಲಕ್ಷ್ಮೀತಂತ್ರದಲ್ಲಿ ಹೇಳಿಸಿಕೊಂಡಿರುವವಳು. ಆದುದರಿಂದಲೇ **ತತ್ಕರುಣಾನಿರೀಕ್ಷಣ** ವೆಂಬ ಪ್ರಯೋಗವು.

ನಿರೀಕ್ಷಣಸುಧಾ ಸಂಧುಕ್ಷಣಾತ್. ಇಲ್ಲಿ 'ಸುಧಾ' ಶಬ್ದವನ್ನುಪಯೋಗಿಸಿರುವದರಿಂದ, ಅಮೃತವು ಹೇಗೆ ದೇವತೆಗಳಿಗೆ ಸತ್ಯೆಯನ್ನುಂಟುಮಾಡಿ ಅಸುರವಧೆಗೆ ಉಪಯುಕ್ತವಾದ ಪರಾಕ್ರಮವನ್ನಿತ್ತಿತೋ, ಅಂತಹ ಸರ್ವಸಮೃದ್ಧಿಯನ್ನುಂಟುಮಾಡುವ ಸತ್ಯೆಯನ್ನು ಈ ವಿಶ್ವಕ್ಕೆಲ್ಲಾ ಲಕ್ಷ್ಮೀಕಟಾಕ್ಷ ನಿರೀಕ್ಷಣೆಯುಂಟುಮಾಡಿತು ಎಂಬ ಭಾವವು. ನಾರಾಯಣನು ಕಷ್ಟಪಡಿಸಿ ಸಮುದ್ರಮಥನ ಮಾಡಿಸಿ, ಬಂದ ಸುಧೆಯನ್ನು ಪಾನ ಮಾಡಿಸಿ ದೇವತೆಗಳಿಗೆ ಸತ್ಯೆಯನ್ನಿತ್ತನು; ಲಕ್ಷ್ಮಿಯಾದರೋ ಪತಿಗೆ ಸಹಧರ್ಮಚಾರಿಣಿಯಾಗಿ, ನಿರಾಯಾಸವಾಗಿ, ತಪ್ಪಿಹೋಗಿದ್ದ ವಿಭವೈಶ್ವರ್ಯಾದಿಗಳೆಲ್ಲಾ ಪುನಃ ಲಭಿಸುವಹಾಗೆ ತನ್ನ ಕಟಾಕ್ಷ ನಿರೀಕ್ಷಣ ಸುಧೆಯಿಂದಲೇ ಮಾಡಿದಳು. ತನ್ನಪತಿಯು ಸುಧೆಯನ್ನೇ ಕುಡಿಸಿ, ಪರಾಕ್ರಮ ಮೊದಲಾದ **ಪುಂಸ್ತ್ವಸುಲಭಾ** (ಶ್ರೀಗುಣ 34.) ತನ್ನ ಪುರುಷರೂಪಕ್ಕನುಗುಣವಾದ ಪೌರುಷ ಮುಂತಾದ್ದನ್ನು ದೇವತಗಳಿಗುಂಟುಮಾಡಿದನು; ಲಕ್ಷ್ಮಿಯಾಪರೋ ಕರುಣೆ ಎಂಬ ಸುಧೆಯಿಂದಲೇ ತನಗೆ ಯೋಗ್ಯವಾದ, ತನ್ನ ಕರುಣೆಗೆ ಅನುಗುಣವಾದ, ಕಟಾಕ್ಷವೀಕ್ಷಣ ಸುಧೆಯಿಂದಲೇ, ಭೋಗೈಶ್ವರ್ಯಾದಿಗಳನ್ನುಂಟುಮಾಡಿದವಳು. ಹೀಗೆ ತನ್ನ ಪತಿಗಿಂತಲೂ ವಿಶೇಷ ಮಹಿಮೆಯುಳ್ಳವಳೆಂಬ ಭಾವದಿಂದ, "ಕರುಣಾನಿರೀಕ್ಷಣ ಸುಧಾ" ಎಂಬ ಪ್ರಯೋಗವು.

" ನಷ್ಟಂ ಪ್ರಾಕ್ತದಲಾಭತ ಸ್ತ್ರಿಭುವನಂ " ಮುರ್ವಾಸ ಋಷಿಯ ಶಾಪದಿಂದ ಲಕ್ಷ್ಮ್ಯಾಯ ಕಟಾಕ್ಷವು ಈ ಮೂರು ಲೋಕಕ್ಕೂ ಇಲ್ಲದೇ ಹೋಗಿತ್ತು. ಅನಂತರ ಲಕ್ಷ್ಮ್ಯಾಯ ಕಟಾಕ್ಷದ ಮಹಿಮೆಯಿಂದ " ಅನಂತೋದಯಂ " ಸಿರತಿಶಯ ಸಮೃದ್ಧಿಯುಳ್ಳದ್ದಾಯಿತು. ವಿಷ್ಣುಪುರಾಣದಲ್ಲಿ ಹಾಗೆಯೇ ಹೇಳಿರುತ್ತದೆ:—

ತ್ವಯಾದೇವಿ ಪರಿತ್ಯಕ್ತಂ ಸಕಲಂ ಭುವನತ್ರಯಂ ।
ವಿನಷ್ಟಪ್ರಾಯ ಮಭವತ್ತ್ವಯೇದಾನೀಂ ಸಮೇಧಿತಂ ॥

ಹಿಂದೆ ನಿನ್ನಿಂದ ತ್ಯಜಿಸಲ್ಪಟ್ಟಿದುದರಿಂದಲೇ ಸಮಸ್ತ ಮೂರುಲೋಕವೂ ನಿಶ್ಶ್ರೀಕವಾಗಿ ನಷ್ಟವನ್ನು ಹೊಂದಿತ್ತು. ಅದು ಈಗ ನಿನ್ನ ಕೃಪಾಕಟಾಕ್ಷದಿಂದ ವೃದ್ಧಿಯನ್ನು ಹೊಂದಿತು, ಎಂದು ಹೇಳಲ್ಪಟ್ಟಿರುತ್ತದೆ.

ತದಲಾಭತಃ ಎಂದು ಹೇಳಿರುವದರಿಂದ, ಐಶ್ವರ್ಯಪ್ರಾಪ್ತಿಗೆ ಆಕೆಯ ಅನುಗ್ರಹರೂಪವಾದ ದಿವ್ಯ ಕಟಾಕ್ಷ ನೀರೀಕ್ಷಣವು ಅತ್ಯಾವಶ್ಯಕವೆಂದು ಹೇಳಲ್ಪಟ್ಟಿತೇ ವಿನಾ, ಅದು ನಷ್ಟವಾಗಲು ಆಕೆಯ ಕೋಪದಿಂದುಂಟಾದ ನಿಗ್ರಹವು ಕಾರಣವಲ್ಲವೆಂಬ ಭಾವವು. ಆಕೆಯ ಕಟಾಕ್ಷಲಾಭವಿಲ್ಲದುದರಿಂದ ಐಶ್ವರ್ಯಪ್ರಾಪ್ತಿಯು ಇಲ್ಲದೇ ಇತ್ತು ಎಂಬಭಿಪ್ರಾಯವು. ಆಕೆಯ ಕೋಪದಿಂದುಂಟಾದ ಕ್ರೂರ ದೃಷ್ಟಿಯಿಂದ ಐಶ್ವರ್ಯಹಾನಿಯುಂಟಾಗುತ್ತದೆಂಬಭಿಪ್ರಾಯವಲ್ಲವು. ಏಕೆಂದರೆ ಆಕೆಯು **"ಅನುಗ್ರಹಮಯೀಮಂದೆ ನಿತ್ಯಮಜ್ಞಾತನಿಗ್ರಹಾಂ "** ಎಂದು ಯತಿರಾಜಸಪ್ತತಿಯಲ್ಲಿ ಹೇಳಿರುವ ಹಾಗೆ ನಿಗ್ರಹವನ್ನು ಅರಿತವಳಲ್ಲವು, ಅನುಗ್ರಹಮಯಳು ; **" ವಿಧೇಯಾನಾಂಚ ದಾಸೀನಾಂಕಃ ಕುಪ್ಯೇದ್ವಾನರೋತ್ತಮ"** (ರಾ. ಯುದ್ಧ. 116.38) " ವಿಧೇಯರಾದ ದಾಸೀಜನದ ವಿಷಯದಲ್ಲಿ ಯಾರುತಾನೇ ಕೋಪಿಸುವರು, ಓ ಆಂಜನೇಯನೇ " ಎಂದು ಆಂಜನೇಯನಿಗೆ ಬುದ್ಧಿವಾದ ಹೇಳಿದ ಕರುಣಾಮಯಳಾದ ಸೀತೆಯು, ಕೋಪಿಸುವದು ತಮೋಗುಣದ ಪ್ರಭಾವವು ; ರುದ್ರಾಂಶರಾದ ದುರ್ವಾಸ ಋಷಿಗೆ ಸರಿಯಾದುದು. ಶುದ್ಧ ಸತ್ವಮಯಳಾಗಿ, ಕರುಣಾಶಾಲಿಯಾದವಳಿಗೆ ಉಚಿತವಾ

ದುದಲ್ಲವು. ಸರ್ವೇಶ್ವರನು ಶಿಕ್ಷಿಸುವದಿಲ್ಲವೇ, ಅದು ಕೋಪದಿಂದ ಲ್ಲವೇ ಎಂದರೆ, ಅದು ಕೂಡ "ಹಿತಸ್ರೋತೋವೃತ್ತ್ಯೈ" ಹಿತವನ್ನುಂಟುಮಾಡಬೇಕೆಂಬ ಭಾವನೆಯಿಂದ ಎಂಬ ತಾತ್ಪರ್ಯವು.

ಆದುದರಿಂದ ಇಹಲೋಕದ ಮತ್ತು ಸರ್ವಲೋಕದ ಸಕಲ ವಿಭವೈಶ್ವರ್ಯಾದಿಗಳೂ, ಲಕ್ಷ್ಮ್ಯಯ ಕಟಾಕ್ಷ ವೀಕ್ಷಣದ ಲವಾಂಶದಿಂದ ಉಂಟಾಗುವವು.

"ಬ್ರಹ್ಮಾದ್ಯಾಶ್ಚ ಸುರಾಸ್ಸರ್ವೇ ಮುನಯಶ್ಚ ತಪೋಧನಾಃ।
ಏಧನ್ತೇ ತ್ವತ್ಪದಚ್ಛಾಯಾಮಾಶ್ರಿತ್ಯ ಕಮಲೇಶ್ವರಿ॥"

ಓ ಲಕ್ಷ್ಮ್ಯಯೇ, ನಿನ್ನ ಪಾದಕಮಲದ ಛಾಯೆಯನ್ನಾಶ್ರಯಿಸಿರುವದರಿಂದಲೇ, ಚತುರ್ಮುಖಬ್ರಹ್ಮನೇ ಮೊದಲಾದವರೂ, ಮೊದಲಾದವರು ಎಂಬುವದರಿಂದ ರುದ್ರೇಂದ್ರಾದಿಗಳೂ, ಸಮಸ್ತದೇವತೆಗಳೂ, ಮುನಿಗಳೂ, ತಪೋಧನರೂ, ಎಲ್ಲರೂ ಆಧಿಕ್ಯವನ್ನು ಹೊಂದುತ್ತಾರೆ ಎಂದು ಕಾಶ್ಯಪರೂ ಹಾಗೆಯೇ ಹೇಳಿರುತ್ತಾರೆ.

ಇನ್ನೊಂದುವಿಧವಾಗಿಯೂ ಈ ಪೂರ್ವಾರ್ಧಶ್ಲೋಕಕ್ಕೆ ಅರ್ಥ ಹೇಳಬಹುದು, ಹೇಗೆಂದರೆ:—ಇಲ್ಲಿ ಪ್ರಾಕ್ ಎಂಬುವದಕ್ಕೆ **ಸೃಷ್ಟೇಃ ಪ್ರಾಕ್** – ಸೃಷ್ಟಿಗೆ ಮೊದಲು ಎಂದು ಅರ್ಥವನ್ನು ಹೇಳಿ, ಅದಕ್ಕನುಸಾರವಾಗಿ ಇತರ ಪದಗಳಿಗೂ ಅರ್ಥ ಹೇಳಬಹುದು. ಆಮೇಲೆ ಪ್ರಾಕ್ - ಪ್ರಳಯದೆಸೆಯಲ್ಲಿ, ಈ ನಾಮರೂಪಗಳನ್ನು ಹೊಂದಿರುವ ಸ್ಥೂಲ ಪ್ರಪಂಚವು ಸೂಕ್ಷ್ಮಾವಸ್ಥೆಯನ್ನು ಹೊಂದಿ, **"ಪೃಥಿವ್ಯಪ್ಸು ಲೀಯತೇ"** ಪೃಥಿವಿಯು ಅಪ್ಪಿನಲ್ಲಿ ಲೀನವಾಗುತ್ತದೆಂದು ಪ್ರಾರಂಭಿಸಿ, **" ಅಕ್ಷರಂತಮಸಿಲೀಯತೇ ತಮಃ ಪರೇದೇವೆ ಏಕೀಭವತಿ** ಎಂದು ಹೇಳಿರುವ ಹಾಗೆ ಅಕ್ಷರತತ್ವವು ತಮಸ್ಸಿನಲ್ಲಿ ಏಕೀಭವಿಸುತ್ತದೆ; ತಮಸ್ಸು ಪರಮಾತ್ಮನಲ್ಲಿ ಏಕೀಭವಿಸಿ ನಿಲ್ಲುತ್ತದೆ. " ಎಂದು ಶ್ರುತಿಯಲ್ಲಿ ಹೇಳಿರುವ ಹಾಗೆ ಸ್ವಾಮಿಯಲ್ಲಿ ಸೇರಿರುತ್ತದೆ. ಹಾಗೆ ಸೂಕ್ಷ್ಮಾವಸ್ಥೆಯಲ್ಲಿರುವಾಗಲೂ, ಸರ್ವೇಶ್ವರನು, ಲಕ್ಷ್ಮ್ಯೊಂದಿಗೇನೇ ಸೂಕ್ಷ್ಮಾವಸ್ಥೆಯಲ್ಲಿರುವ ಜೆದಜೆದ್ವಿಶಿಷ್ಟನಾಗಿಯೇ ಇರುತ್ತಾನೆ. ಅಂತಹ ಪ್ರಳಯದೆಸೆಯಲ್ಲಿ ತಮಶ್ಶಬ್ದದಿಂದ ಹೇಳಿಸಿಕೊಳ್ಳುವ ಜೆದಜೆ

ತ್ತುಗಳಿಗೆ ಈಶ್ವರನ ಮತ್ತು ಲಕ್ಷ್ಮ್ಯಾಯ ಕಟಾಕ್ಷ ಬಲವಿಲ್ಲದುದರಿಂದ ತ್ರಿಭುವನವೂ, **ಅಸನ್ನೇವಸಭವತಿ** ಎಂದು ಹೇಳಿರುವ ಹಾಗೆ ನಷ್ಟವಾದುದಾಯಿತು. ಯಾವಾಗ ಈಲೋಕ ದಂಪತಿಗಳು ಸಂಕಲ್ಪಿಸಿ ಸೃಷ್ಟಿಸಲೆತ್ನಿಸಿದರೋ, ಆಗ **ಐಕ್ಷತ** ಎಂದು ಹೇಳಿರುವ ಸಂಕಲ್ಪದೊಂದಿಗೆ ಇವರುಗಳ ದೃಷ್ಟಿಯೂ ಅವುಗಳಮೇಲೆ ಬೀಳುವದರಿಂದ ಪುನಃ ವಿವಿಧ ವಿಚಿತ್ರ ಸಮೃದ್ಧಿಯುಳ್ಳ ಸೃಷ್ಟಿಯುಳ್ಳದ್ದಾಯಿತೆಂದು, **ಅನಂತೋದಯಂ** ಎಂಬುವದರಿಂದ ವ್ಯಕ್ತಪಡುತ್ತದೆ. ಜಗತ್ಸೃಷ್ಟಿಯಲ್ಲಿ ಲಕ್ಷ್ಮ್ಯಾಗೆ ಅನ್ವಯ ಉಂಟೆಂಬುವದಕ್ಕೆ ಪ್ರಮಾಣಗಳಿವೆಯೋ ಎಂದರೆ, **" ಆನೀತವಾದಗ, ಸ್ವಧಯಾತದೇಕಂ ಯಸ್ಮಾದ್ದಾನ್ಯಂ ನಪರಃಕಿಂಚನಾಸ। ತಮ ಆಸೀತ್ತಮಸಾ ಗೂಢಮಗ್ರೇಪ್ರಕೇತಂ"** ಎಂಬೀ ಶ್ರುತಿಯಲ್ಲಿ ಪ್ರಳಯ ಸ್ಥಿತಿಯಲ್ಲಿ ತಮಸ್ಸಿನೊಂದಿಗೆ ಸೂಕ್ಷ್ಮಸ್ಥಿತಿಯಲ್ಲಿರುವ ಪರಮಾತ್ಮನು, **ಸ್ವಧಯಾ** ಲಕ್ಷ್ಮ್ಯಾಯೊಂದಿಗೆ ಇರುತ್ತಾನೆಂದು ಹೇಳಿರುತ್ತದೆ. ಇದು ಸೃಷ್ಟ್ಯುನ್ಮುಖಾವಸ್ಥೆಯಾದುದರಿಂದ ಸೃಷ್ಟಿಯಲ್ಲೂ ಅನ್ವಯ ಉಂಟೆಂಬುವದು ವ್ಯಕ್ತಪಡುತ್ತದೆ.

ಇನ್ನೊಂದು ಕಡೆಯಲ್ಲೂ **ಶ್ರದ್ಧಯಾದೇವೋ ದೇವತ್ವಮಶ್ನುತೇ,** ದೇವಃ ಸೃಷ್ಟ್ಯುನ್ಮುಖನಾಗಿ ಲೀಲಾಪರನಾದ ಸ್ವಾಮಿಯು ಲೀಲೆಯನ್ನು ಲಕ್ಷ್ಮ್ಯಾಯೊಂದಿಗೆ ಕೂಡಿರುವವರಿಂದಲೇ ಅನುಭವಿಸುವನು ಎಂದು ಹೇಳಿರುತ್ತದೆ; **"ಅಸ್ಯೇಶಾನಾಜಗತೋ ವಿಷ್ಣುಪತ್ನೀ" "ಈಶ್ವರೀಗ್ಂಸರ್ವಭೂತಾನಾಂ"** ಎಂಬೀ ವಾಕ್ಯಗಳೂ ಕೂಡ ಜಗದ್ವ್ಯಾಪಾರಗಳಲ್ಲಿ ಅನ್ವಯ ಉಂಟೆಂಬುವದನ್ನು ಬೋಧಿಸುತ್ತವೆ. **ನಿಯನ್ತ್ರೀಚ ತಥೇಶ್ವರೀ** ಎಂಬ ಭಗವಚ್ಛಾಸ್ತ್ರವಚನವೂ ಇದನ್ನೇ ಸಮರ್ಥಿಸುತ್ತದೆ.

ಈ ಮೇಲಿನ ಶ್ರುತಿವಾಕ್ಯಗಳನ್ನೇ ಉಪಬ್ರಹ್ಮಣವಾಡಿ ವ್ಯಾಸಮಹರ್ಷಿಯು ಹೇಳಿರುತ್ತಾರೆ:—

ಅವ್ಯಕ್ತಂ ಪುರುಷಂ ಯಾತೇ ಪುಂಸಿ ಸರ್ವಗತೇ ಪಿಚ।
ತಮ ಏವಾಭವತ್ಸರ್ವಂ ನಪ್ರಜ್ಞಾಯತ ಕಿಂಚನ ।
ವಿದ್ಯಾಸಹಾಯವಾ೯ ದೇವೋ ವಿಷ್ಣುಕ್ಷೀನೋ ಹರಿಃಪ್ರಭುಃ॥

(ಮೋಕ್ಷಧರ್ಮ) ಪ್ರಳಯದೆಸೆಯಲ್ಲಿ ಎಲ್ಲಾ ಅಚೆತ್ತೂ ಚೆತ್ತೂ ಸೇರಿದ ತಮಸ್ಸು ಸೂಕ್ಷ್ಮರೂಪದಲ್ಲಿ **ವಿದ್ಯಾಸಹಾಯನಾದ** ಎಂದರೆ ಲಕ್ಷ್ಮೀಸಹಾಯನಾದ ಪರಮಾತ್ಮನಲ್ಲಿ ವಿಕೀಭವಿಸಿತ್ತು ಎಂದು ಹೇಳಲ್ಪಟ್ಟಿರುತ್ತದೆ. ಪುನಃ ಇನ್ನೊಂದು ಕಡೆಯಲ್ಲೂ,

ಕೃತ್ವಾ ಮತ್ಸ್ಥಾನಿ ಭೂತಾನಿ ಚರಾಣಿ ಸ್ಥಾವರಾಣಿಚ ।
ಏಕಾಕೀ ವಿದ್ಯಯಾ ಸಾರ್ಧಂ ವಿಹರಿಷ್ಯೇ ದ್ವಿಜೋತ್ತಮ ।
ತತೋ ಭೂಯೋ ಜಗತ್ಸೃಷ್ಟಿಂ ಕರಿಷ್ಯಾಮೀಹ ವಿದ್ಯಯಾ।

ಪ್ರಳಯಾವಸ್ಥೆಯಲ್ಲಿಯೂ, ಮತ್ತು ಸೃಷ್ಟ್ಯವಸ್ಥೆಯಲ್ಲಿಯೂ, ಪ್ರಳಯ ಸೃಷ್ಟಿಕರ್ಮಗಳನ್ನು, **ವಿದ್ಯಯಾ** – ಲಕ್ಷ್ಮಿಯೊಡನೆಯೇ ನೆರವೇರಿಸುವದಾಗಿ ಸ್ವಾಮಿಯು ನಾರದರಿಗೆ ಉಪದೇಶಿಸುತ್ತಾರೆ. ಪ್ರಳಯಾವಸ್ಥೆಯಲ್ಲಿಯೂ ಸೃಷ್ಟ್ಯವಸ್ಥೆಯಲ್ಲಿಯೂ ಈ ಎರಡರಲ್ಲೂ ಲಕ್ಷ್ಮಿಯು ಸಹಾಯಕಳೆಂದು ಹೇಳುವದಕ್ಕಾಗಿ **ವಿದ್ಯಯಾ** ಎಂದು ಎರಡು ಸಲ ಹೇಳಿರುತ್ತದೆ.

ಶ್ರೀಪರಾಶರರೂ **“ಸರ್ವಲೋಕಮಹೇಶ್ವರೀಂ”** ಎಂದೂ, **“ಜಗದ್ಧಾತ್ರೀ”** ಎಂದೂ, ಹೇಳಿರುವದರಿಂದ ಜಗದ್ವ್ಯಾಪಾರದಲ್ಲಿ ಲಕ್ಷ್ಮಿಗೆ ಸಂಬಂಧ ಉಂಟೆಂಬುವದು ತೋರಿಬರುತ್ತದೆ.

ಶ್ರೀಯಾಮುನೇಯರವರಭಿಪ್ರಾಯವನ್ನೇ ಅನುಸರಿಸಿ ಯತಿವರ್ಯರೂ, ಲಕ್ಷ್ಮಿಗೆ, ಸರ್ವೇಶ್ವರನಿಗನುರೂಪವಾದ ಸ್ವರೂಪರೂಪಗುಣವಿಭವೈಶ್ವರ್ಯಗಳುಂಟೆಂದು ಉಪಪಾದಿಸಿ, ಲಕ್ಷ್ಮಿಯು **ಅಖಿಲ ಜಗನ್ಮಾತಾ** ಎಂದೂ ಹೇಳಿರುವದರಿಂದ ಜಗತ್ಕಾರಣತ್ವವು ಸೂಚಿಸಲ್ಪಟ್ಟಿರುತ್ತದೆ.

ಈ ಅಭಿಪ್ರಾಯವನ್ನೇ ಸಮರ್ಥಿಸಿಕೊಂಡಿ ಯತಿವರ್ಯರ ಪ್ರಿಯ ಶಿಷ್ಯರಾದ ಶ್ರೀ ಕೂರೇಶರೂ ಶ್ರೀ ಸ್ತವದಲ್ಲಿ,

“ಅಶೇಷ ಜಗತಾಂ ಸರ್ಗೋಪವರ್ಗ ಸ್ಥಿತೀಃ ಸ್ವರ್ಗಂ ದುರ್ಗತಿ
ಮಾಪವರ್ಗಿಕಪದಂ ಸರ್ವಂಚ ಕುರ್ವನ್ನಿರಃ। ಯಸ್ಯಾವೀಕ್ಷ್ಯ
ಮುಖಂತದಿಂಗಿತ ಪರಾಧೀನೋ ವಿಧತ್ತೇಖಿಲಂ” ಎಂದು,

ಲಕ್ಷ್ಮಿಯ ಮುಖವನ್ನು ನೋಡಿ ಆಕೆಯ ಇಂಗಿತವನ್ನರಿತು ಶ್ರೀ

ಹರಿಯು ಸಕಲ ಜಗತ್ತುಗಳ ಸೃಷ್ಟಿಸ್ಥಿತಿಲಯಗಳನ್ನೂ, ಸ್ವರ್ಗ ನರಕ ಪರಮಪದಪ್ರಾಪ್ತಿ ಮೊದಲಾದುವುಗಳನ್ನೂ ನಡಿಸುವನೆಂದೂ, ಹೇಳಿರುತ್ತಾರೆ.

ಈ ಅಭಿಪ್ರಾಯವನ್ನನುಸರಿಸಿಯೇ, ಶ್ರೀಪರಾಶರಭಟ್ಟರವರೂ ಶ್ರೀಗುಣರತ್ನಕೋಶದ ಪ್ರಥಮಶ್ಲೋಕದಲ್ಲಿ **"ಅಂಗೀಕಾರ ಭಿರಾಲೋಕೈಸ್ಸಾರ್ಥಯಂ ತ್ಯೈಕೃತೋಂಜಲಿಃ"** ಸರ್ವೇಶ್ವರನು ಮಾಡುವ ಸೃಷ್ಟಿಕ್ರಮದಲ್ಲಿ ಲಕ್ಷ್ಮಿಯು ತನ್ನ ಅಂಗೀಕಾರವನ್ನು ತೋರಿಸುವ ದಿವ್ಯಕಟಾಕ್ಷದಿಂದ ಸೃಷ್ಟಿಕ್ರಮವನ್ನು ಸಫಲಮಾಡುತ್ತಾಳೆಂದು ಹೇಳಿರುತ್ತಾರೆ. ಪುನಃ ಎರಡನೇ ಶ್ಲೋಕದಲ್ಲೂ **"ಉಲ್ಲಾಸಪಲ್ಲವಿತ ಪಾಲಿತ ಸಪ್ತಲೋಕೀ ನಿರ್ವಾಹ ಕೋರಕಿತ ನೇಮು ಕಟಾಕ್ಷ ಲೀಲಾಂ"** ಎಂಬ ಪ್ರಯೋಗದಿಂದ ಸೂಕ್ಷ್ಮಾವಸ್ಥೆಯಲ್ಲಿದ್ದುದನ್ನು ಸೃಷ್ಟಿ ಮೂಲಕ ಸ್ಥೂಲಾವಸ್ಥೆಗೆ ಬರುವಹಾಗೆ ಉಲ್ಲಾಸವನ್ನುಂಟುಮಾಡಿ, ಆವಿರ್ಭವಿಸಿ ವೃದ್ಧಿ ಹೊಂದಿದ ಮತ್ತು ಪಾಲಿಸಲ್ಪಟ್ಟ ಏಳುಲೋಕಗಳೆಂದು ಹೇಳಿರುವದರಿಂದಲೂ ಜಗತ್ಸೃಷ್ಟಿಯಲ್ಲಿ ಸಂಬಂಧವು ಹೇಳಲ್ಪಟ್ಟಿತು. ಮತ್ತು ಇನ್ನೊಂದುಕಡೆಯಲ್ಲೂ **"ಯದ್ಭ್ರೂಭಂಗಾಃ ಪ್ರಮಾಣಂ ಸ್ಥಿರ ಚರ ರಚನಾ ತಾರತಮ್ಯೇ ಮುರಾರೇಃ"** (4ನೇ ಶ್ಲೋಕ) ಶ್ರೀ ಹರಿಯು ಚರಾಚರಗಳನ್ನು ಸೃಷ್ಟಿಮಾಡುವದರ ತಾರತಮ್ಯದಲ್ಲಿ ಲಕ್ಷ್ಮಿಯು ಹುಬ್ಬಿನ ವಿಕ್ಷೇಪವೇ ಪ್ರಮಾಣವೆಂದು ಹೇಳಿರುತ್ತಾರೆ.

ಆದುದರಿಂದ ಲಕ್ಷ್ಮಿಯ ಕಟಾಕ್ಷದ ಲವಾಂಶವೇ ಮೂರು ಲೋಕಕ್ಕೂ ಅನಂತೋದಯವನ್ನುಂಟುಮಾಡಲು ಸಹಕಾರಿಯೆಂದು ಹೇಳಿದರು. ಅದನ್ನೇ ಉತ್ತರಾರ್ಧದಿಂದ ಸಮರ್ಥನೆ ಮಾಡಿ ಹೇಳುತ್ತಾರೆ. ಲಕ್ಷ್ಮಿಗೆ ಇದಕ್ಕೂ ಹೆಚ್ಚಾದ ಅಭೀಪ್ಸಗಳನ್ನೀಯುವ ಸಾಮರ್ಥ್ಯವಿರುವಲ್ಲಿ ಇಂದ್ರನಿಗೂ ಆತನ ಪರಿವಾರಕ್ಕೂ ಸಕಲೈಶ್ವರ್ಯಗಳು ಪುನಃ ಪ್ರಾಪ್ತವಾಗುವ ಹಾಗೆ ಮಾಡುವದಾಗಲಿ, ಅಥವಾ ಪ್ರಳಯದಲ್ಲಿ ಏನೊಂದೂ ಏಳಿಗೆಯಿಲ್ಲದವುಗಳಿಗೆ ಸಮಸ್ತಾಧಿಕ್ಯವನ್ನುಂಟುಮಾಡುವದೇ ಆಗಲಿ, ಏನೊಂದೂ ಆಶ್ಚರ್ಯವಾದುದಲ್ಲವೆಂದು ವ್ಯತಿರೇಕ ರೂಪದಲ್ಲಿ ಹೇಳುತ್ತಾರೆ.

ಎಂತಹ ಇಹಲೋಕದ ಶ್ರೇಯಸ್ಸುಗಳೇ ಆಗಲಿ, ಇತರ ಲೋಕಗಳದೇ ಆಗಲಿ, ಲಕ್ಷ್ಮಿಯ ಅನುಗ್ರಹವಿಲ್ಲದೆ ದೊರೆಯಲಾರವೆಂದು ಹೇಳುತ್ತಾರೆ. ಆದುದರಿಂದಲೇ **"ಅರವಿಂದ ಲೋಚನ ಮನಃಕಾನ್ತಾ ಪ್ರಸಾದಾದೃತೇ"** ಎಂಬ ಪ್ರಯೋಗವು. ಸ್ವಾಮಿಯು **ಅರವಿಂದಲೋಚನನು,** ಶ್ರುತಿಯೂ **"ತಸ್ಯ ಯಥಾ ಕಪ್ಯಾಸಂ ಪುಂಡರೀಕ ಮೇವ ಮಕ್ಷಿಣೀ"**, ಆ ಕರುಣಾಸಾಗರನ ಕಣ್ಣುಗಳು ಕಮಲದೋಪಾದಿಯಲ್ಲಿರುವಂಥಾದ್ದು ; ಆ ಕಮಲವಂಥಾದ್ದಂದರೆ, **ಕಪ್ಯಾಸಂ ;** ಇದಕ್ಕೆ ಶ್ರೀಮಚ್ಛಂಕರಾಚಾರ್ಯರು ಕಪಿಯ ಪೃಷ್ಟದ ಹಾಗೆ ಕೆಂಪಗಿರುವದು ಎಂದು ಅರ್ಥ ಹೇಳಿದರು. ಈ ಹೀನೋಪಮೆಯನ್ನು ಒಳಗೊಂಡಿರುವರ್ಥವು ಶ್ರೀ ಯತಿವರ್ಯರಿಗೆ ಸಮಂಜಸವಾಗಿ ತೋರದೆ, **ಕಪ್ಯಾಸಂ** ಎಂಬುವದಕ್ಕೆ ಮೂರುವಿಧವಾಗಿ ಅರ್ಥ ಹೇಳಿದರು. "ಕಂಪಿಬತೀತಿ ಕಪಿಃ" ಎಂಬ ವ್ಯುತ್ಪತ್ತಿಯಿಂದ ನೀರನ್ನು ಪಾನಮಾಡುವ ಕಮಲದ ದಂಟು. ಅದನ್ನೇ ಆಶ್ರಯವಾಗಿ ಉಳ್ಳದ್ದು ಕಮಲ ; ಅಥವಾ ನೀರನ್ನು ಪಾನಮಾಡುವವನು ಸೂರ್ಯನು; ಆತನಿಂದ ವಿಕಸಿತವಾದ ಕಮಲವೆಂಬರ್ಥವನ್ನೂ ಹೇಳಬಹುದು. ಸವಿಸ್ತಾರವಾದ ಅರ್ಥಗ್ರಹಣಕ್ಕೆ ಶ್ರೀಭಾಷ್ಯ ೧. ೧. ೨೧. ಸೂತ್ರವನ್ನು ಪರಾಂಬರಿಸಬಹುದು. ಆದುದರಿಂದ ಶ್ರೀ ಯತಿವರ್ಯರ ಅಭಿಪ್ರಾಯವೇನೆಂದರೆ :—ಗಂಭೀರವಾದ ನೀರಿನಲ್ಲಿ ಉತ್ಪನ್ನವಾಗಿ, ಮನೋಹರವಾದ ನಾಳ ಉಳ್ಳದ್ದಾಗಿ, ಸೂರ್ಯಕಿರಣದಿಂದ ವಿಕಸಿತವಾಗಿರುವ ಕಮಲಪ್ರಸ್ಫುಟದ ದಳದೋಪಾದಿಯಲ್ಲಿ ಅಮಲಾಯಿತೇಕ್ಷಣನು ಶ್ರೀ ಹರಿಯು. ಆದುದರಿಂದಲೇ ಭಕ್ತರ ವಿಷಯದಲ್ಲಿ ಆ ಕಣ್ಣಿನ ನೋಟವು, ಮನೋಹರವಾಗಿ ಶೀತಲವಾಗಿ ಪರಮಾನುಗ್ರಹದಾಯಕವು. ಪರಮಭಕ್ತನಾದ ಶರಣಾಗತನಾದ ವಿಭೀಷಣನು ಎದುರಿಗೆ ಬಂದು ನಿಂತ ಒಡನೆಯೇ **"ವಚಸಾ ಸಾಂತ್ವಯಿತ್ವೈನಂ ಲೋಚನಾಭ್ಯಾಂ ಪಿಬನ್ನಿವ"** (ರಾ. ಯು. 19. 7.) ತುಂಬಾ ಅನುಗ್ರಹಸೂಚಕವಾದ ಆ ದಿವ್ಯ ಚಕ್ಷುಸ್ಸುಗಳಿಂದೇನಾದರೂ ಪಾನಮಾಡುವನೋ" ಎಂಬ ಹಾಗೆ ಆತನನ್ನು ತನ್ನ ಶಾಂತವಾದ ಕೃಪಾಸೂಚಕ ಕಟಾಕ್ಷದಿಂದ ಶ್ರೀರಾಮನು ಈಕ್ಷಿಸಿದನು ಎಂದು

ಪೇಳಿರುತ್ತದೆ. ಶ್ರೀರಾಮನ ರೂಪವು ಹೇಗೋ ಹಾಗೆಯೇ ಲಕ್ಷ್ಮೀಕ್ಷ ಯರೂಪವೂ ಸಪ **"ರಾಮಸ್ಯಚ ಯಥಾರೂಪಂ ತಸ್ಯೈಯ ಮಸಿ ತೇಕ್ಷಣಾ"** ಎಂದು ಪೇಳಿರುವ ಹಾಗೆ, ಅಸಿತೇಕ್ಷಣಳು. ಸೀತೆಯು ವಿಲಕ್ಷಣವಾದ ಕಣ್ಣುಗಳನ್ನು ಆಂಜನೇಯನು ಕಮಲಪತ್ರಕ್ಕೇನೇ ಹೋಲಿಸಿರುತ್ತಾನೆ :—

" ಕಿಮರ್ಥಂ ತವ ನೇತ್ರಾಭ್ಯಾಂ ವಾರಿಸ್ರವತಿ ಶೋಕಜಂ ।
ಪುಂಡರೀಕ ಪಲಾಶಾಭ್ಯಾಂ ವಿಪ್ರಕೀರ್ಣ ಮಿವೋದಕಂ ॥

(ರಾ. ಸುಂ. 33. 4.) ಕಮಲಪತ್ರಗಳಿಂದ ಜಾರಿಬೀಳುತ್ತಿರುವ ಉದಕದ ಹಾಗೆ ಏಕೆ ನಿನ್ನ ಕಣ್ಣುಗಳಿಂದ ಕಣ್ಣೀರು ಸುರಿಸುತ್ತೀಯಿ " ಎಂದು ಪೇಳಲ್ಪಟ್ಟಿರುತ್ತದೆ. ಹೀಗೆ **ಅರವಿಂದ ಲೋಚನ ಮನಃಕಾಂತಾ** ಎಂದು ಹೇಳಿರುವದರಿಂದ, ಈ ಇಬ್ಬರ ಕಣ್ಣುಗಳೂ ಮನೋಹರಗಳಾಗಿ ಭಕ್ತಾನುಗ್ರಹದಲ್ಲೇ ಸಕ್ತಗಳು ಎಂಬ ಭಾವವು. ಮೊದಲು ಶ್ಲೋಕದಲ್ಲಿ **ಕಾನ್ತಸ್ತೇ ಪುರುಷೋತ್ತಮಃ** ಎಂದು ಹೇಳಿ ಸರ್ವೇಶ್ವರನು ಅತಿಮನೋಹರನೆಂದು ಹೇಳಿದ ಹಾಗೆ ಇಲ್ಲಿಯೂ **ಮನಃಕಾಂತಾ** ಎಂದು ಕಾಂತಾ ಶಬ್ದ ಉಪಯೋಗಿಸಿರುವದರಿಂದ ಲೋಕಮಾತೆಯು ಅತಿಮನೋಹರಳು ಎಂದೂ, ಈ ಇಬ್ಬರಿಗೂ ಮನೋಹರತ್ವವು ಅವರುಗಳ ಪುಂಡರೀಕಸದೃಶ ನೇತ್ರಗಳ ಮೂಲಕವೆಂದು ಹೇಳಲ್ಪಟ್ಟಿತು.

ಇಂತಹ ಲಕ್ಷ್ಮೀಕಟಾಕ್ಷವೀಕ್ಷಣವಿಲ್ಲದೆ, **ಸಂಸೃತ್ಯಕ್ಷರ ಮೈಷ್ಣವಾಧ್ವಸು** ಎಂದರೆ ಐಹಿಕ ಸ್ವರ್ಗಲೋಕಾದಿಗಳ ಐಶ್ವರ್ಯ, ಕೈವಲ್ಯ, ಮೋಕ್ಷಪ್ರಾಪ್ತಿಗಳುಂಟಾಗುವುದಿಲ್ಲವೆಂದು ಹೇಳುತ್ತಾರೆ. ಇಲ್ಲಿ **ಸಂಸೃತಿ** ಪದವು ಸಂಸಾರವೆಂಬರ್ಥವಾದರೂ, ಪುರುಷಾರ್ಥಗಳೊಂದಿಗೆ ಹೇಳಿರುವದರಿಂದ **ಸಂಸೃತಿ** ಭೋಗ ರೂಪ ಐಶ್ವರ್ಯವೆಂಬರ್ಥದಲ್ಲಿ ಪ್ರಯೋಗಿಸಲ್ಪಟ್ಟಿರುತ್ತದೆ. ಈ ಐಶ್ವರ್ಯವು ಇಹಲೋಕ ಸಂಬಂಧವಾದುದಾಗಲಿ ಅಥವಾ ಪಾರಲೌಕಿಕವಾದುದಾಗಲಿ ಆಗಬಹುದು. ಈ ಮೂರು ಪುರುಷಾರ್ಥಗಳನ್ನೇ ಶ್ರೀ ಪರಾಶರಭಟ್ಟರೂ, ಐಶ್ವರ್ಯ **ಮಕ್ಷರಗತಿಂ ಪರಮಂ ಪದಂ ವಾಕಸ್ಮೃ ಚಿದಂಜಲಿ ಭರಂ ಸ್ಮ**

ಹತೇ ವಿತೀರ್ಯ (ಶ್ರೀಗುಣ. 58) ಎಂಬ ಶ್ಲೋಕವಲ್ಲಿ ಉಪಪಾದಿಸಿ ಲಕ್ಷ್ಮಿಗೆ ಇಹಲೋಕದ ಐಶ್ವರ್ಯವನ್ನೂ ಸ್ವರ್ಗಾದಿ ಲೋಕದ ಐಶ್ವರ್ಯವನ್ನೂ ಕೈವಲ್ಯವನ್ನೂ, ಮೋಕ್ಷವನ್ನೂ ಸಪ ಕೊಡುವ ಶಕ್ತಿಯುಂಟೆಂದು ಹೇಳಿ, ಉತ್ತರಾರ್ಧದಿಂದ ಶ್ರುತಿಯಲ್ಲಿ **ದೀವಪುಷ್ಟ ಮುದಾರಾಂ** ಎಂಬಲ್ಲಿರುವ ಉದಾರ ಶಬ್ದವನ್ನು ಪ್ರತಿಪಾದಿಸಿ ಬಹು ಸ್ವಾರಸ್ಯವಾಗಿ ಲಕ್ಷ್ಮಿಯು ಅತೀವ ಉದಾರಳು ಎಂದು ಉತ್ಪ್ರೇಕ್ಷಿಸಿ ಹೇಳಿರುತ್ತಾರೆ. ಇಲ್ಲಿ ಅಕ್ಷರ ಶಬ್ದದಿಂದ **ಕೈವಲ್ಯವೂ** ವೈಷ್ಣವಾಧ್ವವೆಂಬುವುದರಿಂದ ಪರಮ ಪದವೂ ಹೇಳಲ್ಪಟ್ಟಿರುತ್ತದೆ. ಇದರಿಂದ ಲಕ್ಷ್ಮಿಗೆ ಮುಕ್ತಿಪ್ರದತ್ವವಿಲ್ಲವೆಂಬ ವಾದವು ನಿರಾಕರಿಸಲ್ಪಟ್ಟಿತು. ಶ್ರೀ ಪರಾಶರರೂ, ಲಕ್ಷ್ಮಿಯು **ವಿಮುಕ್ತಿಫಲದಾಯಿನೀ** ಎಂದು ಹೇಳಿರುತ್ತಾರೆ.

ನೃಣಾಂ ಎಂದು ಪ್ರಯೋಗಿಸಿರುವದರಿಂದ **ಈ** ಮೇಲೆ ಹೇಳಿದ ಶ್ರೇಯಸ್ಸುಗಳಿಗೆಲ್ಲಾ, ಜಾತಿ ಕುಲಗೋತ್ರ ವರ್ಣಾದಿಗಳ ತಾರತಮ್ಯವೇನೂ ಇಲ್ಲದೆ, ಎಲ್ಲರೂ ಭಾಗಿಗಳಾಗಬಹುದೆಂಬುವದು ಸ್ಪುಟವಾಗಿ ತೋರುತ್ತದೆ. ಬ್ರಾಹ್ಮಣ ವರ್ಣಾದಿಂದ ಪಂಚಮ ವರ್ಣಾದವರಿಗೂ, ಸರ್ವರೂ ಶರಣಾಗತಿಯನ್ನು ಮಾಡಿ ಈ ಸಕಲವಿಧ ಪುರುಷಾರ್ಥಗಳನ್ನು ಪಡೆಯಬಹುದೆಂಬ ಭಾವವು.

ಹೀಗೆ ಐಶ್ವರ್ಯ ಕೈವಲ್ಯ ವೈಕುಂಠ ಪ್ರಾಪ್ತಿಗಳಿಗೆ **ಶ್ರೇಯಃ**-ಸಾಧಿಸಿಕೊಡತಕ್ಕ ಸುಕೃತವಿಶೇಷವೂ ಕೂಡ ಇವಳ ಕೃಪೆಯಿಂದಲೇ ದೊರೆಯುತ್ತದೆಂಬ ಭಾವವು. ಇದರಿಂದ ಲಕ್ಷ್ಮಿಯು ಯಾವಾಗಲೂ ಅನಪಾಯಿನಿಯಾಗಿ ಸರ್ವೇಶ್ವರನೊಂದಿಗೇ ಇರುವದರಿಂದ ಈಕೆಯೂ ಕೂಡ ದ್ವಯಮನ್ತ್ರದ ಪೂರ್ವಖಂಡದ ಶ್ರೀಮಚ್ಛಬ್ದದಲ್ಲಿ ತೋರುವ ಹಾಗೆ ಚೇತನನಿಗೆ ಉಪಾಯಭೂತಳೆಂದು ಸ್ಥಾಪಿಸಲ್ಪಟ್ಟಿತು.

1. ಆದರೆ ಈ ಸಂದರ್ಭದಲ್ಲಿ ನಮ್ಮ ಪಂಗಡದಲ್ಲೇ ಕೆಲವರ ಅಭಿಪ್ರಾಯವು, ಲಕ್ಷ್ಮಿಯು ಪುರುಷಕಾರರೂಪದಲ್ಲಿ ಉಪಾಯಭೂತಳೇ ವಿನಾ, ಸಾಕ್ಷಾತ್ತಾಗಿಯಲ್ಲವು, ಮತ್ತು ಯಾವಾಗ ಉಪಾಯಭೂತಳಲ್ಲವೋ, ಆಗ ಮೋಕ್ಷಪ್ರದತ್ವವೂ ಇಲ್ಲವು, ಎಂದು ನೆಲಗೊಂಡಿರುತ್ತದೆ. ಇದಕ್ಕೆ ಪ್ರಮಾಣಗಳು ಯಾವುವೆಂದರೆ—

1. ಲಕ್ಷ್ಮೀಂ ಪುರುಷಕಾರೇಣ ವೃತ್ತವನ್ತಃ (ಪಾಂಚರಾತ್ರೇ)
2. ಲಕ್ಷ್ಮೀಃ ಪುರುಷಕಾರೇಣ ವಲ್ಲಭಾ ಪ್ರಾಪ್ತಿಯೋಗಿನಿ.
3. ಲಕ್ಷ್ಮೀಃ ಪುರುಷಕಾರತ್ವೇ ನಿರ್ದಿಷ್ಟಾ. ಇತ್ಯಾದಿಗಳು.

ತನಗೆ ಸ್ವತಃ ಮೋಕ್ಷ ಕೊಡುವ ಶಕ್ತಿಯಿಲ್ಲದೆ, ತನ್ನ ಭರ್ತಾವಿಗೆ ಅಂತಹ ಶಕ್ತಿಯಿರುವದರಿಂದ ಭಕ್ತನ ವಿಷಯದಲ್ಲಿ ವಾಕ್ಸಹಾಯ ಮಾಡುವದೇ ಪುರುಷಕಾರತ್ವವೆನಿಸುವದು. ಲಕ್ಷ್ಮಿಯು ಪತಿಗೆ ಶೇಷಳಾಗಿ, ಅಧೀನಳಾಗಿರುವವಳೆಂಬುದನ್ನು ಸಮರ್ಥನೆ ಮಾಡುವ ದಕ್ಕಾಗಿ ಈ ಭಾವವೂ ಸಾಧಾರಣವಾಗಿ ಉಪಪಾದಿಸಲ್ಪಡುತ್ತದೆ. ಸರ್ವೇಶ್ವರಿಯಾಗಿ ಸರ್ವನಿಯಾಮಕಳಾಗಿ ತನ್ನ ಪತಿಯೊಂದಿಗೆ ಯಾವಾಗಲೂ ಇದ್ದು ಉಭಯ ವಿಭೂತಿಯ ಒಡತಿಯಲ್ಲಿರುವಾಗ ತನ್ನ ಪತಯ ಇಂಗಿತವನ್ನು ಚನ್ನಾಗಿ ಅರಿತವಳಾದ ಪ್ರಯುಕ್ತ, ಉಪಾಯ ಭೂತಗಳಾಗುವ ಮತ್ತು ಮೋಕ್ಷವನ್ನೀಯುವ, ಶಕ್ತಿ ಇವಳಿಗಿಲ್ಲವೆಂದು ಹೇಳಲು ಹೇಗಾಗುತ್ತದೆ? ಲೋಕ ರೂಢಿಯಲ್ಲಿಯೂ ದಂಪತಿಗಳು ಒಂದು ಗೃಹಕೃತ್ಯದಲ್ಲಿರುವಾಗ, ಮಕ್ಕಳಿಗೆ ವಿದ್ಯೆಯನ್ನು ಕಲಿಸುವ ಉಪಾಯ ಭಾಗವು ತಂದೆಗೇನೇ ಸೇರಿದುದು, ತಾಯಿಗೆ ಸೇರಿದುದಲ್ಲವೆಂದು ಹೇಳಲು ಸಾಧ್ಯವೇ? ತಾಯಿಯಾದವಳು ತನ್ನ ಪತಿಯ ಇಷ್ಟದಂತೆ ನಡಿಯುವದೇನೋ ಯುಕ್ತವು. ಆದರೆ ಮಕ್ಕಳಿಗೆ ವಿದ್ಯೆಯನ್ನು ಕಲಿಸಿ ಎಂದು, ಪುರುಷಾಕಾರರೂಪದಲ್ಲಿ ಪತಿಗೆ ಹೇಳಿ ಸುಮ್ಮನೆ ಇರತಕ್ಕದ್ದೇ, ಇಲ್ಲವೇ ಪತಿಯ ಇಂಗಿತವನ್ನರಿತು ತಾನೂ ಕೂಡ ಮಕ್ಕಳ ವಿದ್ಯಾ ಪ್ರವರ್ತನೆಯಲ್ಲಿ ಸಹಕಾರಿಯಾಗಿರುವುದು ಉಚಿತವೇ? ವಾಚಕರೇ ಈ ವಿಷಯದಲ್ಲಿ ಯೋಚಿಸಬಹುದು. ಪತಿಯ ಇಂಗಿತಾನುಸಾರ ನಿರ್ವಾಡುವಾಡಲು ಆಕೆಗೂ ಅಧಿಕಾರವುಂಟು. ಹಾಗೆಯೇ ಲೋಕದಲ್ಲೆಲ್ಲಾ ನಡೆಯುತ್ತಿರುವದನ್ನು ಕಂಡಿರುವೆವು. ಪಾಶ್ಚಾತ್ಯರಲ್ಲಿ ತಾಯಿಯೇ ಇದಕ್ಕೆ ಯೋಗ್ಯಳಾದ ಅಧಿಕಾರಿಯೆಂದು ಭಾವಿಸಿ, ಆಕೆಯ ಮುಖ್ಯ ಕರ್ತವ್ಯವೆಂದೇ ಭಾವಿಸಿರುತ್ತಾರೆ. ಅದೂ ಅಲ್ಲದೆ, ಮಕ್ಕಳ ಮನೋರಥಾನುಗುಣವಾಗಿ ಕೊಡಲು ತಾಯಿಗೆ ಅಧಿಕಾರವಿಲ್ಲವೇ? ತಂದೆಗೆ ಇಷ್ಟವಿಲ್ಲದಿದ್ದರೂ, ಆತನನ್ನು ಒಡಂಬಡುವಹಾಗೆ ಮಾಡಿ, ಕೊಡುವ

ಸಾಮರ್ಥ್ಯವೂ ತಾಯಿಗೆ ಉಂಟು. ಈಗಿನ ಈ ವಿಷಯದಲ್ಲಿ ಕಾಲದ ಹೆಂಗಸರನ್ನು ಕುರಿತು ಹೇಳುವ ಅವಶ್ಯಕವೇ ಇಲ್ಲವು. ಹಾಗೆಯೇ ಲೊಕವೆಂತೆಗೂ ಕೂಡ ತನ್ನ ಪ್ರಜೆಯ ವಿಷಯದಲ್ಲಿ ಉಪಾಯಭೂತಳಾಗಿದ್ದುಕೂಂಡು ಮೋಕ್ಷಪ್ರಾಪ್ತಿಗೆ ಯೋಗ್ಯರಾಗಿ ಮಾಡುವದಕ್ಕೂ, ಹಾಗೆ ಯೋಗ್ಯರಾಗಿ ಪರಿಣಮಿಸಿದರೆ ಮೋಕ್ಷವನ್ನು ಕೊಡುವದಕ್ಕೂ ಅಧಿಕಾರ ಉಂಟು. ಪತಿಯು 'ಇಷ್ಟಾನು ಸಾರವಾಗಿಯೇ ನಡೆಯುವಳಾದ ಪ್ರಯುಕ್ತ, ಉಪಾಯತ್ವವೂ ಪುರುಷಕಾರತ್ವವೂ ಎರಡೂ ಪರಸ್ಪರ ವಿರುದ್ಧ ಧರ್ಮಗಳಾಗುವದಿಲ್ಲವು. ಎರಡೂ ಈಕೆಯಲ್ಲಿ ಸಮಂಜಸವಾದವುಗಳೇ.

೨. ಅನೇಕ ಪ್ರಮಾಣಗಳಲ್ಲಿ, ಪರಮಾತ್ಮನೊಬ್ಬನನ್ನೇ ಉಪಾಯವಾಗಿಯೂ, ಮೋಕ್ಷದಾಯಕನಾಗಿಯೂ ಹೇಳಿದೆಯಲ್ಲಾ, ಆದುದರಿಂದ ಲಕ್ಷ್ಮಿಗೆ ಅವುಗಳಲ್ಲಿ ಅನ್ವಯವಿಲ್ಲವೆಂದು ಇನ್ನೊಂದು ಆಕ್ಷೇಪವು. ಅಂತಹ ಪ್ರಮಾಣಗಳು ಯಾವುವೆಂದರೆ **"ನಾನ್ಯಃ ಪನ್ಥಾ ವಿದ್ಯತೇ ಅಯನಾಯ"** ಆತನನ್ನು ಹೊಂದಲು ಬೇರೆ ಮಾರ್ಗವಿಲ್ಲವು. **"ಯಮೈವೇಷವೃಣುತೇ ತೇನಲಭ್ಯಃ"** "ಯಾವನನ್ನೇ ಸರ್ವೇಶ್ವರನು ರಕ್ಷಿಸಬೇಕೆಂದು ವರಿಸುವನೋ, ಆತನಿಂದಲೇ ಲಭ್ಯನು," **"ಅಮೃತಸ್ಯೈಷ ಸೇತುಃ,"** "ಪರಮಪದಕ್ಕೆ ಈತನೇ ಮಾರ್ಗವು," **"ಮಾಮೇಕಂ ಶರಣಂ ವ್ರಜ,"** "ನನ್ನೊಬ್ಬನನ್ನೇ ಶರಣು ಹೊಂದು, ಇತ್ಯಾದಿ. ಹೀಗೆ ಆಕ್ಷೇಪವನ್ನು ಹೇಳುವಾಗ, ಪರಮಾತ್ಮ ಸ್ವರೂಪವು ಯಾವಾಗಲೂ ಲಕ್ಷ್ಮೀವಿಶಿಷ್ಟವಾಗಿಯೇ ಇರುತ್ತದೆಂಬ ಭಾವವನ್ನು ಮನಸ್ಸಿನಲ್ಲಿಡದೇ ಹೇಳಿದುದೆಂದು ಭಾವಿಸಬೇಕಾಗುತ್ತದೆ. ಸಹಧರ್ಮಚಾರಣಿಯಾಗಿರುವದರಿಂದ ಈಕೆಯೂ ತನ್ನ ಪತಿಯೊಂದಿಗೇನೇ ಉಪಾಯ ಭೂತಳು; **"ಸವಿಹಾತುಂ ಮಯಾ ಶಕ್ಯಾ ಕೀರ್ತಿ ರಾತ್ಮವತಾಯಥಾ"** (ರಾ. ಆಯೋಧ್ಯಾ. 30. 29.) ಕೀರ್ತಿಯಾದುದು ಹೇಗೆ ಮಹಾಯೋಗಿಯನ್ನು ಬಿಟ್ಟಿರಲಾರದೋ, ಹಾಗೆಯೇ ಸೀತೆಯೂ ಕೂಡ ವನವಾಸಕ್ಕೆ ಹೋಗುವ ನನ್ನನ್ನು ಬಿಟ್ಟಿರಲು ಸಾಧ್ಯವಿಲ್ಲವು," ಎಂದು ಹೇಳಿರುವ ಹಾಗೆ, ಲೋಕ ದಂಪತಿಗಳು, ವಾಗರ್ಥಗಳ ಹಾಗೂ ಪ್ರಭೆಭಾಸ್ಕರರ ಹಾಗೂ,

ದೀಪ್ಯಮಣಿಗಳ ಹಾಗೂ, ಮಕರಂದ ಪುಷ್ಪಗಳ ಹಾಗೂ, ನಿತ್ಯಯೋಗವುಳ್ಳವರು. ಆದುದರಿಂದ ಸರ್ವೇಶ್ವರನು ಉಪಾಯವಾದರೆ ಆತನ ಪ್ರಿಯವಲ್ಲಭೆಯೂ ಉಪಾಯವು. ಆದರೆ ಈ ಮೇಲಿನ ಪ್ರಮಾಣಗಳಲ್ಲಿ ಏಕೆ ಹೇಳಲಿಲ್ಲವೆಂದರೆ ಸನ್ನಿಯೋಗ ಶಿಷ್ಟನ್ಯಾಯಪ್ರಕಾರ, ಸಮಾನಪ್ರವೃತ್ತಿಗಳುಳ್ಳವರಾದುದರಿಂದ ವ್ಯರ್ಥ ಕ್ಕರಿಸಿ ಹೇಳಲಿಲ್ಲವು.

3. ಲಕ್ಷ್ಮಿಗೆ ಉಪಾಯತ್ವ ಮೋಕ್ಷಪ್ರದತ್ವಗಳುಂಟೆಂದು ಒಪ್ಪಿದರೆ, ಆಗ ಸ್ವಾಮಿಯಲ್ಲಿ ಶರಣಾಗತಿಯನ್ನು ಅನುಷ್ಠಿಸುವಾಗ, ತನಗೆ ಇನ್ಯಾರೂ ಗತಿಯಿಲ್ಲವೆಂಬುವ ಕಾರ್ಪಣ್ಯವೆಂಬ ಅಜ್ಞವು ಮುಖ್ಯವಾಗಿ ಬೇಕಾದುದರಿಂದ, ಉಪಾಯಕ್ಕೆ ಇನ್ನು ಯಾವುದೊಂದರ ಅಪೇಕ್ಷೆಯೂ ಇಲ್ಲದಿರಬೇಕು; ಆದುದರಿಂದ ಲಕ್ಷ್ಮಿಯು ಉಪಾಯಭೂತಳಾಗಲು ಸಾಧ್ಯವಿಲ್ಲವೆಂದು ಹೇಳುವರು. ಆದರೆ ಲಕ್ಷ್ಮಿಗೆ ಪುರುಷಕಾರತ್ವವನ್ನು ಮಾತ್ರ ಅಙ್ಗೀಕರಿಸಿದರೂ, ಉಪಾಯಕ್ಕೆ ಇನ್ನೊಂದರ ಸಾಪೇಕ್ಷತ್ವವನ್ನು ಹೇಳಿದ ಹಾಗಾಗಲಿಲ್ಲವೇ ಎಂದರೆ, ಸರ್ವೇಶ್ವರನು ಸರ್ವಜ್ಞನಾಗಿ ಜ್ಞಾನ ಶಕ್ತ್ಯಾದಿಗಳಿಂದ ಪರಿಪೂರ್ಣನಾದುದರಿಂದ, ಉಪಾಯರೂಪವಾದ ಕಾರ್ಯದ ಕಾಲದಲ್ಲಿ ಯಾವುದೊಂದರಪೇಕ್ಷೆಯೂ ಇಲ್ಲದೆ ಕೆಲಸವನ್ನಾಣಿ, ಫಲ ಕೊಡುವನು; ಆದುದರಿಂದ ಏನೂ ಬಾಧಕವಿಲ್ಲವೆಂದು ಸಮಾಧಾನ ಹೇಳುವರು. ಹಾಗಾದರೆ, ಇಂತಹ ನಿರುಪಯೋಗವಾದ ಪುರುಷಕಾರತ್ವವನ್ನು ಲಕ್ಷ್ಮಿಯಲ್ಲಾರೋಪಿಸುವುದರ ಫಲವೇನೆಂದು ಕೇಳಬೇಕಾಗುತ್ತದೆ. ಮೇಲೆ ಹೇಳಿದ ಸಮಾಧಾನದಿಂದ ಲಕ್ಷ್ಮಿಯ ಪುರುಷಕಾರತ್ವ ವಿಷಯದಲ್ಲಿ, ಸರ್ವೇಶ್ವರನು ಉದಾಸೀನ ಭಾವವನ್ನು ತೋರಿದಂತಾಯಿತು, ವಾಲ್ಲಭ್ಯಾತಿಶಯಕ್ಕೂ ಕುಂದಕವುಂಟಾಯಿತು. ಲಕ್ಷ್ಮಿಯು ಪತಿಯ ಇಂಗಿತವನ್ನರಿತವಳೂ ಆಗಲಿಲ್ಲವು. ಪುರುಷಕಾರತ್ವವೂ ಅಜಾಗಳಸ್ತನದ ಹಾಗೆ ನಿಷ್ಪ್ರಯೋಜನವಾದುದಾಯಿತು.

4. ಸರ್ವೇಶ್ವರನು ಉಪಾಯಭೂತನಾಗಿ ಶರಣಾಗತರಕ್ಷಕನಾಗಲು ಆತನಲ್ಲಿ ಸೌಶೀಲ್ಯ, ಸೌಲಭ್ಯ, ವಾತ್ಸಲ್ಯ, ಕಾರುಣ್ಯಾದಿ ಗುಣಗಳು ವಿಶೇಷಣಗಳಾಗಿರಬೇಕು; ಮತ್ತು ಯೋಗಿಯ ಧ್ಯಾನಕ್ಕೆ

ದಿವ್ಯ ಮಂಗಳ ವಿಗ್ರಹ ಯುಕ್ತತೆಯೂ ಇರಬೇಕು. ಈ ವಿಶೇಷಣಗಳಾದ ಕಲ್ಯಾಣಗುಣಗಳೂ, ದಿವ್ಯ ಮಜ್ಗಳ ವಿಗ್ರಹವೂ ಉಪಾಯಭೂತ ಕಾರ್ಯಕ್ಕೆ ಉಪಯುಕ್ತವಾದವು. ಹಾಗೆಯೇ ಲಕ್ಷ್ಮ್ಯಯೂ ಕೂಡ ಸರ್ವೇಶ್ವರನಿಗೆ ವಿಶೇಷಣವಾಗಿ ಏಕೆ ಉಪಾಯನಾಗಿರಕೂಡದು, ಎಂದರೆ, ಕಲ್ಯಾಣಗುಣಗಳೂ ದಿವ್ಯಮಜ್ಗಳವಿಗ್ರಹವೂ ಕೂಡ ಕಾರ್ಯಕ್ಕೆ ಉಪಯುಕ್ತವಾದವು, ಲಕ್ಷ್ಮ್ಯಯು ಕಾರ್ಯೋಪಯೋಗಿಯಲ್ಲವು; ಆದುದರಿಂದ ಆಕೆಗೆ ಪುರುಷಕಾರತ್ವ ಮಾತ್ರವೇ ಎಂದು ಹೇಳುತ್ತಾರೆ. ಹಾಗೆ ಕಾರ್ಯೋಪಯೋಗಿತ್ವವೇ ಇಲ್ಲದಿದ್ದರೆ, ಅಂತಹ ನಿರ್ಗಂಧಕುಸುಮದಿಂದ ಯಾವ ಪರಿಮಳವನ್ನು ತಾನೇ ಹೊಂದಬಹುದು? ಇಂತಹ ದುಸ್ಥಿತಿಯಲ್ಲಿ ಲೋಕಮಾತೆಯ ಕೃಪೆಯನ್ನಿಡಬಹುದೋ? ಇದಲ್ಲದೆ ಈ ಕಲ್ಯಾಣಗುಣಗಳಿಗೂ ದಿವ್ಯಮಜ್ಗಳ ವಿಗ್ರಹಕ್ಕೂ, ಉಪಾಯಸಹಕಾರಿ ಭಾವವನ್ನು ಒಪ್ಪಿಕೊಂಡರೆ, ಸರ್ವೇಶ್ವರನ ಉಪಾಯಭಾವಕ್ಕೆ ನೈರಪೇಕ್ಷ್ಯಕ್ಕೆ ಬದಲಾಗಿ ಸಾಪೇಕ್ಷತ್ವವನ್ನು ಒಪ್ಪಿಕೊಂಡ ಹಾಗೆ ಆಗುವದಿಲ್ಲವೇ ಎಂದರೆ, ಈ ಗುಣಗಳು ಆತನ ಬುದ್ಧಿಗೆ ಪ್ರವರ್ತಕವಾದುದರಿಂದ ಬಾಧಕವಿಲ್ಲವೆಂದು ಹೇಳುತ್ತಾರೆ. ಲಕ್ಷ್ಮ್ಯಯಾದರೋ ಪೃಥಕ್ಕೈತನವು, ಆದುದರಿಂದ ಉಪಾಯಕ್ಕೆ ಅಂತಹ ಸಾಪೇಕ್ಷತ್ವವನ್ನಂಗೀಕರಿಸಲಾಗುವದಿಲ್ಲವೆಂದು ಹೇಳುತ್ತಾರೆ. ಆದರೆ ಪೃಥಕ್ಕೈತನವಾದರೂ, ಲಕ್ಷ್ಮ್ಯಯು ಜ್ಞಾನಾದಿ ಗುಣಗಳಿಗೂ, ನಾರಾಯಣನ ಜ್ಞಾನಾದಿ ಗುಣಗಳಿಗೂ ಏನೊಂದೂ ತಾರತಮ್ಯವಿಲ್ಲದುದರಿಂದ, ಆತನ ಗುಣಗಳಿಗೂ ಆತನಿಗೂ **ತಸ್ಮಿನ್ಯದನ್ತಸ್ತದುಪಾಸಿತವ್ಯಂ** ಎಂದು ಹೇಳಿರುವ ಹಾಗೆ ಉಪಾಯತ್ವವನ್ನು ಹೇಗೆ ಒಪ್ಪುಬಹುದೋ, ಹಾಗೆಯೇ ಶ್ರೀ ಮಹಾಲಕ್ಷ್ಮ್ಯಯ ಗುಣಗಳಿಗೂ, ಆಕೆಗೂ ಉಪಾಯತ್ವವನ್ನಂಗೀಕರಿಸುವದರಲ್ಲಿ ಯಾವ ಅಭ್ಯಂತರವೂ ತೋರುವದಿಲ್ಲವು.

5. ಲಕ್ಷ್ಮ್ಯಗೆ ಉಪಾಯತ್ವವನ್ನು ಒಪ್ಪಿಕೊಂಡರೆ ಈಶ್ವರನಶಕ್ತಿ ಪ್ರಾಶಸ್ತ್ಯ, ಸ್ವಾತಂತ್ರ್ಯ ಮೊದಲಾದವುಗಳಿಗೆ ಕುಂದಕ ಉಂಟಾಗುವದಿಲ್ಲವೇ ಎಂದು ಇನ್ನೊಂದು ಆಕ್ಷೇಪಣೆಯು. ಹಾಗೇನೂ ಕುಂದಕ ಉಂಟಾಗುವದಿಲ್ಲವೆಂದು ಶ್ರೀ ಪರಾಶರ ಭಟ್ಟರವರು ಬಹು

ಸ್ವಾರಸ್ಯವಾಗಿ ಮುಂದಿನ ಅಮೋಘಶ್ಲೋಕದ ಮೂಲಕ ಉಪಪಾದನೆ ಮಾಡಿರುತ್ತಾರೆ.

ಸ್ವತಃ ಶ್ರೀಃ ತ್ವಂ ವಿಷ್ಣೋ ಸ್ಸ್ವಮಸಿತತ ಏವೈಷಭಗವಾ
ತ್ವದಾಯತ್ತರ್ಧಿತ್ವೇ ಪ್ಯಭವ ದಪರಾಧೀನ ವಿಭವಃ ।
ಸ್ವಯಾ ದೀಪ್ತ್ಯಾರತ್ನಂ ಭವದಪಿ ಮಹಾರ್ಹಂನ ವಿಗುಣಂ ।
ನ ಕುಂಠ ಸ್ವಾತನ್ತ್ರ್ಯಂ ಭವತಿಚವಚಾನ್ಯಾಹಿತ ಗುಣಂ.

(ಶ್ರೀಗುಣ. 31) ಓ ಲಕ್ಷ್ಮ್ಯಯೇ, **ನೀನಾಗಿಯೇ** ವಿಷ್ಣುವಿನ ಪದಾರ್ಥವಾಗಿದ್ದೀಯೇ. ನೀನು ಹೀಗೆ ಆತನಿಗೆ ಅಧೀನವಾಗಿದ್ದರೂ, ಆತನ ಸರ್ವಸಮೃದ್ಧಿಗೂ, ಆಧಿಕ್ಯಕ್ಕೂ ನೀನೇ ಕಾರಣಭೂತಳಾಗಿದ್ದೀ. ಆದರೂ ಸರ್ವೇಶ್ವರನು ನಿನಗಾಗಲಿ ಇತರರಿಗಾಗಲಿ ಅಧೀನನಾದನೆಂಬುವದಿಲ್ಲವು. ಹೇಗೆಂದರೆ ರತ್ನವು ತನ್ನಲ್ಲಿ ಸೇರಿರುವ ಕಾಂತಿಯಿಂದ ತುಂಬಾ ಬೆಲೆಯುಳ್ಳದ್ದಾಗುತ್ತದೆ, ಆದರೂ ದೀಪ್ತಿಯಿಂದ ಮಹಿಮೆಹೊಂದಿತೆಂದು ಯಾರೂ ರತ್ನವನ್ನು ಅನಾದರಿಸುವದಿಲ್ಲವು. ಅದರ ಸ್ವಾತಂತ್ರ್ಯಕ್ಕೇನೂ ಹಾನಿ ಇಲ್ಲವು. ಏಕೆಂದರೆ ರತ್ನವು ಅವೋಘವಾದುದೆಂದೇ ಹೇಳುವರು. ಹೊರಗಿನಿಂದ ಬಂದ ಗುಣವು ರತ್ನಕ್ಕೆ, ಎಂದು ಯಾರು ಹೇಳುವದಿಲ್ಲವು ಎಂಬುವದು ಈ ಶ್ಲೋಕ ತಾತ್ಪರ್ಯವು. ಹಾಗೆಯೇ ಲಕ್ಷ್ಮಿಯೂ ಉಪಾಯಭೂತಳಾಗುವದರಿಂದ ಸರ್ವೇಶ್ವರನ ಮಹಿಮೆಗೆ ಏನೂ ಕುಂದಕವಿಲ್ಲವು. ಮಹಾ ಕರುಣಾಸಾಗರನು, ಶರಣಾಗತರಕ್ಷಕನು ಎಂಬಿವೇಮೊದಲಾದ ಹೆಚ್ಚುಮಹಿಮೆಗೆಲ್ಲಾ ಅನುಗ್ರಹಮಯಳಾದ ಲಕ್ಷ್ಮೀಸಾನ್ನಿಧ್ಯವೇ ಕಾರಣವು.

6. ಲಕ್ಷ್ಮ್ಯಾಸಹಹೃಷೀಕೇಶೋ ದೇವ್ಯಾಕಾರುಣ್ಯ ರೂಪಯಾ
ರಕ್ಷಕ ಸ್ಸರ್ವಸಿದ್ಧಾನ್ತೇ ವೇದಾನ್ತೇಷುಚ ಗೀಯತೇ ॥

ಎಂಬ ಲಕ್ಷ್ಮೀತಂತ್ರ ಶ್ಲೋಕದಲ್ಲಿ ಲಕ್ಷ್ಮಿಗೆ ಉಪಾಯತ್ವವು ಬಹು ಸ್ಫುಟವಾಗಿ ಪ್ರತಿಪಾದಿತವಾಗಿರುತ್ತದೆ. ಲಕ್ಷ್ಮಿಗೆ ಉಪಾಯತ್ವವನ್ನು ಹೇಳಲು ಇಷ್ಟವಿಲ್ಲದುದರಿಂದ ಈ ಶ್ಲೋಕವೂ ಕೂಡ ಅಂತಹ ಉಪಾಯತ್ವವನ್ನು ಬೋಧಿಸುವದಿಲ್ಲವೆಂದೂ, ಲಕ್ಷ್ಮ್ಯಾಸಹ ಎಂಬ ತೃತೀಯವು ಅಪ್ರಧಾನಾರ್ಥದಲ್ಲಿ ಉಪಯೋಗಿಸಲ್ಪಟ್ಟಿರುತ್ತದೆಂದು ಹೇಳು

ತ್ತಾರೆ. ಹೃಷೀಕೇಶನೇನೋ ರಕ್ಷಕನು ಹೌದು; ಲಕ್ಷ್ಮ್ಯಾಸಹ ಎಂದು ಹೇಳಿರುವದರಿಂದ ಲಕ್ಷ್ಮಿಯೂ ರಕ್ಷಕಳಾಗಿರಬಹುದು, ರಕ್ಷಕಳಲ್ಲದೆಯೂ ಇರಬಹುದು. ಲಕ್ಷ್ಮಿಯೊಂದಿಗಿರುವ ಹೃಷೀಕೇಶನು ರಕ್ಷಕನು ಎನ್ನುವದರಿಂದ ಲಕ್ಷ್ಮಿಯು ರಕ್ಷಕಳಾಗಿರಬೇಕೆಂಬ ನಿಯಮವಿಲ್ಲವು. ಹೇಗೆಂದರೆ ಮೊಗುವಿನೊಂದಿಗೆ ಇರುವ ಆ ಮನುಷ್ಯನು ಭಾರವನ್ನು ಹೊತ್ತನು, ಎಂದರೆ ಮೊಗುವೂಕೂಡ ಭಾರವನ್ನು ಹೊತ್ತಿತು ಎಂದು ಹೇಗೆ ಆಗುವದಿಲ್ಲವೋ ಹಾಗೆ ಎಂಬ ಭಾವವು. ಇಂತಹ ತೃತೀಯೆಗೆ ಅಪ್ರಧಾನತೃತೀಯೆ ಎಂದು ಹೆಸರು; ಲಕ್ಷ್ಮ್ಯಾಸಹ ಎಂಬಲ್ಲೂ ಹಾಗೆಯೇ ಎಂದು ಹೇಳುವರು, ಇಲ್ಲಿ ಲಕ್ಷ್ಮಿಗೆ ಉಪಾಯತ್ವವಿಲ್ಲದಿದ್ದರೆ, ಲಕ್ಷ್ಮ್ಯಾಸಹ ಎಂಬ ಪ್ರಯೋಗದ ಅವಶ್ಯಕತೆ ಏನು? ಅದೂ ಅಲ್ಲದೆ ಸರ್ವೇಶ್ವರನಿಗೆ ಉಪಾಯತ್ವ ಹೇಳುವ ಈ ವಾಕ್ಯದಲ್ಲಿ ಪ್ರಥಮತಃ, ಲಕ್ಷ್ಮ್ಯಾಸಹ ಎಂದು ಪ್ರಯೋಗಿಸಿರುವದರಿಂದ ಪ್ರಧಾನವಾದ ಪ್ರಯೋಗವಾಗಿರುತ್ತದೆ. ಅದೂ ಅಲ್ಲದೆ, ಸುಮ್ಮನೆ ಲಕ್ಷ್ಮ್ಯಾಸಹ ಎಂದು ಹೇಳದೆ, ಅವಳಲ್ಲಿ ಅತಿಶಯವನ್ನು ತೋರಿಸುವದಕ್ಕಾಗಿಯೂ, ಹಾಗೆ ಉಪಾಯಭೂತಳಾಗಿರಲು ಅರ್ಹತೆಯನ್ನು ವಿಶದೀಕರಿಸುವದಕ್ಕಾಗಿಯೂ, ಎರಡು ವಿಶೇಷಣಗಳು ಪ್ರಯೋಗಿಸಲ್ಪಟ್ಟವೆ; **ದೇವ್ಯಾ ಕಾರುಣ್ಯರೂಪಯಾ** – ದಿವ್ ಕ್ರೀಡನೇ ಎಂಬ ಧಾತುವಿನಿಂದ ಬಂದ ದೇವ್ಯಾ ಎಂಬ ಪ್ರಯೋಗದಿಂದ ಲೀಲಾ ವಿಭೂತಿಯಲ್ಲಿ ಪರವಾದರವೂ, **ಕಾರುಣ್ಯರೂಪಯಾ** ಎಂಬುವದರಿಂದ ಅನುಗ್ರಹಿಸುವ ಕೃಪೆಯೂ, ಲಕ್ಷ್ಮಿಯಲ್ಲಿ ಹೇಳಿರುವದರಿಂದ ಉಪಾಯ ಭೂತಗಳಾಗಿರಲು ತುಂಬಾ ಅರ್ಹಳೆಂದು ಹೇಳಿ, ಉಪಾಯತ್ವವನ್ನು ಲಕ್ಷ್ಮಿಗೂ ಸ್ಥಾಪಿಸಿ ಹೇಳಿರುತ್ತದೆ.

7. ಶ್ರೀಮದ್ರಾಮಾಯಣದಲ್ಲಿ, ಸೀತೆಯು ರಾವಣನಿಂದ ಬಯ್ಯಲ್ಪಟ್ಟಾಗಲೂ, ಅಶೋಕವನದಲ್ಲಿ ಸೆರೆಯಲ್ಲಿಡಲ್ಪಟ್ಟಾಗಲೂ, ದುರುಳರಾವಣನಿಗೆ ಏನೊಂದು ತೊಂದರೆಯನ್ನೂ ಮಾಡದಿರುವದರಿಂದ, ಆಕೆಯು ಉಪಾಯತ್ವ, ಮೋಕ್ಷಪ್ರದತ್ವಗಳಲ್ಲಿ ಸ್ವಾತಂತ್ರ್ಯವನ್ನು ವಹಿಸುವಳಲ್ಲವೆಂದೂ, ಪತಿಪಾರಾರ್ಥ್ಯವೇ ಈಕೆಗೆ ಮುಖ್ಯವಾದುದರಿಂದ, ಇಂತಹ ಪತಿಯ ಅಧಿಕಾರ ವಿಷಯದಲ್ಲಿ ಪ್ರವೇಶಿಸುವಳಲ್ಲ

ವೆಂದೂ ಪೇಳುವರು. ಅಧಿಕಾರ ವಿಷಯದಲ್ಲಿ ಬಂದುವೇಳೆ ಪ್ರಮೇಶಿಸವೇ ಇದ್ದರೆ, ಅಧಿಕಾರವೇ ಇಲ್ಲವೆಂದು ಹೇಳಲಾಗುತ್ತದೆಯೇ? ಬಬ್ಬ ಅಧಿಕಾರಿಯು ತಪ್ಪುಮಾಡಿದವರಿಗೆ ಶಿಕ್ಷಿಸದೆ ಕರುಣೆಯಿಂದ ಮನ್ನಿಸಿಬಿಟ್ಟರೆ ಶಿಕ್ಷಿಸುವ ಶಕ್ತಿಯೇ ಇಲ್ಲವೆಂದು ಹೇಳಲಾಗುತ್ತದೆಯೇ? ಅಥವಾ ಅನುಗ್ರಹಿಸುವಾಗಲೂ, ಶಿಕ್ಷಿಸುವಾಗಲೂ ಪತಿಯ ಇಂಗಿತವನ್ನರಿತು ಪ್ರವರ್ತಿಸಕೂಡದೇ? ಯದ್ಯಪಿ ಲಕ್ಷ್ಮ್ಮಯು ಪತಿಗೆ ಶೇಷಭೂತಳೇನೋ ಹೌದು. ತನ್ನ ಸರ್ವಜ್ಞತೆಯಿಂದ ಪತಿಯ ಮನಸ್ಸನ್ನು ಚನ್ನಾಗಿ ಅರಿತಿರುವಾಗ, ಭಕ್ತನ ವಿಷಯದಲ್ಲಿ ಉಪಾಯ ರೂಪಕರ್ತವ್ಯಾಂಶವನ್ನು ಪತಿಯೇ ನೆರವೇರಿಸಿದರೇನು? ಅಥವಾ ಲಕ್ಷ್ಮ್ಮಯೇ ನೆರವೇರಿಸಿದರೇನು? ಅದರಲ್ಲೇನೊಂದೂ ವ್ಯತ್ಯಾಸವಿಲ್ಲವು. ಲೋಕವಂಪತಿಗಳೆಲ್ಲೂ ಇಂತಹ ಏರ್ಪಾಡುಗಳು ಯಾವಾಗಲೂ ಇದ್ದೇ ಇರುತ್ತವೆ. ಸೀತೆಯು ತನ್ನ ಸರ್ವಜ್ಞತೆಯಿಂದ ಪತಿಯ ಇಂಗಿತವನ್ನು ತಿಳಿದವಳಾದುದರಿಂದಲೇ ತನ್ನನ್ನು ರಾವಣನು ಅಪಹರಿಸಿದ ಕಾಲದಲ್ಲೂ, ಅಶೋಕವನದಲ್ಲಿ ತುಂಬಾ ತೊಂದರೆಯನ್ನು ಮಾಡಿದ ಕಾಲದಲ್ಲೂ, **"ನತ್ವಾಂ ಕುರ್ಮಿದಶಗ್ರೀಹ ಭಸ್ಮ ಭಸ್ಮಾರ್ಪಿತೇಜಸಾ"** ಎಂದು ಪೇಳಿದ ಹಾಗೆ, ಪಾತಿವ್ರತ್ಯದ ತೇಜಸ್ಸಿನಿಂದ ರಾವಣನನ್ನು ಭಸ್ಮಮಾಡಬೇ ಬಿಟ್ಟಳು. ಆಂಜನೇಯನು, ತನ್ನ ಬೆನ್ನನ್ನು ಆರೋಹಿಸಿದರೆ ತೀಫ್ರದಲ್ಲೇ ರಾಮನಲ್ಲಿಗೆ ಕರೆದು ಕೊಂಡು ಹೋಗುತ್ತೇನೆಂದು ಹೇಳಿದರೂ ಒಪ್ಪಲಿಲ್ಲವು. ಏಕೆಂದರೆ ತನ್ನ ಪ್ರಿಯವಲ್ಲಭನ ಅಭಿಪ್ರಾಯವು ರಾವಣನೊಬ್ಬನನ್ನು ಮಾತ್ರ ಕೊಲ್ಲಬೇಕೆಂದಲ್ಲವು. ಲೋಕದಲ್ಲಿರುವ ಸರ್ವರಾಕ್ಷಸರೂ ಹತರಾಗಬೇಕೆಂಬುದನ್ನು ಸೀತೆಯು ತನ್ನ ಸರ್ವಜ್ಞತೆಯಿಂದ ತಿಳಿದುದ್ದರಿಂದಲೇ,

ಬಲಾನಿ ಸಂಕುಲಾಂ ಕೃತ್ವಾ ಲಂಕಾಂ ಪರಬಲಾರ್ದನಃ।
ಮಾಂನಯೀಷ್ಯತಿ ಕಾತುಸ್ಸ್ಥಃ ತತ್ತಸ್ಯ ಸದೃಶಂ ಭವೇತ್"

ಸರ್ವಸೈನ್ಯಾದೊಂದಿಗೆ ಅತಿತ್ವರ ಸಂಹಾರಕನಾದ ತನ್ನ ಪ್ರಿಯವಲ್ಲಭನು ಬಂದು ಲಂಕೆಯನ್ನು ಮುತ್ತಿ, ರಾಕ್ಷಸರನ್ನೆಲ್ಲಾ ನಿರ್ಮೂಲಮಾಡಿ, ತನ್ನನ್ನು ಕರೆದುಕೊಂಡು ಹೋದರೆ, ಆಗೀಗ ಅತನ ಪರಾಕ್ರಮಕ್ಕೆ

ಸದೃಶವಾಗಿ ನಡಿಸಿದಹಾಗೆ ಆಗುತ್ತದೆಂದು ಆಂಜನೇಯನ ಮೂಲಕ ಹೇಳಿಕಳುಹಿಸಿದಳು. ಇದರಿಂದ ಲಕ್ಷ್ಮ್ಯಾಯು ಉಪಾಯಭೂತಳೆಂದು ಹೇಳಿದ ಹಾಗಾಯಿತು. ಸರ್ವರಾಕ್ಷಸನಾಶಕ್ಕೆ ಇವಳು ಕಾರಣ ವಾಗಿಯೂ ರಾವಣನು ತನ್ನ ಸರ್ವೈಶ್ವರ್ಯವನ್ನೂ ಕಳೆದುಕೊಳ್ಳುವ ದಕ್ಕೆ ಇವಳೇ ಮೂಲಭೂತಳಾದುದರಿಂದ ಉಪಾಯತ್ವವನ್ನು ಸ್ಥಾಪಿ ಸಿದ ಹಾಗಾಯಿತು.

8. ಇನ್ನೊಂದು ವಿವಾದಾಸ್ಪದವಾದ ವಿಷಯವೇನೆಂದರೆ :— ಸ್ವಯಮಂತ್ರದಲ್ಲಿ ಪೂರ್ವಖಂಡವು ಉಪಾಯವನ್ನೂ, ಉತ್ತರ ಖಂಡವು ಉಪೇಯವನ್ನೂ, ಬೋಧಿಸುವದಾಗಿ, ಲಕ್ಷ್ಮ್ಯೀಯುಕ್ತ ನಾದ ನಾರಾಯಣನೇ ಉಪಾಯೋಪೇಯವೆಂಬದಾಗಿ ಮನ್ತ್ರವು ಸ್ಥಾಪಿಸುತ್ತದೆ. ಎರಡು ಕಡೆಯಲ್ಲೂ ನಾರಾಯಣ ಶಬ್ದಕ್ಕೆ ಶ್ರೀಮ ಚ್ಛಬ್ದವು ವಿಶೇಷಣವಾಗಿರುತ್ತದೆ. ಹೀಗೆ ಎರಡು ಕಡೆಯಲ್ಲೂ ಒಂದೇ ಪದವಿದ್ದರೂ, ಮೊದಲಿನ ಶ್ರೀಮಚ್ಛಬ್ದವು **ಉಪಲಕ್ಷಣ** ವೆಂದೂ, ಎರಡನೇ ಶ್ರೀಮಚ್ಛಬ್ದವು ವಿಶೇಷಣವೆಂದೂ ಹೇಳುವರು. ಹೀಗೆ ಹೇಳಲು ಕಾರಣವೇನೆಂದರೆ ;—ಉಪಾಯಭಾವದಲ್ಲಿ ಲಕ್ಷ್ಮಿಗೆ ಸಂಬಂಧವಿಲ್ಲವೆಂದೂ, ಉಪೇಯತ್ವದಲ್ಲಿ ಮಾತ್ರ, ಕೈಂಕರ್ಯವೇ ಮುಖ್ಯವಾಗಿ, ಆ ಕೈಂಕರ್ಯವು ಇಬ್ಬರಿಗೂ ಉಚಿತವಾದುದರಿಂದ, ಉಪೇಯದಲ್ಲಿ ಮಾತ್ರ, ಲಕ್ಷ್ಮ್ಯೀಯುಕ್ತತೆಯು ಸರಿ, ಎಂದು ಹೇಳು ವರು. ಉಪಾಯಭಾವದಲ್ಲೂ ಶ್ರೀಮಚ್ಛಬ್ದ ವಿಶೇಷಣವಾದರೆ, ಲಕ್ಷ್ಮ್ಯೀಗೂ ಉಪಾಯತ್ವವು ಸಂಬಂಧಿಸುತ್ತದೆ. ತನ್ನಿವಾರಣಾರ ಥವಾಗಿ **ಉಪಲಕ್ಷಣ**ವೆನ್ನುತ್ತಾರೆ. ಉಪಲಕ್ಷಣವೆಂದರೆ ಉದ್ದೇಶಿಸ ಲ್ಪಟ್ಟ ವಸ್ತುವಿಗೆ ಹೊರಗೆ ಇರುವಂಥಾದ್ದಾಗಿ, ವಸ್ತುವನ್ನು ತಿಳಿಯಲು ಸಹಕಾರಿಯಾಗಿರುವ ಧರ್ಮವು. ಚಂದ್ರನು ಎಲ್ಲಿದ್ದಾನೆಂದರೆ, ಆ ಶಾಖೆಯಮೇಲೆ ತೋರುತ್ತಾನೆ ನೋಡು ಎಂದು ಹೇಳುವದಕ್ಕಾಗಿ, ಶಾಖೆಯ ಮೇಲಿನ ಚಂದ್ರನು ಎಂದು ಹೇಳುವ ಶಾಖಾಚಂದ್ರನ್ಯಾಯ ದಲ್ಲಿ, ಶಾಖೆಯು ಉಪಲಕ್ಷಣವು. ಹಾಗೆಯೇ ಇಲ್ಲೂ, ಶ್ರೀಮನ್ನಾರಾ ಯಣ ಎಂಬಲ್ಲೂ, ನಾರಾಯಣನು ಯಾರು ಎಂದರೆ ಲಕ್ಷ್ಮ್ಯೀವಲ್ಲಿಭನು, ಇಷ್ಟೇ ಅಭಿಪ್ರಾಯವೇ ವಿನಾ, ಅವಳೂ ಉಪಾಯಭೂತಳಲ್ಲವೆಂದು

ಅಭಿಪ್ರಾಯಪಡುತ್ತಾರೆ. ಹಾಗೆ ಇಬ್ಬರೂ ಉಪಾಯವಾಗಿದ್ದ ಪಕ್ಷದಲ್ಲಿ, ಮಂತ್ರದಲ್ಲಿ **ಚರಣೌ** ಎಂಬ ದ್ವಿವಚನವು ಸರಿಯಲ್ಲವೆಂದೂ, ಜಾತ್ಯೇಕವಚನವಾದ **ಚರಣಂ** ಎಂಬ ಶಬ್ದವಾಗಲಿ ಅಥವಾ **ಚರಣಾಃ** ಎಂಬ ಬಹುವಚನವಾಗಲಿ ಇರಬೇಕಾಗಿತ್ತು ಎಂದೂ ಅಭಿಪ್ರಾಯಪಡುವರು. ಇಲ್ಲಿ ನಿತ್ಯಾನಪಾಯಿನಿಯಾಗಿರುವ ಲಕ್ಷ್ಮಿಯು ವಿಶೇಷಣವು, ನಾರಾಯಣನು ವಿಶೇಷ್ಯವು, ಆದುದರಿಂದ ವಿಶೇಷ್ಯದಲ್ಲಿ ಮಾಡಿದ ಶರಣಾಗತಿಯು ಇಬ್ಬರಲ್ಲೂ ಅನ್ವಯಿಸುವುದರಿಂದ, ಮಂತ್ರವು ಲಕ್ಷ್ಮಿಗೆ ಉಪಾಯತ್ವವಿದ್ದರೂ, ಚರಣೌ ಎಂದು ಹೇಳಿರುವದೇನೂ ಅಸಮಂಜಸವಾದುದಲ್ಲವು. ಲೋಕದಲ್ಲೂ ಕೂಡ ದಂಪತಿಗಳು ಒಟ್ಟಿಗೆ ಬಂದೇ ಪೀಠವನ್ನಲಂಕರಿಸಿರುವಾಗ, ಶಿಷ್ಯನು ಅವರುಗಳಿಗೆ ಪ್ರತ್ಯೇಕ ಪ್ರತ್ಯೇಕ ಪ್ರಣಾಮಗಳನ್ನು ಮಾಡುವುದು ಕಂಡಿಲ್ಲವು. ವಿಶೇಷ್ಯವೇ ಪ್ರಧಾನವೆಂಬ ಭಾವನೆಯಿಂದ ಚರಣೌ ಎಂಬ ಪ್ರಯೋಗವು' ಇದರಿಂದ ಅಪೃಥಕ್ಸಿದ್ಧ ವಿಶೇಷಣವು ಈ ಸಂದರ್ಭದಲ್ಲಿ ವಿಶೇಷ್ಯಕ್ಕಿಂತ ಹೊರಗೆ ಎಂದು ಭಾವಿಸುವದು ತಾನೇ ಹೇಗೆ? ಇದೂ ಅಲ್ಲದೆ ಉಪಲಕ್ಷಣವೆಂದು ಹೇಳುವ ಕಡೆಯಲ್ಲೇ ಶ್ರೀಮಚ್ಛಬ್ದವು ಸಮಾಸಪದವಾಗಿರುತ್ತದೆ. ವಿಶೇಷಣವೆಂದು ಹೇಳುವ ಕಡೆಯಲ್ಲಿ ಬೇರೇ ಪದವಾಗಿರುತ್ತದೆ; ಬೇರೆ ಪದವಾಗಿರುವಾಗಲೇ ವಿಶೇಷಣವಾದರೆ, ಸಮಾಸಪದವಾಗಿರುವಾಗ ವಿಶೇಷಣವಲ್ಲವೇ? ಒಂದೇ ಮಂತ್ರದಲ್ಲಿ **ಮತುಪ್** ಪ್ರತ್ಯಯಯುಕ್ತವಾದ ಶ್ರೀಮಚ್ಛಬ್ದವಿದ್ದರೂ, ಒಂದು ಕಡೆಯಲ್ಲಿ ಒಂದರ್ಥವನ್ನೂ, ಇನ್ನೊಂದುಕಡೆಯಲ್ಲಿ ಇನ್ನೊಂದರ್ಥವನ್ನೂ ಕಲ್ಪಿಸುವದು ಯಾವ ನ್ಯಾಯವೋ ತಿಳಿಯದು. ಆದುದರಿಂದ ಎರಡು ಕಡೆಯಲ್ಲೂ ಶ್ರೀಮಚ್ಛಬ್ದವು ವಿಶೇಷಣವೆಂದು ಭಾವಿಸುವದೇ ಯುಕ್ತವು. ನಮ್ಮಾಳ್ವಾರವರೂ, ಶ್ರೀಮನ್ನಾಥ ಮುನಿಗಳೂ, ಯಾಮುನ ಮುನಿಗಳೂ, ಶ್ರೀ ಯತಿವರ್ಯರೂ ಮೊದಲಾದವರುಗಳ ಅಭಿಪ್ರಾಯಕ್ಕೆ ವಿರುದ್ಧವಾದ ಅಭಿಪ್ರಾಯವನ್ನವಲಂಬಿಸುವದು ನ್ಯಾಯವಲ್ಲವು. **ಶ್ರದ್ಧಯಾದೇವೋ ದೇವತ್ವಮಶ್ನುತೇ** ಎಂಬ ಶ್ರುತ್ಯನುಸಾರ, ಲಕ್ಷ್ಮಿಯು ವಿಶೇಷಣವೆಂದೂ, ಹಾಗೆ ಸವಿಶೇಷಣನಾಗಿಯೇ ಎಲ್ಲಾ ಲೀಲಾ ವ್ಯಾಪಾರಗಳನ್ನು ಸರ್ವೇಶ್ವರನು ನಡಿಸುವನೆಂದೂ

ಹೇಳುವದೇ ಸರ್ವಸಮಂಜಸಾಭಿಪ್ರಾಯವು. ಇನ್ನೊಂದು ಮುಖ್ಯ ನ್ಯಾಯ ಉಂಟು, ಏನೆಂದರೆ :—ಪದಗಳಿಗೆ ಅರ್ಥವನ್ನು ಕಲ್ಪಿಸುವದರಲ್ಲಿ ಮುಖ್ಯಾರ್ಥವನ್ನೇ ಎಲ್ಲಾ ಕಡೆಯಲ್ಲೂ ಉಪಯೋಗಿಸತಕ್ಕದ್ದೆಂದೂ, ಹಾಗೆ ಪ್ರಧಾನಾರ್ಥ ಹೇಳಲು ಏನಾದರೂ ಅರ್ಥಾಭಾಸವುಂಟಾದರೆ ಆಗ ಬೇರೆ ವಿಧವಾಗಿ ಅರ್ಥಹೇಳಬೇಕೆಂದೂ ನಿಯಮವಿರುವುದರಿಂದ ಶ್ರೀವಚ್ಛಬ್ದಕ್ಕೆ ಎರಡುಕಡೆಯಲ್ಲೂ **ಮತುಪ್** ಪ್ರತ್ಯಯಕ್ಕನುಗುಣವಾದ ಮುಖ್ಯಾರ್ಥ ಹೇಳುವದೇ ನ್ಯಾಯವು. ಹಾಗೆಯೇ ಈ ಶ್ಲೋಕದಲ್ಲೂ ಕೂಡ **ಸಂಸೃತ್ಯಕ್ಷರ ವೈಷ್ಣವಾಧ್ವಸು** ಎಂದು ಸಮಾನಪದವಾಗಿ ಶ್ರೀಯಾಮುನೇಯರು ಉಪಯೋಗಿಸಿರುವಾಗ, ಸಂಸೃತ್ಯಕ್ಷರಗಳಲ್ಲಿ ಮಾತ್ರ ಲಕ್ಷ್ಮ್ಯಯು ಸಾಕ್ಷಾತ್ತಾಗಿಯೇ ಉಪಾಯವೆಂದೂ, **ವೈಷ್ಣವಾಧ್ವ**ದಲ್ಲಿ ಮಾತ್ರಪುರುಷಕಾರ ರೂಪದಲ್ಲಿ ಉಪಾಯವೂ ಎಂದು ಹೀಗೆ ಅಧಿಕಾರಭೇದವನ್ನು ಕಲ್ಪಿಸುವದು ಹೇಗೆ ಸಾಧ್ಯವೋ ಜ್ಞಾನಾಧಿಕಾರಿಗಳು ವಿಮರ್ಶಿಸಬಹುದು.

9. ಲೋಕನಾಥದಯಿತೆಯಾಗಿ ಲೋಕೈಕೇಶ್ವರಿಯಾಗಿರುವ ವಳಿಗೂ ಉಪಾಯದಲ್ಲೂ ಅನ್ವಯ ಉಂಟೆಂದು ಶ್ರೀನಿಗಮಾನ್ತ ಮಹಾದೇಶಿಕರೇ ಮೊದಲಾದವರು ಅನೇಕ ಪ್ರಮಾಣಗಳನ್ನು ಉದಾಹರಿಸಿರುತ್ತಾರೆ :—

(1) ಶ್ರೀಸೂಕ್ತದಲ್ಲಿ **ಶರಣ ಮಹಂ ಪ್ರಪದ್ಯೆ** ಎಂದಿರುತ್ತದೆ. ಇಲ್ಲಿ ಪುರುಷಕಾರ ಭಾವದಿಂದ ಎಂದು ಹೇಳಲಿಲ್ಲವು.

(2) **ವಾಚಃ ಪರಂ ಪ್ರಾರ್ಥಯಿತಾ ಪ್ರಪದ್ಯೇನ್ನಿಯತಂ ಶ್ರಿಯಂ** (ಶೌನಕ ಸಂಹಿತೆ) ವಾಕ್ಕಿನಿಂದ ವರ್ಣಿಸಲು ಸಾಧ್ಯವಿಲ್ಲದ ಮಹಿಮೆಯುಳ್ಳ ನಾರಾಯಣನನ್ನು ಪ್ರಾರ್ಥಿಸುವವನು, ನಿಯಮಯುಕ್ತನಾಗಿ ಲಕ್ಷ್ಮ್ಯೇ ಶರಣಾಗತಿಯನ್ನು ಮಾಡತಕ್ಕದ್ದು, ಇಲ್ಲಿಯೂ ಪುರುಷಕಾರತ್ವೇನ ಶರಣಾಗತಿ ಮಾಡತಕ್ಕದ್ದೆಂದು ಹೇಳಿರುತ್ತದೆಂದು ಅಭಿಪ್ರಾಯ ಪಡುವರು. ಲಕ್ಷ್ಮ್ಯಯೂ ನಾರಾಯಣರೂ ಸಹ ಕರ್ತವ್ಯ ಭಾಗಗಳನ್ನು ವಿಭಾಗಿಸಿಕೊಂಡಿರುವವರಿಂದ, ಅನುಗ್ರಹ ಮಾಡುವುದನ್ನು ಲಕ್ಷ್ಮ್ಯಯು ವಹಿಸಿರುವದರಿಂದ ಲಕ್ಷ್ಮ್ಯೇಶರಣಾಗತಿಯು ಇಲ್ಲಿ

ವಿಧಿಸಲ್ಪಟ್ಟಿದೆ ಎಂದು ಸಹ ಊಹಿಸಲಾಗದು. ಪಾಪಗಳಿಗಾಗಿ ಶಿಕ್ಷೆ ಸದಿರುವದಕ್ಕಾಗಿ ಶಾಸ್ತ್ರೋಪದೇಶಕ್ಕೆ ವಿರುದ್ಧವಾಗಿರುವುದನ್ನು ಶಾಸ್ತ್ರವು ವಿಧಿಸಿತು ಎಂದು ತಿಳಿಯುವದೇ ಸರ್ವ ಸಮಂಜಸವಲ್ಲ. ಅಸಿಷ್ಟಸಿವೃತ್ತಿಗಾಗಿ ಬಬ್ಬರಲ್ಲೂ, ಇಷ್ಟಪ್ರಾಪ್ತಿಗಾಗಿ ಇನ್ನೊಬ್ಬರಲ್ಲೂ ಎಂದು ಭಾವಿಸಬಹುದು. ಇಬ್ಬರೂ ಒಬ್ಬನಿಗೇನೇ ಇರುವದರಿಂದ ಲಕ್ಷ್ಮೀಯುಕ್ತನಾದ ನಾರಾಯಣನಲ್ಲಿ ಅಸಿಷ್ಟ ನಿವೃತ್ತಿ, ಇಷ್ಟಪ್ರಾಪ್ತಿಗಾಗಿ ಶರಣಾಗತಿಯು ಎಂದೂ ಭಾವಿಸಬಹುದು.

(3) **ಲಕ್ಷ್ಮ್ಯಾಸಹ ಹೃಷೀಕೇಶಃ** ಎಂಬ ಮೇಲೆ ಉದಾಹರಿಸಿ ಪ್ರತಿಪಾದಿಸಿರುವ ಶ್ಲೋಕವು ಕಂಠೋಕ್ತವಾಗಿ ಲಕ್ಷ್ಮೀಯೂ ಉಪಾಯಕೋಟಿಯಲ್ಲೇ ಸೇರಿದ್ದಾಳೆಂದು ಸ್ಥಾಪಿಸುತ್ತದೆ.

(4) ದ್ವಯ ಮನ್ತ್ರವೂ ಉಪಾಯತ್ವವನ್ನು ಉಪದೇಶಿಸುತ್ತದೆಂದು ಮೇಲೆ ವಿಶದವಾಗಿ ಉಪಪಾದಿಸಲ್ಪಟ್ಟಿರುತ್ತದೆ.

(5) ಶ್ರುತಿಯು **ಉಪಬ್ರಹ್ಮಣಿ**ಪೆಂದು ಶ್ರೀವಿಷ್ಣುವಾದರೂ ಇಕ್ಕೆ ಹೆಚ್ಚಾದ ಪ್ರಾಶಸ್ತ್ಯವುಂಟು. **ಗರ್ಭಭೂತಾಸ್ತಪೋಧನಾಃ** ಎಂದುಹೇಳಿರುವ ಮೇರೆಗೆ ತಪೋಧನರಾದ ವಾಲ್ಮೀಕಿ ಮುಹರ್ಷಿಗಳು ಅಸಂಕುಚಿತ ಜ್ಞಾನ ಪ್ರಭಾವವುಳ್ಳವರು. ಅಂಥಾವರ ವಾಕ್ಯದಲ್ಲಿ ಪರವಾವರವು ಅತ್ಯಾವಶ್ಯಕವು. ಅವರು ಹೇಳಿರುವದೇನೆಂದರೆ :—**"ಅಲಮೇಷಾ ಪರಿತ್ರಾತುಂ ರಾಕ್ಷಸ್ಯೋ ಮಹತೋಭಯಾತ್"** ಎಂದೂ, **"ಅಲಮೇಷಾ ಪರಿತ್ರಾತುಂ ರಾಘವಾದ್ರಾಕ್ಷಸೀಗಣಂ"** ಎಂದೂ, ಹೇಳಿ ಪ್ರತಿಕೂಲಾಚರಣೆಯನ್ನು ಸೀತೆಯು ವಿಷಯದಲ್ಲಿ ಆಚರಿಸುವವರಿಂದ, ಶ್ರೀರಾಮನಿಂದ ನಿಗ್ರಹವುಂಟಾದೀತೆಂಬ ಭಯದಿಂದಿರುವ ರಾಕ್ಷಸೀಗಣವನ್ನು ರಕ್ಷಿಸಲು ಈ ಸೀತೆಯೇ, **ಅಲಂ** ಸಾಕು ಎಂಪರೆ ಸಾಮರ್ಥ್ಯವುಳ್ಳವಳು ಎಂಬರ್ಥವು. ಇಲ್ಲಿಯೂ ರಾಮನು ರಾಸ್ತ್ರವೆಂಬ ಭಾವವೂ, ಸೀತೆಯು ಅನುಗ್ರಹಿಸುವವಳು ಎಂಬ ಭಾವವೂ ತೋರಿಬರುತ್ತವೆ. ತ್ರಿಜಟೆಯು ಸೀತೆಗೆ ಸ್ವಪ್ನವೃತ್ತಾಂತವನ್ನು ತಿಳಿಸಿ, ರಾವಣನಿಗೆ ಅಪಜಯವೂ, ಶ್ರೀರಾಮನಿಗೆ ಜಯವೂ ಉಂಟಾಹುದೆಂದು, ಆಗ ತಮ್ಮನ್ನೆಲ್ಲಾ

ರಕ್ಷಿಸಬೇಕೆಂದು ಕೇಳಿಕೊಳ್ಳಲು, ಅದಕ್ಕೆ ಅನುಗ್ರಹವುಯುಳ್ಳಾವ ಸೀತೆಯು, **ಭವೇಯಂ ಶರಣಂ ಹಿವಃ** (ರಾ. ಸುಂ.) ಎಂದು ಅಭಯ ಪ್ರದಾನವನ್ನು ಮಾಡಿದುದರಿಂದ ಸೀತೆಯೂ ಕೂಡ ಉಪಾಯಭೂತಳೆಂಬುವದು ಸುಸ್ಪಷ್ಟವು.

(6) **ಸಕೃದ್ವಿಭಾತಾ ಸರ್ವಾರ್ತಿ ಪರಿಶೋಷಿಣೀ** ಒಂದು ಸಲ ಪ್ರಕಾಶಿಸಿದರೆ ಸಮಸ್ತ ದುಃಖಗಳನ್ನೂ ಶೋಷಿಸಿಬಿಡುವಳು' ಎಂದೂ, **ಭವ ಭಂಗಾಪಹಾರಿಣೀ** – ಸಂಸಾರದಿಂದುಂಟಾಗುವ ಕ್ಲೇಶಗಳನ್ನು ಪಹರಿಸುವಳು' ಎಂದೂ, **ಪರನಿರ್ವಾಣದಾಯಿನೀ** – ಶ್ರೇಷ್ಠಸುಖವನ್ನೀಯುವಳೆಂದೂ, ಪ್ರಮಾಣಗಳಿವೆ. (ಬ್ರಾಹ್ಮಪುರಾಣ.

(7) **ಸರ್ವಕಾಮ ಪ್ರದಾಂ ರಮ್ಯಾಂ ಸಂಸಾರಾರ್ಣವ ತಾರಿಣೀಂ।**
ಕ್ಷಿಪ್ರ ಪ್ರಸಾದಿನೀಂ ದೇವೀಂ ಶರಣ್ಯಾಮನುಚಿಂತಯೇತ್
ಇಲ್ಲಿ **ಸಂಸಾರಾರ್ಣವತಾರಿಣೀಂ,** ಸಂಸಾರಸಮುದ್ರವನ್ನು ದಾಟಿಸುವವಳು ಎಂದು ಚತುರ್ಮುಖ ಬ್ರಹ್ಮವಾಕ್ಯ ಇರುವದರಿಂದ ಉಪಾಯತ್ವವು ಹೇಳಲ್ಪಟ್ಟಿತು. (ವಿ. ಧ. 1.59)

(8) **ಯಾಮಾಲಂಬ್ಯ ಸುಖೇನೇ ಮಂದುಸ್ತರಂ ಹಿ ಗುಣೋದಧಿಂ।**
ನಿಸ್ತರಂತ್ಯಚಿರೇಣೈವ ವ್ಯಕ್ತಧ್ಯಾನ ಪರಾಯಣಾಃ ॥ (ಶ್ರೀಸಾತ್ವತ)
'ಯಾವ ಕೃಪಾಸಾಗರಗಳಾದ ಲಕ್ಷ್ಮೀಯನ್ನು ಆಶ್ರಯಿಸಿ ಸುಲಭವಾಗಿ ಈ ದಾಟಲಸಾಧ್ಯವಾದ ಪ್ರಕೃತಿ ಅಥವಾ ಸಂಸಾರಬಂಧವೆಂಬ ಸಮುದ್ರವನ್ನು ಪಿಪ್ಪಲದಲ್ಲೇ ಧ್ಯಾನಪರಾಯಣರು ದಾಟುವರು' ಎಂದು, ಇಲ್ಲಿ ಲಕ್ಷ್ಮೀಸಮಾಶ್ರಯಣವು ಹೇಳಿರುವದರಿಂದ ಉಪಾಯತ್ವವು ತೋರುತ್ತದೆ.

(9) **ಆತ್ಮ ವಿದ್ಯಾ ಚದೇವಿತ್ವಂ ವಿಮುಕ್ತಿ ಫಲದಾಯಿನೀ –** "ನೀನು ಆತ್ಮವಿದ್ಯೆಯೇ" ಎಂದು ಹೇಳಿರುವದರಿಂದ ಉಪಾಯ ಭೂತಳೆಂಬುವದು ಏರ್ಪಟ್ಟಿತು. ಕೆಲವರು **ವಿಮುಕ್ತಿ ಫಲದಾಯಿನೀ** ಎಂಬುವದು ಆತ್ಮವಿದ್ಯೆಗೆ ವಿಶೇಷಣವೆಂದು ಹೇಳುತ್ತಾರೆ **ದೇವಿತ್ವಂ** ಎಂಬುವ ಪದಗಳು ಮಧ್ಯೆ ಇದ್ದು, ತ್ವಂ ಎಂಬ ಪದವಾದನಂತರವೇ ವಿಮುಕ್ತಿ ಫಲದಾಯಿನೀ ಎಂದಿರುವದರಿಂದ, ತ್ವಂ ಪದಕ್ಕೆ ವಿಶೇಷಣ

ವೆಂದು ಹೇಳುವದೇ ಸಮಂಜಸವಾದುದು. ಹೀಗೆ ಹೇಳುವದರಿಂದ ಆಕೆಗೆ ಉಪಾಯತ್ವವೂ ಅಲ್ಲದೆ ಮೋಕ್ಷಪ್ರದತ್ವವೂ ಉಂಟೆಂಬುವದೂ ತೋರಿಬರುತ್ತದೆ. ಆತ್ಮವಿದ್ಯೆಗೆ ವಿಶೇಷಣವಾದರೂ ಬಾಧಕವಿಲ್ಲವು. ಆಗಲೂ ಉಪಾಯತ್ವವು ಹೇಳಿದಂತೆ ಆಯಿತು.

(10) ಶ್ರೀಭಾಷ್ಯಕಾರರವರೂ **"ನಿತ್ಯಾನಪಾಯಿನೀಂ ನಿರವದ್ಯಾಂ ದೇವ ದೇವ ದಿವ್ಯಮಹಿಷೀಂ ಅಖಿಲಜಗನ್ಮಾತರ ಮಸ್ಮನ್ಮಾತರ ಮಶರಣ್ಯ ಶರಣ್ಯಾ ಮನನ್ಯ ಶರಣ ಶ್ಶರಣಮಹಂ ಪ್ರಪದ್ಯೇ"** ಎಂದು ಶ್ರೀ ಶರಣಾಗತಿಯನ್ನು ಉಪಾಯತ್ವೇನ ಮಾಡಿರುತ್ತಾರೆ. ಆದರೆ ಕೆಲವರು ಪುರುಷಕಾರ ರೂಪದಲ್ಲಿ ಮಾಡಿದರೆಂದು ಹೇಳುವರು. ಹೀಗೆ ಹೇಳುವುದಕ್ಕೆ **ಅನನ್ಯಶರಣ** ಶಬ್ದವು ಪ್ರತಿಬಂಧಕವು. ಅದೂ ಅಲ್ಲದೆ ನಿನ್ನ ಪತಿಗೆ ಹೇಳಿ ಕಾಪಾಡು ಎಂದು ಹೇಳಲಿಲ್ಲವು. **ಅನನ್ಯಶರಣ** ಶಬ್ದವು ಆಗ ವಾಸ್ತವವಾದುದಾಗುವದಿಲ್ಲವು. ಏಕೆಂದರೆ ಸರ್ವೇಶ್ವರನು ಗತಿಯಾಗಿ ನಿಂತಿರುವಾಗ ಲಕ್ಷ್ಮಿಯಲ್ಲಿ ತಾನು ಅನನ್ಯಶರಣನೆಂದು ಹೇಳಿಕೊಳ್ಳುವದು ಅಯಥಾರ್ಥವಾದುದಾಗುತ್ತದೆ. ಹಾಗಲ್ಲದೆ ಇಬ್ಬರೂ ಸೇರಿಯೇ ಉಪಾಯವೆಂದು ಭಾವಿಸಿದರೆ ಅಂತಹ ಅಯಥಾರ್ಥ ಭಾವವು ಉಂಟಾಗುವದಿಲ್ಲವು. ಇಬ್ಬರೂ ಸೇರಿಯೇ ಉಪಾಯವಾದುದರಿಂದಲೇ ಇಬ್ಬರಲ್ಲೂ ಯತಿವರ್ಯರು, ದ್ವಯಾನುಸಂಧಾನ ರೀತ್ಯಾ, ಶರಣಾಗತಿ ಮಾಡಿರುತ್ತಾರೆ.

(11) ಶ್ರೀ ಯತಿವರ್ಯರ ಹೃದಯಾಭಿಪ್ರಾಯವನ್ನು ಚನ್ನಾಗಿ ಅರಿತ ಶ್ರೀ ಕೂರತ್ತಾಳ್ವಾರ್‌ರವರು, **ಯಸ್ಯಾವೀಕ್ಷ್ಯ ಮುಖಂತದೀಗಿತ ಪರಾಧೀನೋ ವಿಧತ್ತೇಖಿಲಂ** ಎಂದರೆ ಲಕ್ಷ್ಮಿಯ ಮುಖವನ್ನು ಈಕ್ಷಿಸಿ, ಆಕೆಯ ಇಂಗಿತಾನುಸಾರ ಸರ್ವೇಶ್ವರನು ಸಮಸ್ತವನ್ನೂ ಮಾಡುತ್ತಾನೆ, ಎಂದು ಶ್ರೀಸ್ತವದಲ್ಲಿ ಹೇಳಿರುತ್ತಾರೆ.

(12) ಶ್ರೀ ಯತಿವರ್ಯರ ಪ್ರಾರ್ಥನಾಪೂರ್ವಕ ಶ್ರೀ ಲಕ್ಷ್ಮೀ ವರಪ್ರಸಾದದಿಂದ ಜನಿಸಿದ ಪರಮ ಜ್ಞಾನಿಗಳಾದ ಶ್ರೀ ಪರಾಶರಮಹರ್ಷಿಯ ನಾಮಧೇಯವನ್ನು ಸಾರ್ಥಕಹೊಂದಿಸಿದ ಶ್ರೀ ಪರಾಶರ ಭಟ್ಟರವರು, ಶ್ರೀಗುಣರತ್ನಕೋಶದ 32ನೇ ಶ್ಲೋಕದಲ್ಲಿ

"ಪ್ರಣತವರಣ ಪ್ರೇಮ ಕ್ಷೇಮಂಕರತ್ವ ಪುರಸ್ಸರಾಃ
ತವ ಭಗವತಶ್ಚೈತೇ ಸಾಧಾರಣಾ ಗುಣರಾಶಯಃ"

ಎಂದರೆ ಶರಣಾಗತರಿಗೆ **ಉಪಾಯಭೂತಳಾಗಿ** ಅವರನ್ನು ರಕ್ಷಿಸುವದಾಗಿ ವರಿಸುವುದು, ಪ್ರೀತಿಸುವುದು, ಕ್ಷೇಮವನ್ನುಂಟುಮಾಡುವದೇ ಮೊದಲಾದವು ನಿನಗೂ ನಿನ್ನ ಪತಿಯಾದ ಸರ್ವೇಶ್ವರನಿಗೂ ಸಮವಾಗಿರುವ ಗುಣಸಮೂಹಗಳೆಂದು ಹೇಳಿ, **ಪ್ರಣತವರಣ** ವೆಂಬುವದರಿಂದ ಉಪಾಯತ್ವ ಉಂಟೆಂದು ಕಂಠೋಕ್ತವಾಗಿ ಹೇಳಿರುತ್ತಾರೆ. ಮತ್ತೂ

ಐಶ್ವರ್ಯ ಮಕ್ಷರ ಗತಿಂ ಪರಮುಂ ಪದಂವಾ
ಕಸ್ಮೈಚಿದಂಜಲಿ ಭರಂ ವಹತೇ ವಿತೀರ್ಯ, (ಶ್ರೀಗುಣ 58)

ಎಂಬ ಶ್ಲೋಕವಲ್ಲಿ ಇಹಲೋಕ ಸ್ವರ್ಗಲೋಕಾದಿಗಳ ಐಶ್ವರ್ಯವನ್ನೂ, ಕೈವಲ್ಯವನ್ನೂ, ಮೋಕ್ಷವನ್ನೂ ಸಹ ಕೊಡುವಳೆಂದು ಹೇಳಿರುತ್ತಾರೆ. ಆದುದರಿಂದ ಈ ಮಹಾನುಭಾವರ ಅಭಿಪ್ರಾಯವೂ, ಅವರ ಪೂರ್ವಾಚಾರ್ಯರುಗಳ ಅಭಿಪ್ರಾಯದ ಹಾಗೆಯೇ ಎಂದು ವ್ಯಕ್ತಪಡುತ್ತದೆ. ಅಷ್ಟಶ್ಲೋಕಿಯಲ್ಲಿ, ದ್ವಯಮಂತ್ರಾರ್ಥದ ಉಪಪಾದನೆಯಲ್ಲಿ,

"ಈಶಾನಾಂ ಜಗತಾ ಮಧೀಶ ದಯಿತಾಂ ನಿತ್ಯಾನುಪಾಯಾಂ ಶ್ರಿಯಂ । ಸಂಶ್ರಿತ್ಯಾ ಶ್ರಯಣೋಚಿತಾಖಿಲ ಗುಣಸ್ಯಾಂಘ್ರೀ ಹರೀ ರಾಶ್ರಯೇ ॥" ಎಂದು, ಉಪಾಯತ್ವವನ್ನು ಬೋಧಿಸುವ ಪೂರ್ವಖಂಡದ ಅರ್ಥವನ್ನು ವಿವರಿಸಿರುತ್ತಾರೆ. ಇದರರ್ಥವೇನೆಂದರೆ, ಶ್ರೀಯಾಮುನೇಯರು ಹೇಳಿದಹಾಗೆ, ಅವರನ್ನನುಸರಿಸಿಯೇ, ಲೋಕೈಕೇಶ್ವರಿಯಾಗಿ ಲೋಕನಾಥದಯಿತೆಯಾಗಿ, ಸರ್ವೇಶ್ವರನೊಂದಿಗೆ ನಿತ್ಯಯೋಗ ಉಳ್ಳ ಲಕ್ಷ್ಮಿಯನ್ನು ಜನ್ಯಾಗಿ ಆಶ್ರಯಿಸಿ ಎಂದರೆ ಶರಣು ಹೊಂದಿ, ಆಶ್ರಯಿಸಲು ಯೋಗ್ಯವಾದ ಸಕಲ ಕಲ್ಯಾಣಗುಣಗಣ ಪರಿಪೂರ್ಣನಾದ ನಾರಾಯಣನ ಚರಣದ್ವಂದವನ್ನು ಆಶ್ರಯಿಸುವೆನು ಎಂದು ಹೇಳಿರುತ್ತಾರೆ. ಇಲ್ಲಿ ಲಕ್ಷ್ಮಿಯನ್ನು **ಸಂಶ್ರಿತ್ಯ,** ನಾರಾಯಣನನ್ನು **ಆಶ್ರಯೇ** ಎಂದು ಇದೆ. ಇಲ್ಲಿ ಎರಡು ಕಡೆಯಲ್ಲೂ ಆಶ್ರಯವೇ ಹೇಳಿ, ಲಕ್ಷ್ಮಿಯ ವಿಷಯದಲ್ಲಿ **ಸಂಶ್ರಿತ್ಯ** ಎಂದರೆ ಚ

ನ್ನಾಗಿ ಆಶ್ರಯಿಸಿ ಎಂದಿರುತ್ತದೆ. ಆದುದರಿಂದ **ನಾರಾಯಣನ** ಆಶ್ರಯವು ಉಪಾಯತ್ವೇನ ಆದರೆ, ಲಕ್ಷ್ಮ್ಯಾಯ **ಸಂಶ್ರಯಣವು** ಏಕೆ ಉಪಾಯತ್ವೇನ ಕೂಡದು ? ಪುರುಷಕಾರತ್ವೇನ **ಮಾತ್ರವೇ** ಎಂದು ಹೇಳಲು ಇಲ್ಲಿ ಯಾವ ಸಾಧನವೂ ಇಲ್ಲವು ; ಸಂಶ್ರಿತ್ಯ ಎಂದು **ಇಷ್ಟು** ಮಾತ್ರವೇ ಇದೆ. **ಸಂ** ಎಂಬ ಉಪಸಂಸರ್ಗವನ್ನು ಕೊಟ್ಟು, ಆಕೆಗೆ ಮೂರು ವಿಶೇಷಣಗಳನ್ನೂ ಕೊಟ್ಟಿರುವದರ ಸಾರ್ಥಕ್ಯವೇನು? ಆಕೆಯು ಲೋಕೈಕೇಶ್ವರಿಯಾಗಿ, ಲೋಕನಾಥದಯಿತೆಯೂ ಆಗಿ, ನಿತ್ಯಯೋಗ ಉಳ್ಳವಳು ಆಗಿರುವದರಿಂದಲೇ, ಸರ್ವೇಶ್ವರನು ಹೇಗೆ ಆಶ್ರಯಿಸಲು ಯೋಗ್ಯನೋ ಹಾಗೆಯೇ ಲಕ್ಷ್ಮ್ಯಾಯೂ ಎಂದು ಸುಸ್ಪಷ್ಟವಾಗಿ ತೋರಿಸುವದಕ್ಕಾಗಿಯೇ, ಆ ವಿಶೇಷಣಗಳೂ ಆ ಉಪಸರ್ಗವೂ ಎಂದು ಭಾವಿಸತಕ್ಕದ್ದು. ವಿವಾದಾಸ್ಪದವಿಲ್ಲದ ಪ್ರಾಪ್ಯದೆಸೆಯಲ್ಲಿ ಲಕ್ಷ್ಮ್ಯೈಕ್ಯತೆಯನ್ನು ಹೇಳುವ ಸಂದರ್ಭದಲ್ಲಿ **"ಇಷ್ಟೋಪಾಯ ತಯಾ ಶ್ರಿಯಾಚ ಸಹಿತಾಯ"** ಎಂದು ಹೇಳಿರುವದರಿಂದ ಪುರುಷಕಾರತ್ವವೇ ಸರಿ ಎಂಬಭಿಪ್ರಾಯವನ್ನು ಹೇಳುವರು. **"ಇಷ್ಟೋಪಾಯತಯಾ"** ಎಂದು ಇಷ್ಟ ಮಾತ್ರ ಹೇಳಿದುದರಿಂದ ಪುರುಷಕಾರವಾಗಿಯೇ ಇರಬೇಕೆಂಬ ನಿಯಮವೇನೂ ಇಲ್ಲವು. ಪತಿ ಪಾರಾಧ್ಯೈಯನ್ನು ಅರಿತವಳಾದುದರಿಂದ ಪುರುಷಕಾರವೆಂದು ಹೇಳಿದರೂ ಏನೂ ಬಾಧಕವಿಲ್ಲವು. ಆದರೆ ಇಬ್ಬರೂ ಈಶ್ವರೀಶ್ವರರಾಗಿ, ಇಷ್ಟಪ್ರಾಪ್ತಿಯನ್ನು ಲಕ್ಷ್ಮ್ಯಾಯೂ, ಅನಿಷ್ಟನಿವೃತ್ತಿಯನ್ನು ಸರ್ವೇಶ್ವರನೂ ಹೀಗೆ ಕಾರ್ಯವಿಭಾಗ ಮಾಡಿಕೊಂಡು ಸಾಮರಸ್ಯದಿಂದಿರುವಾಗ, ಇಬ್ಬರಿಗೂ ಉಪಾಯತ್ವ ಉಪೇಯತ್ವದಲ್ಲಿ ಸಂಬಂಧ ಹೇಳುವದೇ ಸರ್ವ ಸಮಂಜಸವು.

(13) ನಮ್ಮಾಳ್ವಾರ್ರವರು ತಿರುವಾಯ್‌ಮೊಳಿಯ **" ಅಕಲ ಕಿಲ್ಲೇನ್ "** (ತಿರು 6-10-10) ಎಂಬ ಪಾಶುರದಲ್ಲಿ ಉಪಾಯಭಾವವನ್ನು ಹೇಳಿ ಸಪರಿಕರ ಪೂರ್ಣ ಶರಣಾಗತಿಯನ್ನು ಹೇಳುವ ಸಂದರ್ಭದಲ್ಲಿ, **ಇರೈಯುಂ ಅಕಲಕಿಲ್ಲೇನ್ ಎನ್ರು ಅಲರ್ ಮೇಲ್ ಮಙ್ಗೈ ಉರೈಮಾರ್ಪಾ** ಎಂದು ಪ್ರಯೋಗಿಸುತ್ತಾರೆ. " ಬಂದು ಕ್ಷಣವೂ ಕೂಡ ಅಗಲಿರಲಾರನೆಂದು ಹೂವಿನಲ್ಲಿತೋರುವ ಮಾರ್ದವ

ಭೋಗ್ಯತೆಗಳನ್ನು ಹೊಂದಿರುವ ಲಕ್ಷ್ಮೀಯನ್ನು ವಕ್ಷಸ್ಥಳವಲ್ಲಿ ಧರಿಸಿರುವವನೇ" ಎಂಬುವದು ಇದರರ್ಥವು. ವ್ಯಯಮಂತ್ರದ ಪೂರ್ವಖಂಡದ ಶ್ರೀವಚ್ಛಬ್ದದ ವಿವರಣವಾಗಿ ಆಳ್ವಾರವರು ಲಕ್ಷ್ಮೀವಿಶಿಷ್ಟತೆಯನ್ನು ಉಪಪಾದಿಸಿರುತ್ತಾರೆ. ಇನ್ನೊಯೂಕೂಡ ಕೆಲವರು ಪುರುಷಕಾರತ್ವವನ್ನು ಮಾತ್ರವೇ ಹೇಳಿರುತ್ತಾರೆ. ಅವರೆ **"ದ್ವೈಚಸ್ಯೈಕಶೇಷಿ"** ಎಂದರೆ "ಈ ಲೋಕದಂಪತಿಗಳಿಬ್ಬರೂ ಸೇರಿಯೇ ಒಂದೇ ಶೇಷಿತ್ವವನ್ನು ವಹಿಸಿರುವರು." ಎಂಬ ಶ್ರೀ ಸಾತ್ವತವಚನಾನುಸಾರವಾಗಿ ಶ್ರೀ ಸೋವೆಶಿಯಾಂಡಾರ್ಗಳವರು "**ಉಭಯಾಧಿಷ್ಠಾನಂಚೈಕಶೇಷಿತ್ವಂ**" "ಒಂದು ಶೇಷಿಭಾವಕ್ಕೆ ಇಬ್ಬರೂ ಆಶ್ರಯರು" ಎಂದೂ, "**ಮುಕಾನಸ್ತುತಯೋದಾರ್ನಸಃ**" ಎಂಬುವದನ್ನನುಸರಿಸಿ, ನಿರ್ಧರಿಸುವದರಿಂದ, ಇಬ್ಬರೂ ಉಪಾಯವು ಎಂದು ಹೇಳಲು ಅಭ್ಯಂತರವೇನೂ ಇರುವದಿಲ್ಲವು. ಯಾವ ಶಾಸ್ತ್ರಪಜ್ತಿಗೂ ವಿರೋಧವಿರುವಹಾಗೆ ಕಾಣುವದಿಲ್ಲವು. ಪರತತ್ವವೇ ಲಕ್ಷ್ಮೀನಾರಾಯಣನೆಂಬುವದನ್ನು ಮನಸ್ಸಿನಲ್ಲಿಟ್ಟುರೆ, ಈ ಅಭಿಪ್ರಾಯವು ಸುಲಭವಾಗಿ ಅವಗಾಹನೆಗೆ ಬರುತ್ತದೆ.

(14) ಮಹಾ ಭಾಗವತೋತ್ತಮರಾಗಿಯೂ, ವಿರಕ್ತಶಿಖಾಮಣಿಗಳೂ, ಆದ ಶ್ರೀ ತಿರುವರಜ್ಗತ್ತಮುದನಾರರು ಅನುಗ್ರಹಿಸಿದ ಅಷ್ಟೋತ್ತರದಹಾಗೆ ೧೦೮ ಪಾಶುರಗಳುಳ್ಳ ಇರಾವಾನುಜನೂತ್ತಂದಾದಿ ಎಂಬ ಶ್ರೀ ರಾಮಾನುಜಸ್ತೋತ್ರಕ್ಕೆ ಜ್ಞಾನಸಿಧಿಗಳಾದ ಪಿಳ್ಳೆಲೋಕಾರ್ಯರ್ಜೀಯರವರು ವ್ಯಾಖ್ಯಾನವನ್ನು ಅನುಗ್ರಹಿಸಿರುತ್ತಾರೆ. ೪೧ನೇ ಪಾಶುರವಾದ "**ಮಣ್ಮೆಶೈಯೋನಿಗಳ್ ತೋರುಂ ಪಿರಮ್ದು ಎಜ್ಗಳ್ ಮಾಧವನೇ**" ಎಂಬುವದರ ವ್ಯಾಖ್ಯಾನದಲ್ಲಿ **ಮಾಧವನೇ** ಎಂಬ ಪದದ ಅರ್ಥವಿವರಣೆಯಲ್ಲಿ, "ಮಾಧವನೇ— ಕೃಪಾಗುಣತ್ತುಕ್ಕು ಉತ್ತುಮ್ಬಕ್ಕೈ ಪೆರಿಯಪಿರಾಟ್ಟಿಯಾಕ್ಕೈಯಾಲೇ ಅವಳುಡೈಯೆಶ್ವರ್ತ್ತಿಯೈ ಸ್ಮರಿಕ್ಕರಾರ್, ಲಕ್ಷ್ಮ್ಯಾಸಹ ಪೃಷೀಕೇಶೋ ದೇವ್ಯಾಕಾರುಣ್ಯರೂಪಯಾ। ರಕ್ಷಕಸ್ಸರ್ವಸಿದ್ಧಾನ್ತೇ ವೇದಾನ್ತೇಷುಚಗೀಯತೇ" ಎನ್ನು/ ಈಶ್ವರನುಡೈಯ ರಕ್ಷಣಮೆಲ್ಲಾಂ ಪೆರಿಯಪಿರಾಟ್ಟಿಯಾರೋಡೆಕೂಡಿ ಉಚರಿಕ್ಕಪಡುಕಿರದಾಕ್ಕೈಯಾಲುಂ, ಅವಳು ಮಿನ್ದರಕ್ಷಣತ್ತು

ಕ್ಕಾಕವೇ, " ಅಕಲಕಿಲ್ಲೇ ನಿರೈಯುವು' " ಎನ್ರು ಸರ್ವದಾ ಅನ ಪಾಯಿನಿಯಾಯಿರುಕ್ಕೈಯಾಲುಮ್', ಅವತ್ತೈಪತ್ತಿ ಮಾಧವರ್ ಎನ್ರು ರುಳಿಚ್ಚೀಯ'ಗಿರಾರ್' " ಎಂದು, ಉಪಪಾದನೆ ಮಾಡಿರುತ್ತಾರೆ. ಇಲ್ಲಿ " ಈಶ್ವರನುಡೈಯ ರಕ್ಷಣಮೆಲ್ಲಾಂ ಪೆರಿಯಪಿರಾಟ್ಟಿಯಾರೋಡೆಕೂಡಿ ಆಚರಿಪ್ಪುಡುಕೆರದು " ಎಂದು ಹೇಳಿರುವದರಿಂದ, ಇಬ್ಬರೂ ಸೇರಿ ಉಪಾಯಭೂತರೆಂಬ ಅರ್ಥವು ವ್ಯಕ್ತಪಡುವದಿಲ್ಲವೇ ? ಪುರುಷಕಾರ ಭೂತಳು ಮಾತ್ರವೇ ಆದರೆ **ಪೆರಿಯಪಿರಾಟ್ಟಿಯಾರೋಡೆಕೂಡಿಯೇ** ಆಚರಿಸಬೇಕೆಂಬ ನಿಯಮವೇನೂ ತೋರುವದಿಲ್ಲವು.

ಆದುದರಿಂದ **ಸಂಪೃತ್ಯಷ್ಟರ ವೈಷ್ಣವಾಧ್ವಸು** ಎಂಬಲ್ಲಿ, ಈ ಎಲ್ಲಾ ಕೋರಿಕೆಗಳನ್ನುಂಟುಮಾಡುವದರಲ್ಲಿ ಲಕ್ಷ್ಮಿಯೂ ಉಪಾಯ ಯಭೂತಳೆಂಬುವದೇ ಸರ್ವ ಸಮುಂಜಸವಾದಭಿಪ್ರಾಯವಾಗಿ ತೋ ರುತ್ತದೆ. ಲಕ್ಷ್ಮಿಗೆ ಮೋಕ್ಷಪ್ರದತ್ವವೂ ಉಂಟೆಂಬುವದು ಶ್ರೀಯಾ ಮುನೇಯವರ ಅಭಿಪ್ರಾಯವೆಂದು ವ್ಯಕ್ತಪಡುತ್ತದೆ. ಯಾವಾಗ ಮೋಕ್ಷಪ್ರದತ್ವ ಉಂಟೋ, ಆಗ ಉಪಾಯತ್ವವೂ ಉಂಟೆಂಬುವದು ಸಿದ್ಧವಾದುದೇ. ಈ ಅಭಿಪ್ರಾಯಗಳಿಗೆ ಶ್ರೀಸೂಕ್ತ, ವಿಷ್ಣುಪುರಾಣಾದಿ ಮೇಲೆ ಹೇಳಿದ ಮುಖ್ಯ ಪ್ರಮಾಣಬಲವುಂಟೆಂದು ಸೂಚಿಸುವದಕ್ಕಾ ಗಿಯೇ, **ಹಿ** ಎಂಬ ಪ್ರಯೋಗವು.

ಹೀಗೆ ವಿವಾದಾಸ್ಪದವಾದ ವಿಷಯಗಳನ್ನು ಚರ್ಚಿಸಿ ಇಷ್ಟುದೂರ ಉಪಪಾದಿಸಿರುವದು ಎರಡು ವಿಧಾಭಿಪ್ರಾಯಗಳೂ ಸರ್ವರಿಗೂ ವಿದಿತ ವಾಗಲಿ ಎಂಬ ಉದ್ದೇಶದಿಂದ ಮಾತ್ರವೇ ಎಂದು ಭಾವಿಸತಕ್ಕದ್ದು. ಲಕ್ಷ್ಮಿಗೆ ಉಪಾಯಕೋಟಿಯನ್ನು ಸಮರ್ಥಿಸುವ ಪಂಗಡಕ್ಕೆ ಸೇರಿದ ವನಾದುದರಿಂದ, ದಾಸನೂ, ಉಪಾಯತ್ವಾದಿಗಳನ್ನು ಸಮರ್ಥಿಸಿರು ತ್ತೇನೆ. ಇದರಿಂದ ಯಾರಿಗೂ ಮನಸ್ಸಿಗೆ ಆಯಾಸವನ್ನು ಕೊಡುವ ಅಭಿಪ್ರಾಯದಿಂದ ಬರಿಯಲಿಲ್ಲವು. ಇಂತಹ ಭಾಗವತಾಪಚಾರವು ದಾಸನ ಮನಸ್ಸಿನಲ್ಲಿ ಸುತರಾಂ ಇಲ್ಲವು. ಹಾಗೆ ಏನಾದರೂ ಈಷ ದಪಿ ಆಯಾಸ ಉಂಟುಮಾಡಿತೆಂದು ಭಾವಿಸುವದಾದರೆ ಅಂಥಾವರ **ಕ್ಷಮಾಪಣೆಯನ್ನು ಪ್ರಾರ್ಥಿಸುವೆನು ॥೩॥**

ಶಾನ್ತಾನಂತ ಮಹಾವಿಭೂತಿಪರಮಂ ಯದ್ಬ್ರಹ್ಮ ರೂಪಂ ಹರೇಃ । ಮೂರ್ತಂ ಬ್ರಹ್ಮತತೋಪಿ ತತ್ಪ್ರಿಯತರಂ ರೂಪಂ ಯದತ್ಯದ್ಭುತಂ ॥

ಅವತಾರಿಕೆ— ಈ ಶ್ಲೋಕದಿಂದ ಲಕ್ಷ್ಮ್ಯಾಯ ಸ್ವರೂಪ ಗುಣ ವಿಭವೈಶ್ವರ್ಯಾದಿಗಳೂ ಸರ್ವೇಶ್ವರನ ಸ್ವರೂಪ ರೂಪಾದಿಗಳಿಗೆ ಅನುರೂಪವಾದವೆಂದೂ ಹೇಳಿ, ಆಕೆಯು ತನ್ನ ಪತಿಯಾದ ಸರ್ವೇಶ್ವರನೊಂದಿಗೆ ಸ್ವರೂಪರೂಪಾದಿಗಳಲ್ಲಿ ನಿತ್ಯಯೋಗವುಳ್ಳವಳೆಂದು ಹೇಳುತ್ತಾರೆ. ನಿತ್ಯಯೋಗವೆಂದರೆ ಎಂದಿಗೂ ಬೇರೆಯಾಗದೆ ಸದಾ ಒಟ್ಟಿಗಿರುವಿಕೆ.

ಅರ್ಥ— ಶಾನ್ತಾನಂತ ಮಹಾವಿಭೂತಿ, ಶಾನ್ತ- ಹಸಿವುಬಾಯಾರಿಕೆ ಮೊದಲಾದ ಊರ್ಮಿಷಟ್ಕಗಳೊಂದೂ ಇಲ್ಲದ, ಅನನ್ತ-ದೇಶತಃ, ಕಾಲತಃ, ವಸ್ತುತಃ ಪರಿಚ್ಛೇದರಹಿತನಾದ, ಎಂದರೆ ಎಲ್ಲಾ ದೇಶದಲ್ಲೂ, ಕಾಲದಲ್ಲೂ, ವಸ್ತುವಿನಲ್ಲೂ ಇರುವ, **ಮಹಾವಿಭೂತಿ** ಮಹತ್ತಾದ ಶುದ್ಧವಾದ ಮತ್ತು ಅಶುದ್ಧವಾದ ವಿಭೂತಿಗಳಾದ ನಿತ್ಯವಿಭೂತಿ ಮತ್ತು ಲೀಲಾವಿಭೂತಿಗಳುಳ್ಳ, **ಪರಮಂ** ಸರ್ವೋತ್ಕೃಷ್ಟವಾದ, **ಹರೇಃ**- ಶ್ರೀ ಮಹಾವಿಷ್ಣುವಿನ, **ಬ್ರಹ್ಮ** - ನಿರತಿಶಯವಾಗಿ ಬೃಹತ್ವವೆಂದರೆ ದೊಡ್ಡದಾಗಿರುವ ಭಾವ ಮತ್ತು ಬೃಂಹಣತ್ವವೆಂದರೆ- ನಿರವಧಿಕಜ್ಞಾನವಿಕಾಸರೂಪವಾದ ಅನನ್ತ್ಯವನ್ನೂ ಹೊಂದಿರುವ, **ರೂಪಂ** ಸ್ವರೂಪವು **ಯತ್**- ಯಾವುದು ಸರ್ವೋಪನಿಷದ್ಪ್ರತಿಪಾದ್ಯನಾಗಿ ಪ್ರಸಿದ್ಧವಾಗಿರುವದು ಯಾವುದುಂಟೋ, ಅದೂ **ತತೋಪಿ**— ಆ ಸರ್ವೇಶ್ವರನ ಸ್ವರೂಪಕ್ಕಿಂತಲೂ, **ತತ್ಪ್ರಿಯತರಂ**- ಆ ಶ್ರೀಹರಿಗೆ ಅತ್ಯಂತಪ್ರಿಯವಾವ, **ಮೂರ್ತಂ** ದಿವ್ಯಾವಯವಯುಕ್ತವಾದುದಾಗಿಯೂ, **ಅತ್ಯದ್ಭುತಂ**- ಅತ್ಯಾಶ್ಚರ್ಯಕರವಾದುದಾಗಿಯೂ, **ರೂಪಂ**- ಪರವಾಸುದೇವನೆಂಬ ದಿವ್ಯಮಙ್ಗಳವಿಗ್ರಹವು, **ಯತ್**- ಯಾವುದುಂಟೋ ಅದನ್ನೂ, **ಯಥಾಸುಖಂ**- ಸುಖವಾಗೋಣ ಹೇಗೋ ಹಾಗೆ, **ವಿಹರತಃ**- ಕ್ರೀಡಿಸುತ್ತಿರುವ ನಿನ್ನ ಪತಿಯಾದ ಸರ್ವೇಶ್ವರನ, **ರೂಪಾಣಿ**- ವಿಭವಾವತಾರ ದಿವ್ಯಮಙ್ಗಳ

ಯಾನ್ಯನ್ಯಾನಿ ಯಥಾ ಸುಖಂ ವಿಹರತೋ ರೂಪಾಣಿ ಸ ರ್ವಾಣಿತಾ ನ್ಯಾಹುಸ್ಸಮ್ಯಗನುರೂಪ ವಿಭವೈರ್ಗಾಢೋಪ ಗೂ ಢಾನಿತೇ ॥ ೪ ॥

ವಿಗ್ರಹಗಳು, **ಯಾನಿ**- ಯಾವವುಗಳೋ, **ತಾನಿ**—ಅವೆಲ್ಲವೂ, **ತೇ**—ಆತನಿಗೆ ಸಹಧರ್ಮಚಾರಿಣಿಯಾಗಿಯೂ, ಎಂದಿಗೂ ಪತಿಯನ್ನು ಬಿಟ್ಟು ಗಲದೇ ಇರುವವಳಾಗಿಯೂ, ಇರುವ ಸಿಸ್ಮ, **ಸ್ಪೃಃ** - ಸಿಸಗೇನೇ **ಅ**ಸಾಧಾರಣಗಳಾದ, **ಅನುರೂಪ ರೂಪ ವಿಭವೈಃ**- **ಅನುರೂಪ**-ಪತಿಯ ಸ್ವರೂಪ ರೂಪಾದಿಗಳಿಗೆ ಅನುಗುಣವಾದ, **ರೂಪ**— ಮೋಲೆ ಹೇಳಿದ ಸ್ವರೂಪ, ವಾಸುದೇವಾದಿ **ವ್ಯೂಹ**ರೂಪಗಳು, ವಿಭವಾವತಾರ ರೂಪಗಳು, ಮತ್ತು **ವಿಭವೈಃ**- ವಿಭವಗಳಿಂದ, ಅಥವಾ ಅಂತಹ ರೂಪಗಳ ವಿಭವಗಳಿಂದ ಎಂದೂ ಅರ್ಥ ಹೇಳಬಹುದು. ಮೊದಲಿನ ಅರ್ಥವೇ ಯುಕ್ತವಾಗಿ ತೋರುತ್ತದೆ. **ಗಾಢೋಪಗೂ ಢಾನಿ**- ದೃಢವಾದ ಸಂಶ್ಲೇಷ ಅಥವಾ ಆಲಿಂಗನವುಳ್ಳವಳಾಗಿ, ಎಂದರೆ ಎಂದಿಗೂ ಅಗಲದಿರುವ ನಿತ್ಯಯೋಗವುಳ್ಳವುಗಳಾಗಿರುವುವು. ಎಂದು, **ಆಹುಃ**- ಹೇಳಿದವು ಅಥವಾ ಹೇಳಿದರು. ಯಾರೆಂದರೆ:— ಶ್ರುತಿ ಸ್ಮೃತಿ ಇತಿಹಾಸ ಪುರಾಣ ಭಗವಚ್ಛಾಸ್ತ್ರಾದಿಗಳು ಅಥವಾ ಅವುಗಳನ್ನು ಚೆನ್ನಾಗಿ ತಿಳಿದ ಪ್ರಾಜ್ಞರು ಎಂಬ ಕರ್ತೃಪದವನ್ನಿಟ್ಟುಕೊಳ್ಳತಕ್ಕದ್ದು.

ತಾತ್ಪರ್ಯ.—ಹಿಂದಿನ ಶ್ಲೋಕಗಳಲ್ಲಿ ಈಶ್ವರತ್ವ, ಜಗತ್ಸೃಷ್ಟಿ ಸ್ಥಿತಿಲಯತ್ವ, ಜೀವಾತ್ಮನಿಗೆ ಉಪಾಯತ್ವ, ಐಶ್ವರ್ಯ ಕೈವಲ್ಯ ಮೋಕ್ಷಪ್ರದತ್ವರೂಪ ಸರ್ವಶ್ರೇಯಸ್ಕರತ್ವವನ್ನೂ ಲಕ್ಷ್ಮಿಗೆ ಹೇಳಿ, ಹೀಗೆ ಸರ್ವಪ್ರವೃತ್ತಿಗಳಲ್ಲೂ ಲಕ್ಷ್ಮಿಗೆ ಈಶ್ವರನೊಂದಿಗೆ ಸಂಬಂಧವನ್ನುಪಪಾದಿಸಿದವರಾಗಿ, ಈ ಶ್ಲೋಕದಿಂದ, ಅಂತಹ ಸರ್ವಪ್ರವೃತ್ತಿಗಳಲ್ಲಿಯೂ ಪತಿಯೊಂದಿಗೆ ಒಕ್ಕೊಗೂ ಅನ್ವಯವು ತನ್ನ ಪತಿಯ ಸ್ವರೂಪ ರೂಪಗುಣ ವಿಭವೈಶ್ವರ್ಯಂಗಳಿಗೆ ಅನುರೂಪವಾದ ಸ್ವರೂಪ ರೂಪಾದಿಗಳನ್ನು ಹೊಂದಿ ಸದಾ ಪತಿಯೊಂದಿಗೆ ನಿತ್ಯಯೋಗವನ್ನು ಹೊಂದಿರುವದರಿಂದುಂಟಾಗುತ್ತದೆಂದು ಸಮರ್ಥನೆ ಮಾಡಿ, ಸ್ತುತಿಯನ್ನು ಪೂರ್ಣಮಾಡುತ್ತಾರೆ.

ಪ್ರಥಮತಃ ಸರ್ವೇಶ್ವರನ ಸ್ವರೂಪವೆಂಥಾದ್ದೋ ಅದಕ್ಕನು ರೂಪವಾದುದು ಲಕ್ಷ್ಮಿಯ ಸ್ವರೂಪವು ಎಂದು ಉಪದೇಶಿಸುತ್ತಾರೆ.

ಶಾನ್ತಾನಂತ ವಿಭೂತಿ - ಶಾನ್ತಶಬ್ದದಿಂದ, **ಅಶನಾಯಾ ಪಿ ಪಾಸೇಚ ಶೋಕಮೋಹೌ ಜರಾಮೃತೀ। ಷಡೂರ್ಮಿಭಿರ್ವಿಮುಕ್ತಾ** ಎಂದರೆ, ಹಸಿವು, ದಾಹ, ಶೋಕ, ಮೋಹ, ಮುಪ್ಪು, ಮರಣಗಳಿಲ್ಲದೆಯೂ, **ಅಪಕ್ಷಯ ವಿನಾಶಾಭ್ಯಾಂ ಪರಿಣಾಮರ್ಧಿ ಜನ್ಮಭಿಃ। ವರ್ಜಿತ ಶ್ಯಕ್ಯತೇ ವಕ್ತುಂ ಯಸ್ಸದಾಸ್ತೀತಿ ಕೇವಲಂ,** ಕ್ಷೀಣವಾಗುವದು, ನಾಶವಾಗುವದು, ಪರಿಣಾಮವೊಂದುವದು, ವೃದ್ಧಿಹೊಂದುವದು, ಹುಟ್ಟುವದು, ಇಂತಹ ಅವಸ್ಥೆಗಳಿಲ್ಲದೇ ಯಾವಾಗಲೂ ನಿತ್ಯವಾಗಿ ವಿಕಾರರಹಿತವಾದ ಸ್ಥಿತಿಯು ಹೇಳಲ್ಪಟ್ಟಿತು. **ಅನನ್ತ** ಶಬ್ದದಿಂದ ಪರಬ್ರಹ್ಮಸ್ವರೂಪವು ದೇಶಕಾಲ ವಸ್ತು ಪರಿಚ್ಛೇದರಹಿತವಾದುದೆಂದು ಹೇಳಲ್ಪಟ್ಟಿತು. ಸರ್ವೇಶ್ವರನು ವಿಭುವಾದುದರಿಂದ ಒಂದು ದೇಶದಲ್ಲುಂಟು, ಒಂದು ದೇಶದಲ್ಲಿಲ್ಲವೆಂಬುವದಿಲ್ಲವು. ನಿತ್ಯನಾದುದರಿಂದ, ಒಂದು ಕಾಲದಲ್ಲಿ ಉಂಟು, ಮತ್ತೊಂದು ಕಾಲದಲ್ಲಿಲ್ಲವೆಂಬುವದಿಲ್ಲವು. ಸರ್ವ ಶರೀರಕನಾಗಿ, ಸರ್ವಾತ್ಮನಾಗಿ ಎಲ್ಲವನ್ನೂ ವ್ಯಾಪಿಸಿರುವದರಿಂದ ಒಂದು ವಸ್ತುವಿನಲ್ಲುಂಟು, ಇನ್ನೊಂದರಲ್ಲಿಲ್ಲವು ಎಂಬುವದಿಲ್ಲವು. **ಶಾನ್ತಾನಂದ** ವೆಂಬ ಪಾಠವೂ ಉಂಟು. ಆಗ, **ರಸೋ ವೈ ಸಃ, ಆನಂದೋ ಬ್ರಹ್ಮ, ಆನಂದೋ ಬ್ರಹ್ಮೇತಿ ವ್ಯಜಾನಾತ್,** ಇತ್ಯಾದಿ ಶ್ರುತಿಗಳಲ್ಲಿ ಹೇಳಿರುವಹಾಗೆ ಪರಬ್ರಹ್ಮ ಸ್ವರೂಪವು ಆನಂದಮಯವು.

ಮಹಾವಿಭೂತಿ ಎಂದು ಹೇಳಿರುವದರಿಂದ " ಪಾದೋಸ್ಯವಿಶ್ವಾ ಭೂತಾನಿ ತ್ರಿಪಾದಸ್ಯಾಮೃತಂದಿವಿ " ಎಂಬ ಪುರುಷಸೂಕ್ತವಚನದಿಂದ, ತ್ರಿಗುಣಯುಕ್ತವಾದ ಈ ಹೇಯವಾದ ಏಕಪಾದ್ವಿಭೂತಿಯಾದ ಲೀಲಾವಿಭೂತಿಯೂ, ಮತ್ತು ಶುದ್ಧಸತ್ವಮಯವಾದ ಪರಿಶುದ್ಧವಾದ ತ್ರಿಪಾದ್ವಿಭೂತಿ ಎಂದು ಹೇಳಲ್ಪಡುವ ನಿತ್ಯವಿಭೂತಿಯೂ ಹೇಳಲ್ಪಟ್ಟವು. ಇಂತಹ ಮಹತ್ತುಗಳಾದ ಉಭಯ ವಿಭೂತಿಗಳುಳ್ಳದ್ದು ಪರಬ್ರಹ್ಮಸ್ವರೂಪವು ಎಂದು ಹೇಳಲ್ಪಟ್ಟಿತು.

ಇಲ್ಲಿ ಸರ್ವೇಶ್ವರನಿಗೆ ಅನನ್ಯತ್ವವನ್ನೂ ಉಭಯವಿಭೂತಿಯ ನಿಯಮನತ್ವವನ್ನೂ ಹೇಳಿ, ಅನಂತರ, ಲಕ್ಷ್ಮ್ಯಾಗೆ ಇವುಗಳಿಗೆ ಅನುರೂಪವಾದ ಸ್ವರೂಪಾದಿಗಳಿವೆ ಎಂದು ಹೇಳುವದರಿಂದ ಈಶ್ವರನಹಾಗೆ ಈಕೆಗೂ ದೇಶಕಾಲವಸ್ತು ಪರಿಚ್ಛಿನತೆಯರಾಹಿತ್ಯವನ್ನೂ, ಮಹಾವಿಭೂತಿಯನ್ನು ಹೊಂದಿರುವಿಕೆಯನ್ನೂ, ಹೇಳಬೇಕಾಗಿರುವದರಿಂದ ಲಕ್ಷ್ಮ್ಯಯು ವಿಭುವಲ್ಲವೆಂದೂ, ಈಶ್ವರಳಲ್ಲವೆಂದೂ ಹೇಳುವ ವಾದಗಳು ದೂರೀಕೃತವಾದವು.

ಆ ಸ್ವರೂಪವು ಇನ್ನು ಎಂಥಾದ್ದೆಂದರೆ:—**ಪರಮಂ** ಸರ್ವೋತ್ಕಲಷ್ಟವಾದುದು. **ನತತ್ಸಮಶ್ಚಾಭ್ಯಧಿಕಶ್ಚದೃಶ್ಯತೇ.** (ಶ್ವೇತ.೬-೮.) ಆತನಿಗೆ ಸಮರೂ ಅಧಿಕರೂ ಇಲ್ಲವು. ಆತನು ನಿಸ್ಸಮಾಭ್ಯಧಿಕನು, ಎಂಬುವ ಶ್ರುತ್ಯರ್ಥವು ಬೋಧಿತವಾದುದು.

ಆ ಸ್ವರೂಪವು **ಬ್ರಹ್ಮ** ವೆಂದೂ ಹೇಳಿಸಿಕೊಳ್ಳುತ್ತದೆ. ಏಕೆಂದರೆ, **ಬೃಹತ್ವಾದ್ಬೃಂಹಣತ್ವಾಚ್ಚ ಬ್ರಹ್ಮ ಇತ್ಯಭಿಧೀಯತೇ** ಎಂದೂ, ಮತ್ತೂ **" ಬೃಹತ್ವಾದ್ಬೃಂಹಣತ್ವಾಚ್ಚ ಯದ್ರೂಪಂ ಬ್ರಹ್ಮ ಸಂಜ್ಞಿತಂ "** (ವಿ. ಪು. 1. 12.55) ಎಂದು ಹೇಳಿರುವಹಾಗೆ, ಆತನ ಸ್ವರೂಪವು ದೊಡ್ಡದಕ್ಕಿಂತ ದೊಡ್ಡದಾದುದಾಗಿಯೂ, ನಿರವಧಿಕವಾದ ಜ್ಞಾನವಿಕಾಸರೂಪವಾದುದು. ಆದುದರಿಂದ ಶ್ರೀಹರಿಯ ಸ್ವರೂಪವು ಅಖಿಲಹೇಯಪ್ರತ್ಯನೀಕವಾಗಿ ಕಲ್ಯಾಣೈಕತಾನವಾಗಿ, ಅವಿಕಾರವಾಗಿ, ಪರಿಚ್ಛೇದರಹಿತವಾಗಿ, ವಿಭೂತಿದ್ವಯಯುಕ್ತವಾಗಿ, ನಿಸ್ಸಮಾಭ್ಯಧಿಕವಾಗಿ, ವಿಭುವಾಗಿ, ನಿರವಧಿಕಜ್ಞಾನವಿಕಾಸಯುಕ್ತವಾಗಿದೆ ಎಂದು ಹೇಳಲ್ಪಟ್ಟಿತು. ಲಕ್ಷ್ಮ್ಯಯ ಸ್ವರೂಪವೂ ಅದರೊಂದಿಗೆ ನಿತ್ಯಯೋಗವುಳ್ಳದ್ದಾಗಿ ಅನುರೂಪವಾದುದು ಎಂದು ಹೇಳಿರುವದರಿಂದ ಅಂಥಾದ್ದೇ ಎಂಬ ಭಾವವು. ಇಲ್ಲಿ **ರೂಪಂ** ಎಂಬುವದು ಸ್ವರೂಪವನ್ನು ಬೋಧಿಸುತ್ತದೆ. **ಯದ್ರೂಪಂ ಬ್ರಹ್ಮ ಸಂಜ್ಞಿತಂ** ಎಂಬಲ್ಲಿ ರೂಪಶಬ್ದವು ಸ್ವರೂಪವನ್ನು ಬೋಧಿಸುವದರಿಂದಲೂ, ಬಹುಶಃ ಈ ವಿಷ್ಣುಪುರಾಣವಾಕ್ಯವನ್ನೇ ಮನಸ್ಸಿನಲ್ಲಿಟ್ಟು ಆ **ರೂಪಂ ಬ್ರಹ್ಮ** ಎಂಬ ಪದಗಳನ್ನೇ ಇಲ್ಲಿಯೂ ಉಪಯೋಗಿಸಿರುವದರಿಂದಲೂ, ರೂಪವೆಂದರೆ ಇಲ್ಲಿ ಸ್ವರೂಪವೆಂದೇ ಅರ್ಥ ಹೇಳತಕ್ಕದ್ದು. ಹಾಗೆ ಹೇಳದಿ

ದ್ದರಿ ಮುಂದೆಯೂ ರೂಪಶಬ್ದಕ್ಕೆ ದಿವ್ಯಮಙ್ಗಳ ವಿಗ್ರಹವೆಂಬ ಅರ್ಥ ಹೇಳಬೇಕಾದುದರಿಂದ ಪೌನರುಕ್ತ್ಯದೋಷ ಉಂಟಾಗುತ್ತದೆ.

ಇಲ್ಲಿ **ಹರೇಃ** ಎಂಬ ಪ್ರಯೋಗದಿಂದ, **ಹರಿರ್ಹರತಿಪಾಪಾನಿ** ಎಂದು ಹೇಳಿರುವದರಿಂದ ಆಶ್ರಿತರ ಪಾಪಗಳನ್ನೂ, ಪುಣ್ಯಗಳೂಕೂಡ ಅಂಥಾವುಗಳೇ ಆದುದರಿಂದ ಅವುಗಳನ್ನೂ ಸಹ ಅಪಹರಿಸುವನು ಎಂಬರ್ಥವು. ಅಥವಾ ಪ್ರಳಯದೆಸೆಯಲ್ಲಿ ಬಲಾತ್ಕರಿಸಿ ಬ್ರಹ್ಮರುದ್ರೇಂದ್ರಾದಿಗಳನ್ನೂ ಅಜಡದ್ರವ್ಯುಗಳನ್ನೂ ಸಹ ಸೂಕ್ಷ್ಮರೂಪದಲ್ಲಿ ಧರಿಸುವದಕ್ಕಾಗಿ ಸರ್ವವನ್ನೂ ಅಪಹರಿಸುವನು ಎಂಬರ್ಥವನ್ನು ಹೇಳಬಹುದು. ಇದಕ್ಕೆ ಪ್ರಮಾಣವಾಕ್ಯವು:—

ಬ್ರಹ್ಮಾಣ ಮಿಂದ್ರಂ ರುದ್ರಂಚ ಯಮಂ ವರುಣಮೇವಚ।
ನಿಗೃಹ್ಯ ಹರತೇ ಯಸ್ಮಾದ್ಧರಿ ರಿತ್ಯಭಿಧೀಯತೇ ॥

ರೂಪಂಯದತ್ಯದ್ಭುತಂ ಎಂಬುವದರಿಂದ ಸರ್ವೇಶ್ವರನ ದಿವ್ಯಮಙ್ಗಳ ವಿಗ್ರಹವನ್ನು ಕುರಿತು ಹೇಳಿ, ಅದರೊಂದಿಗೆ ನಿತ್ಯಯೋಗವನ್ನು ಹೊಂದಿರುವ ಲಕ್ಷ್ಮ್ಯಾಯ ದಿವ್ಯಮಙ್ಗಳವಿಗ್ರಹವು ತತ್ಸದೃಶವಾದುದಾಗಿ ಅದಕ್ಕನುರೂಪವಾದುದೆಂದು ತಿಳಿಸುತ್ತಾರೆ. ಹಿಂದೆ **ರೂಪಂ ಬ್ರಹ್ಮ** ಎಂದು ಹೇಳಿ, ಇಲ್ಲಿ **ಮೂರ್ತಂಬ್ರಹ್ಮ** ವೆಂದು ಹೇಳಿರುವದರಿಂದ, ಹಿಂದೆ ಹೇಳಿದುದು ಸ್ವರೂಪವಿಷಯವು. ಇಲ್ಲಿ ಹೇಳುವದು ದಿವ್ಯಮಙ್ಗಳವಿಷಯವು ಎಂಬುವದು ವ್ಯಕ್ತವು. ಅದೂ ಅಲ್ಲದೆ ಈ ದಿವ್ಯಮಙ್ಗಳವಿಗ್ರಹವೆಂಥಾದ್ದೆಂದರೆ **ತತ್ಪ್ರಿಯತರಂ** ಆ ಸ್ವರೂಪಕ್ಕಿಂತ ಪ್ರಿಯತರವಾದುದು. ಸೌಂದರ್ಯಲಾವಣ್ಯಾದಿಗಳಿಂದ ಯುಕ್ತವಾದುದಾಗಿಯೂ, ನಿರತಿಶಯಪ್ರಿಯವಾದುದಾಗಿಯೂ, ಯೋಗಿಗಳಿಗೆ ಸಾಕ್ಷಾತ್ಕರಿಸಲು ಸಹಕಾರಿಯಾಗಿಯೂ, ಇರುವದರಿಂದ ಸ್ವರೂಪಕ್ಕಿಂತ ರೂಪವು ಪ್ರಿಯತರವಾದುದೆಂಬ ಭಾವವು. ಹೇಗೆ ಪ್ರಿಯತರವೆಂಬುವದನ್ನು ಶ್ರೀ ಭಾಷ್ಯಕಾರರವರು ಶರಣಾಗತಿಗದ್ಯದಲ್ಲಿ " ಸ್ವಾಭಿಮತಾನುರೂಪೈಕ ರೂಪಾಜೆಂತ್ಯದಿವ್ಯಾದ್ಭುತ ನಿತ್ಯನಿರವದ್ಯ ನಿರತಿಶಯೌಜ್ಜ್ವಲ್ಯ ಸೌಂದರ್ಯ ಸೌಗನ್ಧ್ಯ ಸೌಕುಮಾರ್ಯ ಲಾವಣ್ಯ ಯೌವನಾದ್ಯನನ್ತಗುಣ ನಿಧಿದಿವ್ಯರೂಪ " ಎಂದು ಬಹು ಸ್ವಾರಸ್ಯವಾಗಿ ಉಪಪಾದಿಸಿರುತ್ತಾರೆ. ಅನೇಕದಿವ್ಯಾಯುಧಗಳಿಂದ

ಲೂ, ದಿವ್ಯಾಭರಣಾಗಳಿಂದಲೂ, ಭೂಷಿತನಾಗಿರುವದರಿಂದಲೂ ಸಹ ಪ್ರಿಯತರ ಎಂದು ಯತಿವರ್ಯರು ತೋರಿಸಿರುತ್ತಾರೆ.

ಮೂರ್ತಂ – ಈ ದಿವ್ಯಮಜ್ಗಳ ವಿಗ್ರಹವು ನಮ್ಮಗಳ ಹಾಗೆ ಕರ್ಮೋಪಾಧಿಯಿಂದುಂಟಾದುದಲ್ಲವು. ನಮ್ಮಗಳ ದೇಹವು ಕರ್ಮದಿಂ ದುಂಟಾದುದಾಗಿ ಹೇಯವಾಗಿ ತ್ರಿಗುಣಗಳಿಂದುಂಟಾದುದು. ಸರ್ವೇ ಶ್ವರನ ದಿವ್ಯಮಜ್ಗಳ ವಿಗ್ರಹವು, ಅಪ್ರಾಕೃತವಾದುದು, ಶುದ್ಧಸತ್ವ ಮಯವಾವ ಪಂಚೋಪನಿಷತ್ತುಗಳಿಂದುಂಟಾದುದು. ಇಂತಹ ಅಪ್ರಾ ಕೃತವಾದ ವಿಕಾರರಹಿತವಾದ ಪಂಚಭೂತಗಳಿಂದುಂಟಾದುದರಿಂದ **'ಮೂರ್ತಂ'** ಎಂಬ ಪ್ರಯೋಗವ್ರ. ಆದುದರಿಂದ **"ನತಸ್ಯಪ್ರಾ ಕೃತಾ ಮೂರ್ತಿ ರ್ನಾಂಸಮೇಧೋಸ್ತಿ ಸಂಭವಾ"** (ವರಾಹಪುರಾಣ. 34. 40.) "ಸರ್ವೇಶ್ವರನ ದಿವ್ಯಮಜ್ಗಳ ವಿಗ್ರಹವು, ಪ್ರಕೃತಿ ಸಂ ಬಂಧರಹಿತವಾದುದಲ್ಲವು; ನಾಂಸ ಮೇಧಸ್ಸು ಎಲಬುಗಳಿಂದ ಸೇರಿ ದುದಲ್ಲವು," ಎಂದೂ, **"ನಭೂತ ಸಂಘ ಸಂಸ್ಥಾನೋ ದೇಹೋಸ್ಯ ಪರಮಾತ್ಮನಃ"** (ಭಾರ. ಶಾಂ. 206. 60.) "ಪರಮಾತ್ಮನ ದಿವ್ಯ ಮಜ್ಗಳ ವಿಗ್ರಹವು ಈ ಪ್ರಾಕೃತ ಭೂತಗಳಿಂದುಂಟಾದುದಲ್ಲವು" ಎಂದೂ, **"ಯಸ್ಯದಿವ್ಯಂ ಹಿತದ್ರೂಪಂ ಹೀಯತೇ ವರ್ಧತೇನಚ"** "ಯಾವ ಪರಮಾತ್ಮನ ದಿವ್ಯವಾದ ದೇಹವು ವಿಲಕ್ಷಣವಾದುದಾಗಿ ಕ್ಷಯ ವೃದ್ಧಿಗಳನ್ನು ಹೊಂದದೇ ಇರುತ್ತದೆ" ಎಂದೂ ಅನೇಕ ಪ್ರಮಾಣಗಳಿವೆ. ಆದರೆ **"ಸವ್ಯಂ ಪಾದಂ ಪ್ರಸಾರ್ಯ"** ಎಂಬ ಶ್ಲೋಕದಲ್ಲಿ ಹೇಳಿರುವ ಹಾಗೆ, ಮುಖ, ಚತುರ್ಭುಜ ಚರಣಾದಿಗಳು ಸರ್ವೇಶ್ವರನಿಗೆ ಇದ್ದರೆ, ಸರ್ವೇಶ್ವರನ ದೇಹವೂ ನಮ್ಮ ದೇಹದ ಹಾಗೆ ಅನಿತ್ಯವಾಗಿರಬೇಕಲ್ಲವೇ ಎಂದರೆ, ನಮ್ಮ ದೇಹಗಳಾದರೋ ಜನ್ಮದಿಂದ ಉತ್ಪನ್ನವಾದವು. ನಿತ್ಯವಿಭೂತಿಯೂ, ಸರ್ವೇಶ್ವರನ ವಾಸುದೇವ ಮೊದಲಾದ ದಿವ್ಯಮಜ್ಗಳ ವಿಗ್ರಹವೂ ಅನಾದಿಯಾಗಿರು ವವು. ಆದರೆ ವಿಭವಾವತಾರಗಳಲ್ಲಿ ದಿವ್ಯಮಜ್ಗಳ ವಿಗ್ರಹಗಳಿಗೆ ಬೇಧ ತೋರುತ್ತದೆಯಲ್ಲಾ ಎಂದರೆ ಸಜ್ಕಲ್ಪದಿಂದ ಹಾಗೆ ಭಿನ್ನರೂಪ ಗಳುಳ್ಳದ್ದಾಗಿ ತೋರುತ್ತವೆ. ಆದುದರಿಂದ ದಿವ್ಯಮಜ್ಗಳ ವಿಗ್ರಹವು ನಿತ್ಯವಾದುದು.

ಈ ದಿವ್ಯಮಙ್ಗಳ ವಿಗ್ರಹವು **ಅತ್ಯದ್ಭುತಂ** ಎಂದು ಹೇಳಲ್ಪಟ್ಟಿರುತ್ತದೆ. ಸನ್ನಿವೇಶ, ಗುಣ, ವಿಹಾರ, ಪ್ರಭಾವಗಳಿಂದ ಅತ್ಯದ್ಭುತವಾದುದೆಂದು ಶ್ರೀ ನಿಗಮಾನ್ತ ಮಹಾದೇಶಿಕರವರು ವ್ಯಾಖ್ಯಾನ ಬರೆದಿರುತ್ತಾರೆ. ಈ ಪರವಾಸುದೇವ ರೂಪವು ಅದ್ಭುತವಾದುದೆಂದು ಶುಕಮಹರ್ಷಿಯು **"ತವದ್ಭುತಂ ಬಾಲಕ ವಮ್ಬುಜೇಕ್ಷಣಂ ಚತುರ್ಭುಜಂ ಶಂಖ ಗದಾದ್ಯುದಾ ಯುಧವ್ಂ । ಶ್ರೀವತ್ಸ ಲಕ್ಷ್ಮಂ ಗಳ ಶೋಭಿಕೌಸ್ತುಭಂ ಪೀತಾಮ್ಬರಂ ಸಾಂದ್ರ ಪಯೋದಸೌಭಗವಮ್"** ಎಂದು ವರ್ಣಿಸಿರುತ್ತಾರೆ. ಏಕೆಂದರೆ, ಶ್ರೀ ಕೃಷ್ಣನು ತನ್ನ ಮಾತಾಪಿತೃಗಳಿಗೆ ಆ ರೂಪದಲ್ಲಿ ತಾನೇ ಪ್ರಥಮತಃ ಸೇವೆಯನ್ನಿತ್ತುದರಿಂದಾಗಲಿ, ಅಥವಾ ವಿಶ್ವರೂಪದಲ್ಲಿ ಅರ್ಜುನನಿಗೆ ಸೇವೆಯಿತ್ತುದುದರಿಂದಲಾಗಲಿ, ಅತ್ಯದ್ಭುತವು. **"ಅನೇಕವಕ್ತ್ರನಯನಂ ಅನೇಕಾದ್ಭುತ ದರ್ಶನಂ"** (ಗೀ. 11. 10.) ಎಂದು ಹೇಳಿರುವಹಾಗೆ ಅದ್ಭುತರೂಪವೆಂದಾದರೂ ಊಹಿಸಬಹುದು. ಅಥವಾ, ಅನೇಕ ಅದ್ಭುತಾಕಾರಗಳನ್ನು ಎತ್ತಿದುದರಿಂದಲಾಗಲಿ ಅತ್ಯದ್ಭುತವು, ಹೆಚ್ಚಾಗಿ ಬೆಳೆಯುತ್ತಿದ್ದ ಮತ್ಸ್ಯಾಕಾರವೇನು, ಅರ್ಧಸಿಂಹಾಕೃತಿ ಅರ್ಧಮನುಷ್ಯಾಕೃತಿಯ ರೂಪವೇನು, ತ್ರಿವಿಕ್ರಮಾಕೃತಿಯೇನು ಇವೇ ಮೊದಲಾದವುಗಳಿಂದಲೂ **ಅತ್ಯದ್ಭುತರೂಪ**ವೆಂದು ಹೇಳಲ್ಪಟ್ಟಿತೆಂದೂ ಊಹಿಸಬಹುದು. ಅಥವಾ ಮನುಷ್ಯಾಕೃತಿಗಳಲ್ಲೂ, ಮೂರೂಮುಕ್ಕಾಲು ಘಳಿಗೆಗಳಲ್ಲಿ ೧೪೦೦೦ ರಾಕ್ಷಸರನ್ನು ಕೊಲ್ಲುವದು, ಸಮುದ್ರಕ್ಕೇನೇ ಸೇತುಬಂಧನವು, ಖರದೂಷಣ ಸಂಹಾರ, ಮತ್ತು ಪೂತನಿ, ಶಕಟಾಸುರರನ್ನು ಬಾಲನಾಗಿ ಕೊಲ್ಲುವದು, ಕಂಸವಧೆ, ಗೋವರ್ಧನೋದ್ಧಾರಣ ಇತ್ಯಾದಿ ಅತಿಮಾನುಷ ಚರ್ಯೆಯಿಂದಲೂ ಅತ್ಯದ್ಭುತವು.

ಈ ಮೇಲೆ ಹೇಳಿದ ಸರ್ವೇಶ್ವರನ ದಿವ್ಯಮಂಗಳ ವಿಗ್ರಹಗಳಲ್ಲದೆ, ಇತರಗಳಾದ **ವ್ಯೂಹ**ಗಳೂ, **ವ್ಯೂಹಾಂತರ** ರೂಪಗಳೂ, ವಿಭವಾವತಾರ ರೂಪಗಳೂ, ಹಾರ್ದ, ಅರ್ಚ್ಯಾವತಾರ ರೂಪಗಳೂ ಇವೆಲ್ಲವೂ **ಯಾನ್ಯನ್ಯಾನಿ** ಎಂಬ ಪದಗಳಿಂದ ಸೂಚಿಸಲ್ಪಟ್ಟವು. **ರೂಪ**ಗಳು ಐದುವಿಧವು, (1) ಪರ, (2) **ವ್ಯೂಹ**, (3) **ವಿಭವ**, (4) **ಹಾರ್ದ** (5) **ಅರ್ಚ್ಯಾವತಾರ** ಎಂಬುದಾಗಿ, **ಯಾನ್ಯನ್ಯಾನಿ** ಎಂಬುವದ

ರೆಂದ ವ್ಯೂಹಾದಿರೂಪಗಳು ಹೇಳಲ್ಪಟ್ಟವು. **ಯಥಾಸುಖಂ ವಿಹರತೋ ರೂಪಾಣಿಸರ್ವಾಣಿ** ಎಂಬುವದರಿಂದ ಮುಖ್ಯವಾಗಿ ರಾಮ ಕೃಷ್ಣಾದಿ ವಿಭವಾವತಾರಗಳು ಹೇಳಲ್ಪಟ್ಟವು. **ಜನ್ಮ ಕರ್ಮ ಚಮೇ ದಿವ್ಯಂ** (ಗೀ 4. 9.) ಎಂದು ಹೇಳಿರುವ ಸರ್ವೇಶ್ವರನ ಅವತಾರವು, ಚೇಷ್ಟೆಗಳೂಕೂಡ ಕರ್ಮಮೂಲಕ ಉಂಟಾಗದೆ ತನ್ನ ಸಙ್ಕಲ್ಪಾನುಸಾರ ಉಂಟಾಗುವದರಿಂದಲಾಗಲಿ, ಯಥಾಸುಖಂ ಎಂಬ ಪ್ರಯೋಗವು. ಆತನು **“ ಇಚ್ಛಾಗೃಹೀತೋಭಿಮತೋರುದೇಹಃ ”** (ವಿ. ಪು. 6. 5. 84.) ತನ್ನ ಇಚ್ಛಾನುಸಾರವಾಗಿ ಮತ್ಸ್ಯ, ಕೂರ್ಮ, ವರಾಹ, ನಾರಸಿಂಹಾದಿ ರೂಪಗಳನ್ನು ಸಾಧುಪರಿತ್ರಾಣ, ದುಷ್ಟನಿಗ್ರಹ, ಧರ್ಮ ಸಂಸ್ಥಾಪನಾದಿ ಪ್ರಯೋಜನಗಳಿಗಾಗಿ ಅವಲಂಬಿಸಿದನು. ಆದುದರಿಂದ **ಯಥಾಸುಖ** ವಾದುವು. ಆದರೆ ಶ್ರೀ ರಾಮಾವತಾರದಲ್ಲಿ ಪತ್ನೀವಿಶ್ಲೇಷೆಯಿಂದಲೂ, ಶ್ರೀ ಕೃಷ್ಣಾವತಾರದಲ್ಲಿ ಅಭಿಮನ್ಯು ನಷ್ಟನಾದುದರಿಂದಲೂ ದುಃಖಾನುಭವಪ್ರಾಪ್ತವಾಗಲಿಲ್ಲವೇ, ಅದೂ ಅಲ್ಲದೆ ಈ ಎರಡು ಅವತಾರಗಳಲ್ಲೂ ಎಷ್ಟು ಯುದ್ಧಗಳೂ, ಕ್ಲೇಶಗಳೂ, ಹೀಗೆಲ್ಲಾ ಇರುವಲ್ಲಿ “ ಯಥಾಸುಖಂ “ ಹೇಗೆ ? ಇವೆಲ್ಲವೂ **ವಿಹಾರವು** ಹೇಗೆ ? ಎಂದರೆ ಅವೆಲ್ಲವೂ **ಕಪಟನಾಟಕ** ಸೂತ್ರಧಾರನ ನಟನೆಯೇ ವಿನಾ ವಾಸ್ತವವಾಗಿಯೂ ದುಃಖವು ಈಷದಪಿ ಇಲ್ಲವು. ರಾಮಾವತಾರದಲ್ಲಿ ಹದಿನಾಲ್ಕು ಸಹಸ್ರ ರಾಕ್ಷಸರನ್ನು ಕೊಲ್ಲುವದೂ, ಶೂರ್ಪನಖಿಯ ನಾಸಾಚ್ಛೇದವು, ಸೇತುಬಂಧನವೊದಲಾದವೂ ಹಾಗೆಯೇ ಕೃಷ್ಣಾವತಾರದಲ್ಲಿ, ಪೂತನ, ಶಕಟ, ಕಂಸವೊದಲಾದವರ ಸಂಹಾರವೂ ಪಾರ್ಥಸಾರಥ್ಯವೂ ಎಲ್ಲವೂ ಸರ್ವೇಶ್ವರನಿಗೆ ಲೀಲಾರೂಪವಾವವು. ಆದುದರಿಂದಲೇ **“ ಕ್ರೀಡತೋಬಾಲಕಸ್ಯೇವ ಚೇಷ್ಟಾಂತಸ್ಯ ನಿಶಾಮಯ ”** (ವಿ. ಪು. 1. 2. 18) ಎಂದೂ, **“ಮೋದತೇಭಗವಾನ್ಭೂತೈರ್ಬಾಲಃ ಕ್ರೀಡನಕೈರಿವ ”** (ಭಾರ. ಸಭಾ.) ಎಂಬ **“ ಕ್ರೀಡಾಹರೇರಿದಂಸರ್ವಂ ”** (ಭಾರ. ಶಾಂ. 206. 58.) ಎಂಬ, ಹೇಳಿಕೆಗಳಿಗನುಸಾರವಾಗಿ ಇಲ್ಲಿಯೂ **“ ಯಥಾಸುಖಂ ವಿಹರತಃ ”** ಎಂಬ ಪ್ರಯೋಗವು, ಹೀಗೆ ಅವತರಿಸಿ, ದಿವ್ಯಾದ್ಭುತಚೇಷ್ಟೆಗಳನ್ನೆಸಗಿದುದು ಅನೇಕಾವರ್ತಿ ಎಂದು

ತಿಳಿಸುವದಕ್ಕಾಗಿ ರೂಪಾಣಿ ಸರ್ವಾಣಿ ಎಂದು ಪ್ರಯೋಗಿಸಿರುತ್ತಾರೆ. **" ಬಹೂನಿಮೇವ್ಯತೀತಾನಿ ಜನ್ಮಾನಿ "** (ಗೀ. 4. 5.) **" ಓ ಅರ್ಜುನನೇ** ನನಗೂಕೂಡ ನಿನ್ನಹಾಗೆ ಅನೇಕಜನ್ಮಗಳು **ಕಳೆದುಹೋಗಿವೆ "** ಎಂದು ಸರ್ವೇಶ್ವರನೇ ಹೇಳಿಕೊಂಡಿರುತ್ತಾನೆ.

ಹೀಗೆ ಸಮಸ್ತ ರೂಪಗಳನ್ನೂ ಹೊಂದುವಾಗೆಲ್ಲಾ, ಲಕ್ಷ್ಮಿಯು ಆತನದಿವ್ಯರೂಪಗಳಿಗೆ ಅನುಸಾರವಾದ ದಿವ್ಯರೂಪಗಳೊಂದಿಗೆ ಸರ್ವೇಶ್ವರನನ್ನು ಅನುಸರಿಸುವಳೆಂದು ಹೇಳುವದಕ್ಕಾಗಿ **ಅನುರೂಪ ರೂಪ ವಿಭವೈಃ** ಎಂದು ಪ್ರಯೋಗಿಸಿರುತ್ತಾರೆ. **ಅನುರೂಪ** ಹೇಗೆಂಬುವದನ್ನು ಶ್ರೀ ಪರಾಶರರು ಬಹು ಸ್ವಾರಸ್ಯವಾಗಿ ಉಪಪಾದಿಸಿರುತ್ತಾರೆ :—

'ಏವಂ ಯದಾ ಜಗತ್ಸ್ವಾಮೀ ದೇವದೇವೋ ಜನಾರ್ದನಃ ।
ಅವತಾರಂ ಕರೋತ್ಯೇಷಾ ತದಾಶ್ರೀಸ್ತತ್ಸಹಾಯಿನೀ ।
ರಾಘವತ್ವೇ ಭವೇತ್ಸೀತಾ ರುಕ್ಮಿಣೀ ಕೃಷ್ಣಜನ್ಮನಿ ।
ಅನ್ಯೇಷು ಚಾವತಾರೇಷು ವಿಷ್ಣೋರೇಷಾನಪಾಯಿನೀ" ॥

ಯಾವಾಗ ಸರ್ವೇಶ್ವರನು ಅವತಾರವನ್ನು ಮಾಡುತ್ತಾನೋ ಆಗ ಲಕ್ಷ್ಮಿಯೂ ಆತನಿಗೆ ಸಹಾಯಕಳಾಗುತ್ತಾಳೆ ; ಆತನು ರಾಘವನಾದರೆ, ಈಕೆಯು ಸೀತೆಯಾಗುತ್ತಾಳೆ. ಆತನು ಕೃಷ್ಣನಾದರೆ, ಈಕೆಯು ರುಕ್ಮಿಣಿಯಾಗುವಳು. ಇನ್ನೂ ಇತರ ಅವತಾರಗಳಲ್ಲೂ ಶ್ರೀ ಮಹಾವಿಷ್ಣುವನ್ನನುಸರಿಸಿ, ಪತಿಯ ವಿಗ್ರಹಕ್ಕನುಸಾರನಾದ ವಿಗ್ರಹವನ್ನು ಹೊಂದುವಳೆಂಬಭಿಪ್ರಾಯವು. **ದೇವತ್ವೇ ದೇವ ದೇಹೇಯಂ ಮನುಷ್ಯತ್ವೇನ ಮಾನುಷೀ,** ಆತನು ದೇವತೆಗಳ ದೇಹವನ್ನು ಹೊಂದಿದರೆ, ಇವಳೂ ಅಂತಹ ದೇಹವನ್ನೇ ಹೊಂದುವಳು. ಆತನು ಮನುಷ್ಯದೇಹವನ್ನು ಹೊಂದಿದರೆ, ಆಕೆಯೂ ಮನುಷ್ಯದೇಹವನ್ನು ಹೊಂದುವಳು. ಹೀಗೆ ಪತಿಯ ದಿವ್ಯಮಜ್ಗಳ ವಿಗ್ರಹಕ್ಕನುರೂಪವಾದ ದಿವ್ಯಮಜ್ಗಳ ವಿಗ್ರಹವನ್ನು ಹೊಂದುವಳು ಎಂಬ ಭಾವವು.

ಇಂತಹ **ಅನುರೂಪ ರೂಪಗಳೆಲ್ಲಾ** ಇತರರಿಂನುಂಟಾದವಲ್ಲವೆಂದು ಸೂಚಿಸುವದಕ್ಕಾಗಿ **ಸ್ವೈಃ** ಎಂಬ ಪ್ರಯೋಗವು ; ಲಕ್ಷ್ಮಿಯು

ಸ್ವಭಾವಸಿದ್ಧವಾದವುಗಳೆಂಬಭಿಪ್ರಾಯವು. ಹಾಗೆಯೇ, ಶ್ರೀ ಪರಾಶರ ಭಟ್ಟರವರೂ **"ಸ್ವತಶ್ಚೀಃ"** (ಶೇಗುಣ) **ಸ್ವಯಾದೀಪ್ತಾ ರತ್ನಂ** (ಶೇಗುಣ) ಇತ್ಯಾದಿ ಪ್ರಯೋಗಗಳ ಮೂಲಕ, ಈ ಅಭಿಪ್ರಾಯಗಳನ್ನೇ ಸಮರ್ಥನೆ ಮಾಡಿರುತ್ತಾರೆ. ಇಂತಹ ಅನುರೂಪ ರೂಪಗಳುಳ್ಳವಳಾಗಿಯೇ ಅನುವರ್ತಿಸಿ, ಪತಿಗೆ ಸಹಾಯಕಳಾಗುವದರಿಂದ, ಶ್ರೀ ಪರಾಶರರೂ, **"ಮದ್ಧರ್ಮ ಧರ್ಮಿಣೀ ನಿತ್ಯಂ"** ನನ್ನ ಧರ್ಮಗಳಿಗನುಸಾರವಾದ ಧರ್ಮಗಳುಳ್ಳವಳೆಂದೂ, **ನಿತ್ಯೈಷಾ ಜಗನ್ಮಾತಾ ವಿಷ್ಣೋಃ ಶ್ರೀರನಪಾಯಿನೀ** (ವಿ. ಪು. 1.8.17) "ಆ ಲೋಕಮಾತೆಯು ನಿತ್ಯಳು, ವಿಷ್ಣುವಿನನ್ನು ಎಂದಿಗೂ ಬಿಟ್ಟು ಅಗಲದಿರುವವಳು" ಎಂದೂ ಹೇಳಿರುತ್ತಾರೆ.

ಹಿಂದೆ ಸರ್ವೇಶ್ವರನ ಸ್ವರೂಪವನ್ನೂ, ರೂಪಗಳನ್ನೂ ಹೇಳಿ ಅದಕ್ಕೆ ಅನುಸಾರವಾಗಿ, **ಅನುರೂಪರೂಪವಿಭವೈಃ** ಎಂದು ವಿಭವ ಶಬ್ದವನ್ನೂ ಸಹ ಉಪಯೋಗಿಸಿರುವದರಿಂದಲೂ, ಶ್ರೀ ಭಾಷ್ಯಕಾರರು ಪೃಥುಗದ್ಯದಲ್ಲಿ ಶ್ರೀ ಶರಣಾಗತಿವಾಕ್ಯದಲ್ಲಿ **"ಭಗವನ್ನಾರಾಯಣಾಭಿಮತಾನುರೂಪ ಸ್ವರೂಪರೂಪಗುಣ ವಿಭವೈಶ್ವರ್ಯ ಶೀಲಾದ್ಯನವಧಿಕಾತಿಶಯಾ ಸಂಖ್ಯೇಯ ಕಲ್ಯಾಣ ಗುಣಗಣಾಂ"** ಎಂದು ಈ ಅಭಿಪ್ರಾಯವನ್ನೇ ಉಪಪಾದಿಸಿರುವದರಿಂದಲೂ, ಇಲ್ಲಿಯೂ ಕೂಡ ಸ್ವರೂಪ ರೂಪ ಗುಣ ವಿಭವೈಶ್ವರ್ಯಾದಿಗಳು ಹೇಳಲ್ಪಟ್ಟವೆಂದು ಭಾವಿಸಿ, ಲಕ್ಷ್ಮ್ಯಾಯ ನಿತ್ಯಯೋಗವು ಇವೆಲ್ಲಾದರಲ್ಲೂ ಹೇಳಲ್ಪಟ್ಟಿತೆಂದು ತಿಳಿಯತಕ್ಕದ್ದು. ಆದುದರಿಂದಲೇ ಇವರಿಬ್ಬರ ಸ್ವರೂಪ ರೂಪಾದಿಗಳೆಲ್ಲಾ **ಗಾಢೋಪ ಗೂಢಾನಿ,** ಪರಸ್ಪರ ಸಂಶ್ಲೇಷೆಯುಳ್ಳವುಗಳೆಂದು ಉಪದೇಶಿಸಲ್ಪಟ್ಟವು. **"ಅಗಲಗಿಲ್ಲೇ ನಿರ್ಮೈಯುಂ"** ಎಂದು ಹೇಳಿದವಳು ಲಕ್ಷ್ಮ್ಯಾಯು, **ನಜೀವೇಯಂ ಕ್ಷಣಮಪಿ** ಎಂದು ಹೇಳಿದವನು ಶ್ರೀರಾಮನು; ಹಾಗೆಯೇ **ಅನನ್ಯಾ ರಾಘವೇಣಾಹಂ ಭಾಸ್ಕರೇಣ ಪ್ರಭಾಯಥಾ** ಎಂದು ಹೇಳಿದವಳು ಸೀತೆಯು, **ಅನನ್ಯಾಹಿ ಮಯಾಸೀತಾ ಭಾಸ್ಕರೇಣ ಪ್ರಭಾಯಥಾ** ಎಂದು ಹೇಳಿದವನು ಶ್ರೀರಾಮನು. ಹೀಗೆ ವಿಶೇಷಣ ವಿಶೇಷ್ಯಭಾವದಿಂದ ಇಬ್ಬರೂ ನಿತ್ಯಯೋಗವುಳ್ಳವರು. ಹೀಗೆ ಸದಾ ಒಟ್ಟಿಗೇನೇ ಇರುವದ

ರಿಂದ, ಲಕ್ಷ್ಮ್ಯಾಯ ನಿತ್ಯಯೋಗವು ಅಪರಾಧ ಭೀತರಾಗಿರುವವರಿಗೆ ಉಪಾಯದೆಶೆಯು ಸುಕರವು, ಪಾಪ್ತಿದೆಶೆಯಲ್ಲೂ ಹಾಲಿನೊಂದಿಗೆ ಸಕ್ಕರೆ ಮಿಳಿತವಾದ ಹಾಗೆ ಭೋಗ್ಯನಾದ ನಾರಾಯಣನು ಇನ್ನೂ ಪರಮಭೋಗ್ಯನು. ಆದುವರಿಂದಲೇ **ಗಾಢೋಪ ಗೂಢಾಖಿ** ಎಂಬ ಪ್ರಯೋಗವು. ಹೀಗೆ ಈ ಶ್ಲೋಕವು ದ್ವಯಮಂತ್ರದ **ಮತುಪ್** ಪ್ರತ್ಯಯದ ಅರ್ಥ ಪ್ರತಿಪಾದಕವಾಗಿರುತ್ತದೆ. ಅದೂ ಅಲ್ಲದೆ **ಶಾನ್ತಾ ಸಂತ**ವೆಂದು ಭಗವತ್ಸ್ವರೂಪವು ಉಪಪಾದಿತವಾಗಿರುವದರಿಂದ, **"ಕಾನ್ತಸ್ತೇ ಪುರುಷೋತ್ತಮಃ"** ಎಂಬ ಶ್ಲೋಕದಲ್ಲಿ ವಿವರಿಸಲ್ಪಟ್ಟ ಹಾಗೆ, ಇಲ್ಲಿಯೂ **ನಾರಾಯಣ** ಶಬ್ದದ ಅಯನ ಶಬ್ದಾರ್ಥವೂ, ಸರ್ವೇಶ್ವರನ ಕಲ್ಯಾಣಗುಣಗಳೂ ಮತ್ತೂ **ಮೂರ್ತಂರೂಪಂ** ಎಂಬುವದರಿಂದ ಸರ್ವೇಶ್ವರನ ದಿವ್ಯಮಜ್ಗಳ ವಿಗ್ರಹವೂ, ಅದಕ್ಕೆ ಸಂಬಂಧ ಪಟ್ಟ ದಿವ್ಯಾಯುಧ, ದಿವ್ಯಾಭರಣ, ದಿವ್ಯಪರಿಜನ, ದಿವ್ಯವೈಕುಂಠ ಮೊದಲಾದ ನಾರಶಬ್ದಾರ್ಥವೂ ವಿವರಿಸಲ್ಪಟ್ಟವು. ಈ ನಿತ್ಯಯೋಗದಿಂದ ಉಪಾಯೋಪಾಯಭಾವಗಳೂ ತೋರಿಬರುವದರಿಂದ ದ್ವಯಮಂತ್ರಾರ್ಥವು ಇಲ್ಲಿ ಉಪಪಾದಿಸಲ್ಪಟ್ಟಿತು.

ಹೀಗೆ ಲೋಕದಂಪತಿಗಳಿಗೆ ಸ್ವರೂಪರೂಪದಲ್ಲೂ ನಿತ್ಯಯೋಗವನ್ನು ಹೇಳಿದಪಕ್ಷದಲ್ಲಿ, ಸರ್ವೇಶ್ವರನು ವಿಭುವಾದುದರಿಂದ ಲಕ್ಷ್ಮ್ಯಾಯೂಕೂಡ ವಿಭುವೆಂದು ಹೇಳಲು ಅನೇಕ ಪ್ರಮಾಣಗಳುಂಟು.

(1) **ಯಥಾ ಸರ್ವಗತೋ ವಿಷ್ಣು ಸ್ತಥೈವೇಯಂ ದ್ವಿಜೋತ್ತಮ** ಎಂದೂ, (2) **ತ್ವಯೈತದ್ವಿಷ್ಣುನಾ ಚಾಂಬ ಜಗದ್ವ್ಯಾಪ್ತಂ ಚರಾಚರಂ** ಎಂದೂ, (3) **ಅಸ್ಯೇಶಾನಾ ಜಗತೋ ವಿಷ್ಣು ಪತ್ನೀ** ಎಂದೂ, (4) **ಈಶ್ವರೀಂಗ್ ಸರ್ವಭೂತಾನಾಂ** ಎಂದೂ, (5) **ಈಶಾನಾ ದೇವೀ ಜಗತೋ ಧಿ ಪತ್ನೀ** ಎಂದೂ, (6) **ಅಕ್ಷ್ಣಾಶ್ಯ ಸಮಸ್ತ ಚಿದಚಿದ್ಪ್ರಪಂಚೋ ವ್ಯಾಪ್ಯಃ** ಎಂದೂ ಪ್ರಮಾಣಗಳಿರುವದರಿಂದ ಲಕ್ಷ್ಮ್ಯಾಯೂ ಸಮಸ್ತ ಚಿದಚಿತ್ತುಗಳನ್ನೂ ಸರ್ವೇಶ್ವರನ ಹಾಗೆಯೇ ವ್ಯಾಪಿಸಿರುತ್ತಾಳೆ. ಮತ್ತು (7) **ಆಕ್ರಮ್ಯ ಸೇರ್ವಾಸ್ತು ಯಥಾತ್ರಿ ಲೋಕೀಂ ತಿಷ್ಟತ್ಯಯಂ ದೇವವರೋ ಸಿತಾಕ್ಷ್ಯಾ । ತಥಾ ಸ್ಥಿತಾತ್ಮಂ**

ವರದೇ ತಥಾಪಿ, ದೇವಶ್ರೇಷ್ಠನಾದ ವಿಷ್ಣುವು ಹೇಗೆ ಮೂರುಲೋಕವನ್ನೆಲ್ಲಾ ಆಕ್ರಮಿಸಿರುತ್ತಾನೋ, ಹಾಗೆಯೇ ವರವನ್ನೀಯುವಳಾದ ಓ ಲಕ್ಷ್ಮಿಯೇ ನೀನೂ ಕೂಡ" ಎಂದು ಹೇಳಿರುವದರಿಂದ ಲಕ್ಷ್ಮಿಯೂ ಸರ್ವವನ್ನೂ ವ್ಯಾಪಿಸಿರುವವಳು.

(8) **ತಥಾಲಕ್ಷ್ಮ್ಯಾಃ ಸ್ವರೂಪಂಚ ವಕ್ಷ್ಯೇ ಶೃಣು ಸಮಾಹಿತಃ ।**
ಗುಣತಶ್ಚ ಸ್ವರೂಪೇಣ ವ್ಯಾಪ್ತಿ ಸ್ಸಾಧಾರಣೇ ಮತಾ ।
ಯಥಾಮಯಾ ಜಗದ್ವ್ಯಾಪ್ತಂ ಸ್ವರೂಪೇಣ ಸ್ವಭಾವತಃ ।
ತಥಾವ್ಯಾಪ್ತಂ ತಯಾಸರ್ವಂ ನಿಯನ್ತ್ರೀಚ ತಥೇಶ್ವರೀ ॥

ಸರ್ವೇಶ್ವರನಿಂದ ಜಗತ್ತು ಹೇಗೆ ವ್ಯಾಪಿಸಲ್ಪಟ್ಟಿರುತ್ತದೋ, ಹಾಗೆಯೇ ಲಕ್ಷ್ಮಿಯಿಂದಲೂ ವ್ಯಾಪಿಸಲ್ಪಟ್ಟಿರುತ್ತದೆ. ಸರ್ವೇಶ್ವರನು ಹೇಗೆ ನಿಯನ್ತಾ ಮತ್ತು ಈಶ್ವರನೋ, ಹಾಗೆಯೇ ಲಕ್ಷ್ಮಿಯೂ ಎಂದು ಈ ವಿಷ್ವಕ್ಸೇನ ಸಂಹಿತಾವಾಕ್ಯವು ಲಕ್ಷ್ಮಿಗೆ ವಿಭುತ್ವವನ್ನು ಸ್ಥಾಪಿಸುತ್ತದೆ.

ಇಂತಹ ಪ್ರಮಾಣಗಳಿದ್ದರೂ ನಮ್ಮಲ್ಲೇ ಕೆಲವರು ಲಕ್ಷ್ಮಿಗೆ ಅಣುತ್ವವೇ ನ್ಯಾಯವಾದ ಸ್ವರೂಪವಾದುದರಿಂದ ವಿಭುತ್ವವು ಎಂದಿಗೂ ಕೂಡುವದಿಲ್ಲವೆಂದು, ಈ ಮೇಲಿನ ಪ್ರಮಾಣಗಳಿಗೆ ಸಮನ್ವಯವನ್ನು ಹೇಳಬೇಕಾದರೆ ಆ ವಿಭುತ್ವವನ್ನು, ಧರ್ಮಭೂತಜ್ಞಾನ ಮೂಲಕವೋ, ಅಥವಾ ದಿವ್ಯಮಙ್ಗಳ ವಿಗ್ರಹ ಮೂಲಕವಾಗಿಯೋ ಅನ್ವಯಿಸಕೊಳ್ಳಬೇಕೆಂದು ಹೇಳುತ್ತಾರೆ. ಈ ವಿಷಯಗಳನ್ನೆಲ್ಲಾ ಶ್ರೀನಿಗಮಾನ್ತ ಮಹಾದೇಶಿಕರವರು ತಾವು ಅನುಗ್ರಹಿಸಿದ ವ್ಯಾಖ್ಯಾನದಲ್ಲಿ ಚರ್ಚಿಸಿ ಆ ಅಭಿಪ್ರಾಯಗಳು ಸರಿಯಲ್ಲವೆಂದು ತೋರಿಸಿರುತ್ತಾರೆ. ಅವುಗಳನ್ನೆಲ್ಲಾ ಇಲ್ಲಿ ಚರ್ಚಿಸಲು ಸಾಧ್ಯವಿಲ್ಲವು. ಆದರೂ ಕೆಲವು ಪೂರ್ವಪಕ್ಷಗಳಿಗೆ ಮಾತ್ರ ಇಲ್ಲಿ ಸಮಾಧಾನವು ಬರೆಯಲ್ಪಡುತ್ತದೆ.

ಶ್ರೀ ಪೆರಿಯವಾಚ್ಚಾನ್ ಪಿಳ್ಳೈಯವರ ಕುಮಾರರಾದ ಶ್ರೀ ನಯನಾರಾಚ್ಚಾನ್ಪಿಳ್ಳೈಯವರು ಬರದಿರುವ ಚತುಶ್ಲೋಕೀ ವ್ಯಾಖ್ಯಾನದಲ್ಲಿ ಲಕ್ಷ್ಮಿಗೆ ವಿಭುತ್ವವನ್ನು ಹೇಳಲು ಕೆಲವು ಆಕ್ಷೇಪಣೆಗಳನ್ನು ಹೇಳುತ್ತಾರೆ:—

1. ಅನೇಕ ಶ್ರುತಿಗಳು ಚಿತ್, ಅಚಿತ್, ಈಶ್ವರರೆಂದು ಮೂರು ತತ್ವಗಳನ್ನು ಬೋಧಿಸುತ್ತವೆ. ಶ್ವೇತಾಶ್ವರೋಪನಿಷತ್ತು, **'ಭೋಕ್ತಾ ಭೋಗ್ಯಂ ಪ್ರೇರಿತಾರಂಚ ಮತ್ವಾ"** ಎಂದು ತತ್ವತ್ರಯವನ್ನು ಉಪದೇಶಿಸುತ್ತದೆ. ಇಲ್ಲಿ ಲಕ್ಷ್ಮ್ರಯನ್ನು ಈ ಮೂರರಲ್ಲಿ ಯಾವುದರಲ್ಲಿ ಹೇಳಬಹುದೆಂದು ಚರ್ಚಿಸಿ, ಅಚಿತ್ತಿನಲ್ಲಿ ಸೇರಿಸಲು ಲಕ್ಷ್ಮ್ರಗೆ ಜ್ಞಾನವಿರುವದರಿಂದ ಸಾಧ್ಯವಿಲ್ಲವೆಂದೂ, **ಪ್ರೇರಿತಾ** ಆದ ಈಶ್ವರನಲ್ಲಿ ಸೇರಿಸಲು, ಅದೇ ಉಪನಿಷತ್ತಿನಲ್ಲಿ **ಕ್ಷರಾತ್ಮಾನೌ ಈಶತೇದೇವ ಏಕಃ,** ಈ ಜೆಡಜೆತ್ತುಗಳನ್ನು ಈಶ್ವರನು, **ಏಕಃ** ಒಬ್ಬನೇ ನಿಯಮಿಸುವನೆಂದು ಹೇಳಿರುವದರಿಂದ ಬಿಗುವದಿಲ್ಲವೆಂದು ಹೇಳಿ, **ಜೀವಕೋಟಿಯಲ್ಲಿ** ಭೋಕ್ತಾಯೊಂದಿಗೇನೆ ಸೇರಿಸಬೇಕಾಗಿರುತ್ತದೆ, ಆದುದರಿಂದ ಲಕ್ಷ್ಮ್ರಗೆ ವಿಭುತ್ವವಿಲ್ಲವು ಎಂದು ಹೇಳುತ್ತಾರೆ. ಇನ್ನೂ ಅದೇ ಉಪನಿಷತ್ತಿನಲ್ಲೇ **ನತತ್ಸಮಶ್ಚಾ ಭ್ಯಧಿಕಶ್ಚದೃಶ್ಯತೇ,** ಸರ್ವೇಶ್ವರನಿಗೆ ಸಮರೂ ಅಧಿಕರೂ ಇಲ್ಲವೆಂದು ಹೇಳಿರುವದರಿಂದ, ಲಕ್ಷ್ಮ್ರಗೆ ಈಶ್ವರತ್ವವನ್ನು ಒಪ್ಪಿಕೊಂಡರೆ ಈ ಶ್ರುತಿಗೆ ವಿರೋಧ ಉಂಟಾಗುತ್ತದೆಂದು ಹೇಳುತ್ತಾರೆ. ಆದರೆ ಈ ಶ್ಲೋಕದಲ್ಲಿ ಈಶ್ವರನೊಂದಿಗೆ ಲಕ್ಷ್ಮ್ರಗೆ ಅವಿನಾಭಾವವು ಹೇಳಲ್ಪಟ್ಟಿರುವದರಿಂದ, **ಪ್ರೇರಿತಾರಂಚ** ಎಂಬುವದರಲ್ಲೇ ಲಕ್ಷ್ಮ್ರಯನ್ನು ಸೇರಿಸುವದು ಯುಕ್ತವು. ಹಾಗೆ ಭಾವಿಸದಿದ್ದರೆ **ಗಾಢೋಪಗೂಢತೆಗೆ** ವಿರೋಧವಾಗುತ್ತದೆ. ಹ್ಹಾಗೆ ಪ್ರೇರಿತಾಜೊತೆಯಲ್ಲಿ ಸೇರಿಸುವದರಿಂದುಂಟಾಗುವ **"ಈಶ್ವರ ತತ್ವಾಂತರ್ಭಾವ ಕೂಡಾದು"** ಎಂದು ಬರೆದಿರುತ್ತಾರೆ. ಆದರೆ ಶ್ರೀ ಪರಾಶರಭಟ್ಟರವರು **"ತದನ್ತರ್ಭಾವಾತ್ತ್ವಂ ನಪೃಥಗಭಿದತ್ತೇ ಶ್ರುತಿರಪಿ"** ನೀನು ಯಾವಾಗಲೂ ಸರ್ವೇಶ್ವರನಲ್ಲೇ ಅಂತರ್ಭೂತಳಾದುದರಿಂದ ಶ್ರುತಿಗಳೂ ಕೂಡ ನಿನ್ನನ್ನು ಪೃಥಕ್ಕರಿಸಿ ಹೇಳಲಿಲ್ಲವೆಂದು ಅಪ್ಪಣೆಯೇ ಕೊಡಿಸಿರುತ್ತಾರೆ. **ಈಶತೇದೇವ ಏಕಃ** ಎಂಬಲ್ಲಿರುವ **ಏಕ** ಶಬ್ದವು ಬಹುಶಃ ಶ್ರೀ ನಯನಾರಾರ್ಯ್ಯ ಪಿಳ್ಳೈಯವರಿಗೆ ತೊಂದರೆ ಮಾಡಿರುವಹಾಗೆ ತೋರುತ್ತದೆ. ಶ್ರೀ ಪರಾಶರಭಟ್ಟರವರು ಅಂತರ್ಭಾವವನ್ನು ಪಪಾದಿಸುವದರಲ್ಲಿ, ಅದ್ವೈತಿಗಳಹಾಗೆ ಸ್ವರೂಪೈಕ್ಯವನ್ನು ಬೋಧಿಸಲಿಲ್ಲವು.

ಲಕ್ಷ್ಮ್ಯಗೆ ನಿತ್ಯಯೋಗವಿರುವದರಿಂದ, ಅಕೆಯು ಸರ್ವೇಶ್ವರನಿಂದ ಪ್ರತ್ಯೇಕಿಸಲಾರದ ವಿಶೇಷಣ (ಅಪೃಥಕ್ಸಿದ್ಧವಿಶೇಷಣ) ವಾದುದರಿಂದ, ವಿಕತ್ವಭಾವಕ್ಕೇನೂ ತೊಂದರೆಯಿಲ್ಲವು. ಲಕ್ಷ್ಮ್ಯಯು ಪತಿಗೆ ಶೇಷ ಭೂತಳಾದುದರಿಂದ **"ನತತ್ಸಮಶ್ಚ"** ವೆಂದು ಹೇಳುವ ಶ್ರುತಿಗೂ ತೊಂದರೆಯಿಲ್ಲವು. ಭಿನ್ನಚೇತನ ಮತ್ತು ಭಿನ್ನಸ್ವರೂಪವುಳ್ಳವರು ಲಕ್ಷ್ಮೀನಾರಾಯಣರಾದುದರಿಂದ, ಸ್ವರೂಪೈಕ್ಯದ ತೊಂದರೆಯೂ ಇಲ್ಲವು. ಆದರೆ **ಪ್ರೇರಿತಾರಂಚ** ಎಂಬಲ್ಲಿ ವಿಕವಚನ ಹೇಗೆ ಎಂದರೆ, **"ಭೋಕ್ತಾ"** ಗಳು ಅಸಂಖ್ಯೇಯರಾಗಿರುವಲ್ಲಿ ಜಾತ್ಯೇಕವಚನ ಹೇಗೋ, ಹಾಗೆಯೇ ಈಶ್ವರೀಶ್ವರರು ಇಬ್ಬರಾದರೂ ಈಶ್ವರಿಯು ಯಾವಾಗಲೂ ಆತನನ್ನು ಬಿಡದೇ ಇರುವ ವಿಶೇಷಣವಾದುದರಿಂದ ವಿಕವಚನವೇ ಸಾಧುವಾದುದು.

2. **"ಕಿಂಚ ಈಶ್ವರ ದ್ವಿತ್ತತ್ತಿಲ್ ಅನ್ಯೋನ್ಯ ಮಾಜ್ಞಾ ವ್ಯಾಘಾತತ್ತಾಲೇ ಅನೀಶ್ವರತ್ವಮುಂ ಪ್ರಸಂಗಿಕ್ಕುಂ"** ಎಂದು ಆಕ್ಷೇಪಣೆಯನ್ನು ಹೇಳಿರುತ್ತಾರೆ. ಈ ಪಂಕ್ತಾವಿಗೆ ಸ್ವಲ್ಪವೂ ಅವಕಾಶವೇ ಇಲ್ಲವೆಂದು ಹಿಂದೆಯೇ ವ್ಯಕ್ತಪಡಿಸಿರುತ್ತದೆ. (ಪುಟವನ್ನು ಪರಾಂಬರಿಸಿ.)

3. **"ಮಾಙ್–ಮಾನೇ ಎಙ್ಗಿರ ಧಾತುವಾಲೇ"** ಎಂದು ಪಕ್ರಮಿಸಿ, ಮಕಾರವಾಚ್ಯನಾದ ಜೀವತತ್ವದಲ್ಲೇ ಸೇರಿಸಿ ಅಣುತ್ವವನ್ನು ಹೇಳತಕ್ಕದ್ದೆಂದು ಅಪ್ಪಣೆ ಕೊಡಿಸಿರುತ್ತಾರೆ. ಈ ಅಭಿಪ್ರಾಯವು ಸರಿಯಲ್ಲವೆಂದೂ, ಶ್ರೀ ವಡಕ್ಕುತಿರುವೀಧಿಪಿಳ್ಳೈ, ಶ್ರೀ ಅಳಗಿಯಮಣವಾಳ ಜೀಯರು ಪ್ರಭೃತಿಗಳಿಗೇನೆ ಈ ಅಭಿಪ್ರಾಯವು ಅಭಿಮತವಲ್ಲವೆಂದೂ ಹಿಂದೆಯೇ ಉಪಪಾದಿಸಲ್ಪಟ್ಟಿರುತ್ತದೆ.

4. ಮೇಲಿನ ಪ್ರಮಾಣಗಳಲ್ಲಿ **"ಯಥಾಸರ್ವಗತೋವಿಷ್ಣುಃ"** ಮತ್ತು **"ಜಗದ್ವ್ಯಾಪ್ತಂ ಚರಾಚರಂ"** ಎಂಬ ವಿಷ್ಣುಪುರಾಣೋಕ್ತಿಗಳು ಸ್ವರೂಪವ್ಯಾಪ್ತಿ ಪ್ರತಿಪಾದಕಗಳಲ್ಲವೆಂದೂ, ವಿಗ್ರಹವ್ಯಾಪ್ತಿ ಪ್ರತಿಪಾದಕಗಳೆಂದೂ ಹೇಳುತ್ತಾರೆ. ಇದು ಅವತಾರಗಳಲ್ಲಿನ ರೂಪವ್ಯಾಪ್ತಿಯನ್ನು ಕುರಿತು ಹೇಳಿದುದಲ್ಲವೆಂದೂ, ಸ್ವರೂಪತಃ ವ್ಯಾಪ್ತಿ

ಪ್ರತಿಪಾದಕವೆಂದೇ ಶ್ರೀ ಶೆಟ್ಟಲೂರು ನರಸಿಂಹಾಚಾರ್ಯರವರು ತಮ್ಮ ಚತುಶ್ಲೋಕಿ ವ್ಯಾಖ್ಯಾನದಲ್ಲಿ ಬಹು ಚನ್ನಾಗಿ ಪ್ರದರ್ಶಿಸಿರುತ್ತಾರೆ. ಮು ಖ್ಯ ವಾ ಗಿ ಶ್ರೀ ಪರಾಶರರೇ ಅಚೇತನ ವ ಸ್ತು ಗ ಳ ಲ್ಲೂ **"ಜ ಗ ದ್ವ್ಯಾ ಪ್ತ ಂ ಚ ರಾ ಚ ರ ಂ"** ಎಂದು ಹೇಳಿರುವದರಿಂದ ಅವತಾರರೂಪಗಳ ವ್ಯಾಪ್ತಿ ಮಾತ್ರವೇ ಎಂದು ಹೇಳುವ ವಾದವು ದೂರೀಕೃತವಾಯಿತು. ಆದುದರಿಂದ ಸ್ವರೂಪತಃ ವ್ಯಾಪ್ತಿಯನ್ನೇ ಹೇಳಬೇಕಾಗಿರುತ್ತದೆ. ಆದರೆ ಹಾಗೆ ಸರ್ವವ್ಯಾಪ್ತಿಯನ್ನೂ ಅದ ರೊಂದಿಗೆ ಸರ್ವನಿಯನ್ತೃತ್ವವನ್ನೂ ಹೇಳಲು ಸಾಧ್ಯವಿಲ್ಲದುದರಿಂದ ಈಶ್ವರಕೋಟಿಗೆ ಸೇರಿದವಳಲ್ಲವು, ಆ ಕಾರಣದಿಂದ ವಿಭುವಲ್ಲವೆಂ ದು ಆಕ್ಷೇಪವು. ಏಕೆಂದರೆ ಈಶ್ವರವ್ಯಾಪ್ತಿ ಈಶ್ವರನಿಯನ್ತೃತ್ವವು ಈಕೆಗೆ ಇಲ್ಲದಿರುವದರಿಂದ ಸರ್ವವ್ಯಾಪ್ತಿ, ಸರ್ವನಿಯನ್ತೃತ್ವವೂ, ಇಲ್ಲವಾಯಿತೆಂಬಭಿಪ್ರಾಯವು. ಆದರೆ ವಿಷ್ವಕ್ಸೇನ ಸಂಹಿತಾವಾಕ್ಯ ವು ಲಕ್ಷ್ಮೀನಾರಾಯಣರಿಗೆ ಪರಸ್ಪರ ವಾಪ್ತಿಯನ್ನು ಹೇಳುವದರಿಂದ ಆ ಆಕ್ಷೇಪಕ್ಕೆ ಕಾರಣವಿಲ್ಲವು. ಸರ್ವನಿಯನ್ತೃತ್ವವನ್ನು ಹೇಳು ವಾಗ ಲಕ್ಷ್ಮೀನಾರಾಯಣರಿಬ್ಬರೂ ಸೇರಿ ಪರತತ್ವವಾದುದರಿಂದ, ಇವ ರುಗಳಿಗೆ ವ್ಯತಿರಿಕ್ತಗಳಾದ ಸರ್ವಕ್ಕೂ ನಿಯನ್ತೃತ್ವವೆಂದು ಭಾವಿಸು ವದರಿಂದ, ಅವರ ಆಕ್ಷೇಪಣೆಗೆ ಕಾರಣವಿರುವದಿಲ್ಲವು. ಹೀಗೆ ಸರ್ವ ವ್ಯಾಪಕತ್ವವೂ ಸರ್ವನಿಯನ್ತೃತ್ವವೂ ಇರುವದರಿಂದ ಈ ಶ್ವ ರೀ ಎಂದು ಭಾವಿಸಿ, ವಿಭುತ್ವವನ್ನು ಹೇಳುವದೇ ಸರ್ವ ಸಮಂಜಸವು.

ಶ್ರೀ ಪರಾಶರರು ತಮ್ಮ ಶಿಷ್ಯರಾದ ಮೈತ್ರೇಯರಿಗೆ ಹಾಗೆಯೇ ಉಪದೇಶಿಸಿರುತ್ತಾರೆ. ಈ ಉಪದೇಶಕ್ಕೆ ಕಾರಣವೇನೆಂದರೆ:— ಭೃಗು ಮತ್ತು ಖ್ಯಾತಿ ಇವರುಗಳಿಂದ ಲಕ್ಷ್ಮಿಯು ಹುಟ್ಟಿದಳೆಂದು ಹೇಳಲು, ಅದಕ್ಕೆ ಅವರ ಶಿಷ್ಯರಾದ ಮೈತ್ರೇಯರು ಸಮುದ್ರಮಥನ ಕಾಲದಲ್ಲಿ ಕ್ಷೀರಸಮುದ್ರದಿಂದ ಲಕ್ಷ್ಮಿಯು ಉತ್ಪನ್ನಳಾದಳು ಎಂದು ಹೇಳಿರುವಾಗ, ಇವರುಗಳಿಗೆ ಪುತ್ರಿ ಹೇಗೆ ಆದಳೆಂದು ಪ್ರಶ್ನೆಮಾಡಿದ ರು. ಈ ಪ್ರಶ್ನೆಗೆ ಉ ತ್ತ ರ ವಾ ಗಿ ಶ್ರೀ ಪರಾಶರರು, ಲೋಕದಂ ಪತಿಗಳಿಗಿರುವ ನಿತ್ಯಯೋಗವನ್ನು ಚನ್ನಾಗಿ ಅವಗೂಹನೆಗೆ ಬರುವ ಹಾಗೆ ಉಪದೇಶಿಸಿರುತ್ತಾರೆ. ಶಿಷ್ಯರ ಪ್ರಶ್ನೆಯು ಅವತಾರಗಳಕಾಲ

ದಲ್ಲಿನ ನಿತ್ಯಯೋಗ ವಿಷಯವಾದುದು. ಜಿಷ್ಣುವಾತ್ರವೇ ಪೋಳಿಬಿ ಟ್ಟರೆ ತಮ್ಮ ಶಿಷ್ಯರು ಎಲ್ಲಿ ನಿತ್ಯಯೋಗವು ರೂಪತಃ ಮಾತ್ರವೆಂದು ತಿಳಿಯುತ್ತಾರೋ ಎಂದು ಭಾವಿಸಿ, ಆ ಅಸಂಭಾವನೆಯನ್ನು ಉಪಪಾ ದನೆ ಮಾಡುವಾಗ ಪ್ರಥಮತಃ ಸ್ವರೂಪದಲ್ಲೂ ನಿತ್ಯಯೋಗ ಉಂಟೆಂ ದು ಹೇಳುವದಕ್ಕಾಗಿ **“ನಿತ್ಯಾವೈಷಾಜಗನ್ಮಾತಾ ವಿಷ್ಣೋಃ ಶ್ರೀರ ನಪಾಯಿನೀ। ಯಥಾ ಸರ್ವಗತೋವಿಷ್ಣುಸ್ತಥೈವೇಯಂ ದ್ವಿಜೋ ತ್ತಮ”** ಎಂದು ಹೇಳಿ, ಹಾಗೆಯೇ ವಿಭವೈಶ್ವರ್ಯಾದಿಗಳಲ್ಲೂಕೂಡ ಉಂಟೆಂದು ವಿಷ್ಣುಪುರಾಣ ಪ್ರಥಮಾಂಶ ಎಂಟನೇ ಅಧ್ಯಾಯದಲ್ಲಿ ಚ ನ್ನಾಗಿ ಸಮರ್ಥನೆ ಮಾಡಿ ಹೇಳಿ, ಅನಂತರ ಅವತಾರಗಳಲ್ಲೂ ಉಂ ಟೆಂದು **“ರಾಘವತ್ವೇ ಭವತ್ಸೀತ್ವೀತಾ”** ಎಂಬ ಶ್ಲೋಕದ ಮೂಲ ಕ ತಿಳಿಸಿರುತ್ತಾರೆ.

ಇವುಗಳನ್ನೆಲ್ಲಾ ಅನುಸರಿಸಿಯೇ, ಶ್ರೀ ಯತಿವರ್ಯರೂ, **“ಶ್ರೀಮನ್ನಾರಾಯಣಾಭಿಮತಾನುರೂಪ”** ಎಂದು ಪ್ರಾರಂಭಿಸಿ, ಸ್ವರೂಪ ರೂಪಗುಣ ವಿಭವೈಶ್ವರ್ಯಗಳೆಲ್ಲೆಲ್ಲಾ ನಿತ್ಯಯೋಗವನ್ನುಪ ಪಾದಿಸಿರುತ್ತಾರೆ. ಇವುಗಳನ್ನನುಸರಿಸಿ ಮಹನೀಯರಾದ ಶ್ರೀ ಪರಾ ಶರಭಟ್ಟರು ಶ್ರೀ ಗುಣರತ್ನಕೋಶದಲ್ಲಿ ಅನೇಕ ಶ್ಲೋಕಗಳಿಂದ ಈ ನಿತ್ಯಯೋಗವನ್ನು ಸಮರ್ಥನೆಮಾಡಿ ಹೇಳಿರುತ್ತಾರೆ. ಇವರೂಕೂ ಡ ಸ್ವರೂಪ ರೂಪ ಗುಣ ವಿಭವೈಶ್ವರ್ಯಗಳಲ್ಲಿ ನಿತ್ಯಯೋಗವನ್ನುಪ ಪಾದಿಸಿರುತ್ತಾರೆ.

5. “ಕಿಂಚ, ಇರುವರುಕ್ಕುಮ್ ಸ್ವರೂಪವ್ಯಾಪ್ತಿಯೈಜೊಲ್ಲಿ ಲ್ “**ದೇವತಿರ್ಯಙ್ಮನುಷ್ಯೇಷು ಪುನ್ನಾಮಾ ಭಗವಾ ನ್ಹರಿಃ। ಸ್ತ್ರೀನಾಮ್ನೀ ಶ್ರೀಶ್ಚವಿಜ್ಞೇಯಾ ನಾನಯೋರ್ವಿದ್ಯತೇಪರಂ। ಅತ್ರೈವವಿಷ್ಣುರಿಯಂವಾಣೀ** (ವಿ. ಪು. 1. 9. 16. 35) ಎನ್ನು ವಿಭೂತಿ ವಿಭಾಗಂ ವಿರೋಧಿಕ್ಕುಮ್, ಎಂದು ಬರೆದಿರುತ್ತಾರೆ. ಶ್ರೀ ಪರಾಶರರು ಇಲ್ಲಿ ವಿಭೂತಿವಿಭಾಗವನ್ನು ಹೇಳಿ, ಕೆಲವು ವಿಷ್ಣುವಿಭೂ ತಿಗಳೆಂದೂ, ಇನ್ನುಕೆಲವು ಲಕ್ಷ್ಮೀವಿಭೂತಿಗಳೆಂದೂ ಉಪದೇಶಿ ಸಿ, **ನಾನಯೋರ್ವಿದ್ಯತೇಪರಂ** ಎಂದು ಹೇಳಿ ಮುಗಿಸಿರುತ್ತಾರೆ.

ಇಲ್ಲಿ ವ್ಯಾಪ್ತಿ, ನಿಯಾಮಕತ್ವಗಳು ಹೇಳಲ್ಪಟ್ಟವೆ. ಇಲ್ಲಾದರೋ ರೂಪತಃ ವ್ಯಾಪ್ತಿ ಎಂದು ಹೇಳಲಸಾಧ್ಯವು. ಅರ್ಥವಾಕ್ಯ, ನಯ ನೀತಿ, ಇತ್ಯಾದಿಗಳು, ಚೇತನವಲ್ಲದೇ ಇರುವವು ಇಲ್ಲಿ ಹೇಳಲ್ಪಟ್ಟವೆ. ಜಗತ್ತಿನ ಅರ್ಥಕ್ಕೆ ವಿಷ್ಣುವ್ಯಾಪ್ತಿಯನ್ನೂ, ಇನ್ನರ್ಥಕ್ಕೆ ಲಕ್ಷ್ಮೀವ್ಯಾಪ್ತಿಯನ್ನೂ ಹೇಳಲು ಸಾಧ್ಯವಿಲ್ಲವಷ್ಟೆ. ಸರ್ವೇಶ್ವರನ ವ್ಯಾಪ್ತಿಯು ಪರಿಚ್ಛಿನ್ನವಾದುದೆಂದಾಗುತ್ತದೆ. ಆಗ ವಿಭುತ್ವಕ್ಕೆ ಲೋಪ ಉಂಟಾಗುತ್ತದೆ. ಇದಕ್ಕೆ ವಿಷ್ಣು ಚಿತ್ತೀಯ ವ್ಯಾಖ್ಯಾನದಲ್ಲಿ " ಅನಯೋಃ- ಆಭ್ಯಾಂ, ಪರಂ- ಅನ್ಯತ್, ಸರ್ವಸ್ಯ ಉಭಯಾತ್ಮಕೇಪಿ ತತ್ರಾಭಿ ಮುಖ್ಯಾತಿಶಯ ವಿಶೇಷಾತ್ ಅರ್ಥವಾಸ್ಯಾದೀನಾಂ ತದಾತ್ಮಕತ್ವಮುಕ್ತಂ " " ಎಂದರೆ ಇವರಿಬ್ಬರಿಗಿಂತಲೂ ಬೇರೆ ಯಾವುದೂ ಇಲ್ಲವು ಎಂಬ ವಾಕ್ಯದಿಂದ ಸಮಸ್ತಕ್ಕೂ ಇವರಿಬ್ಬರೂ ಆತ್ಮವಾಗಿದ್ದರೂ, ಆ ಸಂದರ್ಭದಲ್ಲಿ ಇವರುಗಳಿಗಿರುವ ಮುಖ್ಯಾತಿಶಯವನ್ನು ಸೂಚಿಸುವದಕ್ಕಾಗಿ ಅರ್ಥವಾಣಿಗಳಿಗೆ ನಾರಾಯಣ ಲಕ್ಷ್ಮೀಸಹಕ್ರಮವಾಗಿ ಆತ್ಮಾ ಎಂದು ಹೇಳಲ್ಪಟ್ಟಿತು." ಎಂದು ಬಹು ಸ್ಫುಟವಾಗಿ ಸರ್ವ ಸಮಂಜಸಾರ್ಥವನ್ನು ಬರೆದಿರುತ್ತಾರೆ. ಆದುದರಿಂದ ಸ್ವರೂಪತಃ ಹೇಳುವದರಿಂದ ಈ ಪರಾಶರವಾಕ್ಯಕ್ಕೇನೂ ವಿರೋಧವಿಲ್ಲವು. ಇಲ್ಲಿ ಧರ್ಮ ಭೂತ ಜ್ಞಾನಮೂಲಕ ವ್ಯಾಪ್ತಿ ಹೇಳಲೂಕೂಡ ಸಾಧ್ಯವಿಲ್ಲವು. ಧರ್ಮಭೂತಜ್ಞಾನವು ಯಾವಾಗಲೂ ವಿಭುವು. ಅರ್ಥಮಾತ್ರವ್ಯಾಪ್ತಿ ಎಂದರೆ ಧರ್ಮಭೂತಜ್ಞಾನಕ್ಕೆ ವಿಭುತ್ವವಿಲ್ಲವಾಯಿತು. ಧರ್ಮಭೂತಜ್ಞಾನಕ್ಕೂ ಕಾಲಕ್ಕೂ ಸಹ ವಿಭುತ್ವವನ್ನು ಹೇಳುವಾಗ ಲಕ್ಷ್ಮೀರೂಪಕ್ಕೆ ಏಕೆ ಕೂಡದೋ ತಿಳಿಯದು. ಶಾಸ್ತ್ರದಲ್ಲಿ ಎಲ್ಲೂ ಕಂಠೋಕ್ತವಾಗಿ ವಿಭುತ್ವವನ್ನು ನಿಷೇಧಿಸಲಿಲ್ಲವು. ವಿಭುತ್ವವನ್ನು ಹೇಳುವ ಪ್ರಮಾಣಗಳೇನೋ ಉಂಟು. ಆದುದರಿಂದ ಪ್ರಮಾಣಶರಣರಿಗೆ ಪ್ರಮಾಣ ಮುಖ್ಯವು; ವಾದಗಳು ಆ ಪ್ರಮಾಣಗಳನ್ನು ದೃಢಪಡಿಸತಕ್ಕವು. ವಾದಗಳಿಂದ ಪ್ರಮಾಣಗಳನ್ನು ದೂರೀಕೃತವಾಡುವದು ನ್ಯಾಯವಲ್ಲವು.

ಇದೂ ಅಲ್ಲದೆ, ವಿಭೂತಿಶಬ್ದಕ್ಕೆ ಶ್ರೀ ಭಾಷ್ಯಕಾರರು **"ವಿಭೂತಿತ್ವಂನಾಮನಿಯಾಮ್ಯತ್ವಂ"** ಎಂದು ಶ್ರೀ ಗೀತಾಭಾಷ್ಯದಲ್ಲಿ

ನಿಯಾಮ್ಯವರ್ಗವೆಂದು ವ್ಯಾಖ್ಯಾನಬರೆದಿರುತ್ತಾರೆ. ಲೋಕದ ಅರ್ಧ ಭಾಗವು ಸರ್ವೇಶ್ವರನ ನಿಯಾಮ್ಯವರ್ಗವು, ಇನ್ನು ಅರ್ಧಭಾಗವು ಲಕ್ಷ್ಮಿಯ ನಿ ಯಾ ಮ್ಯ ವ ರ್ಗ ವೂ ಎಂದು ಅರ್ಥ ಹೇಳಬಹುದೇ? ಸರ್ವೇಶ್ವರನ ಅಪರಿಚ್ಛಿನ್ನತ್ವಕ್ಕೆ ನ್ಯೂನತೆಯುಂಟಾಗುವದಿಲ್ಲವೇ ? ಆದುದರಿಂದ ಈಶ್ಲೋಕದಭಿಪ್ರಾಯವು ಇಬ್ಬರೂ ಎಲ್ಲಾದಕ್ಕೂ ಒತ್ತಾ ವೆಂದು ಭಾವಿಸಿ, ಎಲ್ಲವೂ ಇವರುಗಳ ನಿಯಾಮ್ಯವರ್ಗಕ್ಕೆ ಸೇರಿದವು ಗಳೆಂದು ಹೇಳಿ, ಅವುಗಳಲ್ಲಿ ಕೆಲವುಗಳು ವಿಷ್ಣುವಿಗೆ ಅಭಿಮಾನವಾದ ವುಗಳು, ಇನ್ನು ಕೆಲವುಗಳು ಲಕ್ಷ್ಮಿಗೆ ಅಭಿಮಾನವಾದವುಗಳು ಎಂದು ಕಾರ್ಯವಿಭಾಗದಹಾಗೆ ಅರ್ಥವಾಡುವದು ಸರ್ವ ಸಮಂಜಸ ವಾದುದು. ಹಾಗೆಯೇ ಗೀತೆಯಲ್ಲೂ **“ ಅಕ್ಷರಾಣಾಂ ಅಕಾರೋ ಸ್ಮಿದ್ವಂದಸ್ಸಾಮಾಸಕಸ್ಯಚ ”** ಎಂಬಿವೇಮೊದಲಾದ ವಿಭೂತಿ ವಿಸ್ತಾ ರ ಸಂದರ್ಭದಲ್ಲಿ ಶ್ರೀ ಕೃಷ್ಣನೇ ಹೇಳಿಕೊಂಡಿರುತ್ತಾನೆ. ಯಾವಾಗ ಆತ್ಮತ್ವ ನಿಯಾಮ್ಯತ್ವಾದಿಗಳು ಏರ್ಪಟ್ಟವೋ, ಆಗ ಈಶ್ವರತ್ವವೂ ಸ್ವರೂಪತಃ ನಿತ್ಯಯೋಗವೂ ಸ್ಥಾಪಿತವಾದವು.

ಆದುದರಿಂದ ಶ್ರೀ ಪರಾಶರ ಮಹರ್ಷಿಯು, ತಮ್ಮ ಶಿಷ್ಯರ ಪ್ರ ಶ್ನೆಗೆ ಎಷ್ಟುಮಾತ್ರ ಉತ್ತರ ಹೇಳಬೇಕೋ ಅಷ್ಟುಮಾತ್ರವೇ ಹೇಳಿ ಬಿಟ್ಟರೆ, ರೂಪತಃ ಮಾತ್ರವೇ ನಿತ್ಯಯೋಗವು ಎಂದು ಎಲ್ಲಿ ತಪ್ಪಾಭಿ ಪ್ರಾಯವುಳ್ಳವರಾಗುವರೋ ಎಂದು ಶಂಕಿಸಿ, ಈ ನಿತ್ಯಯೋಗವು ಸ್ವರೂಪಾದಿ ಎಲ್ಲಾದರಲ್ಲೂ ಎಂದು ತಿಳಿಸುವದಕ್ಕಾಗಿ **“ ಸೌಮ್ಯಾಸೌ ಮ್ಯೈರ್ಜಗದ್ರೂಪೈ ಸ್ತ್ವಯೈತದ್ದೇವಿಪೂರಿತಂ”** (ವಿ.ಪು.1.9.121) ಎಂದರೆ “ ಸೌಮ್ಯವಾದ ಮತ್ತು ಕ್ರೂರವಾದ ವಿಗ್ರಹಗಳಿಂದ ಈ ಜ ಗತ್ತು ತುಂಬಿದೆ ” ಎಂದು ಹೇಳಿರುವದರಿಂದ ರೂಪತಃ ನಿತ್ಯಯೋಗ ವನ್ನು ಪುನಃ ಹೇಳಿ, ಮುಂದೆ **“ ತ್ವಂಮಾತಾಸರ್ವಲೋಕಾನಾಂ ದೇವದೇವೋಹರಿಃಪಿತಾ । ತ್ವಯೈತದ್ವಿಷ್ಣುನಾಚಾಂಬ ಜಗದ್ವ್ಯಾಪ್ತಂ ಚರಾಚರಂ** ಎಂಬುವದರಿಂದ ಸ್ವರೂಪತಃ ನಿತ್ಯಯೋಗವನ್ನು ಪುನಃ ಹೇಳಿ, **“ ಯಜ್ಞವಿದ್ಯಾ ಮಹಾವಿದ್ಯಾ ಗುಹ್ಯವಿದ್ಯಾಚ ಶೋಭನೇ । ಆತ್ಮವಿದ್ಯಾಚದೇವಿತ್ವಂ ವಿಮುಕ್ತಿಫಲದಾಯಿನೀ ” “ ಫನೈಶ್ವರ್ಯೈಶ್ಚಯುಜ್ಯಂತೇ ”** ಇತ್ಯಾದಿಗಳಿಂದ ಉಪಾಯೋಪೇ

ಯ ದೆಶೆಗಳಲ್ಲೂ ನಿತ್ಯಯೋಗ ಉಂಟೆಂಬ **ಮತುಪ್** ತಬ್ದಾರ್ಥ ಸ್ವಾರಸ್ಯವನ್ನು ಉಪದೇಶಿಸಿ, ಹೀಗೆ ಸರ್ವವಿಷಯದಲ್ಲೂ " ಮುನಿ ವರರಾದ " ಶ್ರೀ ಮಹರ್ಷಿಯು ನಿತ್ಯಯೋಗವನ್ನು ಸ್ಥಾಪಿಸಿರುತ್ತಾ ರೆ. ಈ ವಿಷ್ಣುಪುರಾಣ ವಾಕ್ಯೈಯನ್ನು ಪ್ರಚುರಗೊಳಿಸುವವಕ್ಕಾ ಗಿಯೇ, ಶ್ರೀಯಾಮುನೇಯರ ಸಜ್ಜಲಾಪ್ಸುಸಾತವಾಗಿ, ಶ್ರೀ ಯತಿವ ರ್ಯರ ಭಕ್ತಿಪ್ರಭಾವದಿಂದ, ಶ್ರೀ ರಜ್ಗನಾಯಕೆಯು ವರಪ್ರಸಾವರೂಪ ವಾಗಿ ಅವತರಿಸಿದ ಶ್ರೀ ಪರಾಶರಭಟ್ಟರವರು ಬಹು ಸ್ವಾರಸ್ಯವಾಗಿ ಮಹರ್ಷಿಯ ಅಭಿಪ್ರಾಯಾನುಗುಣವಾಗಿ ಸ್ವರೂಪ ರೂಪ ಗುಣ ವಿಭ ವೈಶ್ವರ್ಯಗಳೆಲ್ಲೆಲ್ಲಾ ನಿತ್ಯಯೋಗವನ್ನು ಶ್ರೀ ಗುಣರತ್ನಕೋಶದಲ್ಲಿ ಉಪಪಾದಿಸಿರುತ್ತಾರೆ. ಹಾಗೆ ಉಪಪಾದಿಸಿದುವರಿಂದಲೇ ಶ್ರೀ ಪರಾ ಶರರೆಂಬ ನಾಮಧೇಯವು ಇವರಲ್ಲಿ ಸಾರ್ಥಕ್ಯವನ್ನು ಪೊಂದಿತು. ಶ್ರೀ ಪರಾಶರಭಟ್ಟರವರು **" ಸ್ವರೂಪಂ ಸ್ವಾತಂತ್ರ್ಯಂ "** ಇತ್ಯಾದಿ ಶ್ಲೋಕಗಳಮೂಲಕ, ಸ್ವರೂಪಾದಿಗಳಲ್ಲಿ ನಿತ್ಯಯೋಗ ಉಂಟೆಂದು ಸ್ಥಾಪಿಸಿರುತ್ತಾರೆಂದು ಶ್ರೀ ನಯನಾರಾಚ್ಚಾ ಪಿಳ್ಳೈಯವರೇ ಅವರ ಪೂರ್ವಪಕ್ಷೋಪನ್ಯಾಸದಲ್ಲಿ ಒಪ್ಪಿಕೊಂಡಿರುತ್ತಾರೆ.

ಹೀಗೆ ರೂಪತಃ ಮಾತ್ರವೇ ನಿತ್ಯಯೋಗ ಉಂಟೆಂದು ಹೇಳು ವವರ ಆಶಯವು, ಲಕ್ಷ್ಮಿಯು ಸರ್ವೇಶ್ವರನಿಗೆ ಅಧೀನಳಂದೂ, ಅಚಿತ್ತು ಜೀವಾತ್ಮರುಗಳಿಗಿಂತ ಅತಿಶಯವಾವವಳೆಂದೂ, ಹೇಳಬೇ ಕೆಂಬದಾಗಿ ತೋರಿಬರುತ್ತದೆ. ಈ ವಿಷಯದಲ್ಲಿ ಎರಡು ಪಂಗಡದವ ರಿಗೂ ಭಿನ್ನಾಭಿಪ್ರಾಯಗಳಿಲ್ಲವು. ಸ್ವಾಮಿಯ ಸ್ವರೂಪ ರೂಪಾದಿಗ ಳಿಗೂ ಲಕ್ಷ್ಮಿಯ ಸ್ವರೂಪ ರೂಪಾದಿಗಳಿಗೂ ಆನುರೂಪ್ಯವನ್ನು ನಮ್ಮ ಆಚಾರ್ಯವರ್ಗಕ್ಕೆ ಸೇರಿದ ಯಾಮುನಾರ್ಯರೂ, ಶ್ರೀ ಯತಿವ ರ್ಯರೂ, ಶ್ರೀ ಪರಾಶರಭಟ್ಟರೂ ಸಹ ಹೇಳಿರುವದರಿಂದ, ಅದೇ ಪರ ಮಗ್ರಾಹ್ಯವಾದ ಸಿದ್ಧಾನ್ತವು.

6. ಹೀಗೆ **ಗಾಢೋಪ ಗೂಢಾನಿ** ಎಂಬುವದನ್ನು ಸ್ವರೂಪ ಕ್ಕೂ ಕೂಡ ಅನ್ವಯಿಸಿಬಿಟ್ಟರೆ, ಅಂತರ್ವ್ಯಾಪ್ತಿ, ಬಹಿರ್ವ್ಯಾಪ್ತಿ, ಪರಸ್ಪರವ್ಯಾಪ್ತಿಗಳನ್ನು ಹೀಗೆ ಇಬ್ಬರಾದ ಈಶ್ವರೀಶ್ವರರಿಗೆ ಹೇಳಲು

ಸಾಧ್ಯವೇ? ಹೀಗೆ ಎಲ್ಲಾದರೂ ಉಂಟೋ ಎಂಬ ಶಂಕಾ ಬಾಧಿಸಬಹುದು. ತನ್ನಿವಾರಣಾರ್ಥವಾಗಿ ಅಂತಹ ದೃಷ್ಟಾಂತ ಬಂದನ್ನು ಪ್ರತ್ಯಕ್ಷದಲ್ಲೇ ಕಾಣಬಹುದಾಗಿರುವಲ್ಲಿ, ಅಂತಹ ದೃಷ್ಟಾಂತಗಳನ್ನುಂಟು ಮಾಡುವವರಿಗೆ ಆಶಕ್ತಿಯು ಇಲ್ಲವೇ ಎಂಬುದನ್ನು ವಾಚಕರೇ ಯೋಚಿಸಬಹುದು. ಸಮುದ್ರದ ನೀರಿನಲ್ಲಿ ಉಪ್ಪು ಕರಗಿ ಸಮುದ್ರವನ್ನೆಲ್ಲಾ ವ್ಯಾಪಿಸಿರುತ್ತದೆ. ಸಮುದ್ರದ ಯಾವಭಾಗದ ಒಂದುಕಣ ನೀರನ್ನು ತೆಗೆದು ಪರೀಕ್ಷಿಸಿದರೂ ಉಪ್ಪಿರುವ ಅಂಶವನ್ನು ಕಂಡು ಹಿಡಿಯಬಹುದು. ಉಪ್ಪಿನಲ್ಲಿ ಎರಡು ಭಾಗವಾಗಿ ಪ್ರತ್ಯೇಕ ಸ್ವರೂಪ ಉಳ್ಳವುಗಳಾಗಿ ಪರಸ್ಪರ ವ್ಯಾಪ್ತಿಯಿರುವ ಒಂದು ಲೋಹವೂ ಒಂದು ಅಲೋಹವೂ ಸೇರಿಕೊಂಡಿವೆ. ಇವೆರಡೂ ಸಮುದ್ರದ ಸಮಸ್ತ ನೀರನ್ನೂ ವ್ಯಾಪಿಸಿರುತ್ತವೆ. ಹಾಗೆಯೇ ಈ ಸಮುದ್ರಕ್ಕೆ ಬದಲಾಗಿ ಸಮಸ್ತ ವಿಶ್ವವನ್ನೂ ಊಹಿಸಿಕೊಂಡು ಉಪ್ಪಿನಲ್ಲಿ ಪರಸ್ಪರ ವ್ಯಾಪ್ತಿಯುಳ್ಳ ಲೋಹಾಲೋಹಗಳಿಗೆ ಬದಲಾಗಿ ಲಕ್ಷ್ಮೀನಾರಾಯಣರೆಂದು ಊಹಿಸಿದರೆ, ಈ ಮೇಲಿನ ಶಂಕಾ ದೂರೀಕೃತವಾಗುತ್ತದೆ. ಅಣುವಿನ ಅಂತರ್ವ್ಯಾಪ್ತಿಯಲ್ಲೂ, ವಿಭುವಸ್ತುಗಳ ಬಹಿರ್ವ್ಯಾಪ್ತಿ ವಿಷಯದಲ್ಲೂ ಕೂಡ ಏನೊಂದೂ ತೊಂದರೆ ತೋರುವದಿಲ್ಲವು. ಇವರಿಬ್ಬರೂ ಅಘಟಿತಘಟನಾಶಕ್ತಿಯುಳ್ಳವರಾದರೂ, ಅಣುವಿನೊಳಗೆ ಅಂತರ್ವ್ಯಾಪ್ತಿಯನ್ನು ಹೇಳಬೇಕಾದ, ವಿಭುವಸ್ತುವಿಗೆ ಬಹಿರ್ವ್ಯಾಪ್ತಿ ಹೇಳಬೇಕಾದ, ಅವಶ್ಯಕತೆ ಇಲ್ಲದುದರಿಂದ, ಸರ್ವವೂ ಸಮಂಜಸವು.

7. ಆದರೆ ಹೀಗೆ ಈಶ್ವರೀಶ್ವರರು ಇಬ್ಬರೆಂದು ಹೇಳುವದು, ಅನೇಕ ಪಾಶ್ಚಾತ್ಯ, ಮತ್ತು ಇಲ್ಲಿನ ಸಿದ್ಧಾಂತಿಗಳು ಹೇಳುವ ಏಕೇಶ್ವರವಾವಕ್ಕೆ ವಿರುದ್ಧವಾಗುತ್ತದಲ್ಲಾ ಎಂಬ ಶಂಕಾ ಕೂಡ ಕೆಲವರ ಮನಸ್ಸನ್ನು ಬಾಧಿಸಬಹುದು. **ಲೋಕೇವೇದೇಚ** ಎಂಬ ಪೇಳಿಕೆಯ ಪ್ರಕಾರ, ವೇದದಲ್ಲಿ ಹೇಳಿರುವದನ್ನೆಲ್ಲಾ ಅನೇಕ ಸಂದರ್ಭಗಳಲ್ಲಿ ಲೋಕದೃಷ್ಟಾಂತದಿಂದ ಸಾಧಿಸಬಹುದು. ಉಪನಿಷತ್ತುಗಳು ತಮ್ಮ ಉಪದೇಶಗಳನ್ನು ಲೋಕದೃಷ್ಟಾಂತದಿಂದ ಒಂದಲ್ಲ ಕಡೆಯಲ್ಲಿ ಸಮರ್ಥಿಸಿರುತ್ತವೆ; ಮೃತ್ತು, ಸ್ವರ್ಣ, ಅಯಸ್ಕಾಂತಪಿಂಡ ದೃಷ್ಟಾಂತಗಳ ಮೂಲಕ ಜಗತ್ತಿಗೆ ಉಪಾದಾನ ಕಾರಣವನ್ನು ಸಾಧಿಸಿರುತ್ತವೆ; ಊರ್ಣ

ನಾಭಿ ಎಂದರೆ ಜಾಡರ ಪುಳದ ದೃಷ್ಟಾಂತದಿಂದ ಸರ್ವೇಶ್ವರನಿಗೆ ನಿಮಿತ್ತ, ಸಹಕಾರಿ, ಉಪಾದಾನ ಕಾರಣಗಳನ್ನು ಸಾಧಿಸಿರುತ್ತವೆ. ವ್ಯಾಸಮಹರ್ಷಿಯು, ಅನುಮಾನತರ್ಕದಿಂದಲೂ ಕೂಡ ಸಾಧಿಸಬಹುದೆಂದು,

"ಅರ್ಥಂ ಧರ್ಮೋಪದೇಶಂಚ ವೇದಶಾಸ್ತ್ರಾ ವಿರೋಧಿನಾ
ಯಸ್ತರ್ಕೇಣಾನುಸಂಧತ್ತೇ ಸಧರ್ಮಂ ವೇದನೇತರಃ"

ಎಂದು ಹೇಳಿರುತ್ತಾರೆ. ವೇದಶಾಸ್ತ್ರಗಳನ್ನು ಪ್ರಮಾಣವಾಗಿ ನಂಬಿ ಬಿಟ್ಟು, ಅವುಗಳಿಗೆ ವಿರೋಧವಿಲ್ಲದ ಹಾಗೆ ಯಾವನು ತರ್ಕಗಳಮೂಲಕ ಅನುಸಂಧಾನವಾಡುವನೋ, ಅವನೀಗ ಶಾಸ್ತ್ರಜ್ಞಾನು, ಅವನ ತರ್ಕವೀಗ ಸತ್ತರ್ಕವು; ಅನ್ಯಥಾ, ಪ್ರಮಾಣಗಳನ್ನು ದೂರೀಕರಿಸಿ ವಾಡುವ ವಾವವು ಕುತರ್ಕವೆಂಬ ಭಾವವು.

ಈಗ ಹೀಗೆ ಈಶ್ವರೀಶ್ವರರಾಗಿ, ಇಬ್ಬರೆಂಬುವದು ವಿಕೇಶ್ವರ ಭಾವಕ್ಕೆ ವಿರೋಧವಲ್ಲವೇ ಎಂಬ ಶಂಕಾವಿಗೆ ಸಮಾಧಾನವನ್ನು ಅನುಮಾನರೂಪತರ್ಕದಿಂದಲೂ ಪ್ರತ್ಯಕ್ಷದಿಂದಲೂ ಹೇಳುವೆವು:—

1. ಈ ಲೀಲಾವಿಭೂತಿಯು ಲಕ್ಷ್ಮೀನಾರಾಯಣರಿಗೆ ತುಂಬಾ ಪ್ರಿಯತಮವಾಗಿಯೂ, ಸರ್ವವೂ ಅವರಿಗೆ ಶರೀರವಾಗಿಯೂ ಸರ್ವಕ್ಕೂ ಅವರುಗಳು ಆತ್ಮಾವಾಗಿಯೂ ಇದ್ದು, ಅವರುಗಳಿಗೆ ಪರಮ ಭಕ್ತರಾದವರಲ್ಲಿ **"ಪ್ರಿಯೋಹಿ ಜ್ಞಾನಿನೋತ್ಯರ್ಥಂ"** ಎಂದೂ, **"ಮಮಪ್ರಾಣಾಹಿ ಪಾಂಡವಾಃ"** ಎಂದೂ ಹೇಳಿರುವಹಾಗೆ ಅತೀವ ಸೌಹೃದವು ಅನುರಾಗವೂ ಇದ್ದಪಕ್ಷದಲ್ಲಿ, ಇವರಿಬ್ಬರೂ, ಮಹಾಜ್ಞಾನಿಗಳಾಗಿಯೂ, ಯೋಗಿಗಳಾಗಿಯೂ ಇರುವ ಪರಾಶರ ಶುಕ ಶಾನಕಾದಿಗಳಿಗೆ ತಮ್ಮ ಸ್ವರೂಪವನ್ನು ವ್ಯಕ್ತಪಡಿಸವೇ ಹೋಗಲಾರರಷ್ಟೇ. **"ವ್ಯಾಸಾಯ ವಿಷ್ಣುರೂಪಾಯ"** ಎಂದು ಪ್ರಸಿದ್ಧಿಯನ್ನು ಹೊಂದಿದ ವ್ಯಾಸಮಹರ್ಷಿಯೋಕ್ತಿಯು, **"ಏಕಾಕೀವಿದ್ಯಯಾ ಸಾರ್ಧಂ"** ಎಂದರೆ ಲಕ್ಷ್ಮೀಯೊಂದಿಗೆ ಬಬ್ಬನು ಎಂದು ಹೇಳಿರುತ್ತದೆ. ಆದುವರಿಂದ ಐಕ್ಯಭಾವಕ್ಕೇನೂ ವಿರೋಧವಿಲ್ಲವು. ವಿಶೇಷಣ ವಿಶೇಷ್ಯದೊಂದಿಗೆ ಐಕ್ಯವು. ಶ್ರೀ ವಾಲ್ಮೀಕಿಮಹರ್ಷಿಯು **ರಾಮಸುಗ್ರೀ**

ವಯೋರೈಕ್ಯಂ ಎಂದು ಹೇಳಿದಹಾಗೆಂತ ಊಹಿಸಬಹುದು. ಹೀಗೆ ಅನುಮಾನದಿಂದ ನಿರ್ಧರಿಸಬಹುದು.

2. ಇನ್ನೊಂದುವಿಧವಾಗಿದ್ದೂ ಅನುಮಾನ ಮತ್ತು ಪ್ರತ್ಯಕ್ಷ ಪ್ರಮಾಣಗಳ ಸಹಾಯದಿಂದಲೂ ನಿರ್ಧರಿಸಬಹುದು. ಲಕ್ಷ್ಮೀನಾರಾಯಣರು ಈ ಲೀಲಾವಿಭೂತಿಯಲ್ಲಿರುವವರಿಗೆ ಗೋಚರವಾಗದೇ ಇದ್ದುಕೊಂಡಿದ್ದರೂ, ಜ್ಞಾನಾಧಿಕಾರಿಗಳು ತಮ್ಮಗಳ ಮಹಾತ್ಮ್ಯಾಯನ್ನು ತಿಳಿಯಬೇಕೆಂಬ ಕುತೂಹಲಯುಕ್ತರಾಗಿರುವಾಗ, ಈ ವಿಚಿತ್ರ ವಿವಿಧ ಜಗತ್ಸೃಷ್ಟಿಯಲ್ಲಿ ಈ ಲೋಕದಂಪತಿಗಳು ತಮ್ಮ ಸ್ವರೂಪವನ್ನು ವ್ಯಕ್ತಪಡಿಸದೇ ಇರಲಾರರಷ್ಟೇ. ಹಾಗೆ ವ್ಯಕ್ತಪಡಿಸದೇ ಇದ್ದಲ್ಲಿ ಅವರುಗಳಿಗೆ ವಯೋದಾರ್ಯಭಾವಗಳು ಸ್ಫುಲು ವಾರ್ಗವಿಲ್ಲದೇ ಹೋಗುತ್ತವೆ. ಈ ಲೋಕದಂಪತಿಗಳ ನಿರ್ಹೇತುಕಕೃಪೆಯು, ನಮಗೆ ಕರಣ ಕಳೇಬರಗಳನ್ನೂ ಕೊಟ್ಟು, ಸಚ್ಛಾಸ್ತ್ರಗಳನ್ನೂ ದಯಪಾಲಿಸಿ ಜ್ಞಾನನಿಧಿಗಳು ಅವುಗಳನ್ನು ಉಪದೇಶಿಸುವಹಾಗೆಲ್ಲಾ ಮಾಡಿರುವಾಗ, ತಮ್ಮಗಳ ಸ್ವರೂಪವನ್ನು ಸ್ವಲ್ಪಮಟ್ಟಿಗಾದರೂ ಸೃಷ್ಟಿಕ್ರಮದಲ್ಲಿ ವ್ಯಕ್ತಪಡಿಸಲಾರರೇ ? ಹಾಗೆ ವ್ಯಕ್ತಪಡಿಸುತ್ತಾರೆ ಎಂದು ನಂಬಿದರೆ ನಾವು ಈ ಜಗತ್ತಿನಲ್ಲಿ ತೋರುವ ಏಕತ್ವದಲ್ಲೆಲ್ಲಾ ದ್ವಿತ್ವವು ಲೋಕದಂಪತಿಗಳಲ್ಲಿರುವಹಾಗೆ ತೋರಿಬರುತ್ತದೆ. ಮನುಷ್ಯಶಬ್ದಕ್ಕೆ ಪುರುಷನೊಬ್ಬನೇಯಾಗಲಿ ಸ್ತ್ರೀಯೊಬ್ಬಳೇಯಾಗಲಿ ಉದ್ದೇಶವಲ್ಲವಷ್ಟೇ. ಸ್ತ್ರೀಪುರುಷ ಯುಗ್ಮವೇ ಮನುಷ್ಯಶಬ್ದಕ್ಕೆ ಅಭಿಪ್ರಾಯವು. ಪ್ರಜಾವೃದ್ಧಿಯು ಇಬ್ಬರಿಂದಲೇ. ಆದರೆ ಇಲ್ಲಿನ ಯುಗ್ಮದಲ್ಲಿ, ಲಕ್ಷ್ಮಿಯಲ್ಲಿ ತೋರುವ ಅಪೃಥಕ್ಸಿದ್ಧವಿಶೇಷಣ ಭಾವಮಾತ್ರವಿಲ್ಲವು. ಹಾಗೆಯೇ ಇತರ ಪ್ರಾಣಿವರ್ಗದಲ್ಲೂ ಸ್ತ್ರೀಪುರುಷರೂಪದಾಂಪತ್ಯಭಾವವುಂಟು. ಇನ್ನೂ ಕೆಲವು ಪ್ರಾಣಿಗಳಲ್ಲಿ ಅಪೃಥಕ್ಸಿದ್ಧಭಾವದಹಾಗೆ ಸ್ತ್ರೀಪುರುಷವ್ಯಕ್ತಿಗಳೂ ಒಟ್ಟಿಗಿರುವದುಂಟು ; ಅಂಥಾವುಗಳಲ್ಲಿ ಎರಡುವಿಧ ಚೇತನಗಳೂ ಒಟ್ಟಿಗಿವೆ ಎಂದು ಊಹಿಸಬಹುದು. ಒಬ್ಬ ಚೇತನನ ಶರೀರದಲ್ಲೇ ಅನೇಕವಿಧ ಚೇತನಗಳೂ ಮತ್ತೂ ಇತರ ಅಚೆತ್ತುಗಳಲ್ಲೂ ಅನೇಕ ಚೇತನಗಳೂ ಸೇರಿಕೊಂಡಿರುವಾಗ ಇಂತಹ ಪ್ರಾಣಿಗಳಲ್ಲಿ ಸ್ತ್ರೀಪುಂಯುಗ್ಮವು ಇದೆ

ಎಂದು ಭಾವಿಸಲೇನೂ ಅಭ್ಯಂತರವಿರುವದಿಲ್ಲವು. ಹೀಗೆಯೇ ಸಸ್ಯ ವರ್ಗದಲ್ಲೂ ಸ್ತ್ರೀಪುಂಭಾಗಗಳಿವೆ ಎಂದೂ, ಅವುಗಳ ಸಂಮೇಳನದಿಂದಲೇ ಕಾಯಿ, ಫಲ, ಬೀಜಗಳು ಉಂಟಾಗುತ್ತವೆಂದು ವನಸ್ಪತಿ ಶಾಸ್ತ್ರಜ್ಞರಿಗೆ ತಿಳಿದ ವಿಷಯವು. ಹಾಗೆಯೇ ಸರ್ವೇಶ್ವರನು ನಮ್ಮುಗಳ ಉಪಯೋಗಕ್ಕಾಗಿ ದಯಪಾಲಿಸಿರುವ ಶಕ್ತಿಗಳಲ್ಲೂಕೂಡ ಈ ಮಿಥುನ ರೂಪಾವಸ್ಥೆಯೂ ಉಂಟು. ವಿದ್ಯುಚ್ಛಕ್ತಿಯಲ್ಲೂ, ಅಯಸ್ಕಾಂತ ಶಕ್ತಿಯಲ್ಲೂ ಎರಡುವಿಧವಾದವುಗಳುಂಟೆಂಬುವದು ಭೌತಿಕ ಶಾಸ್ತ್ರಜ್ಞರಿಗೆ ವೇದ್ಯವು. ಹಾಗೆಯೇ ಉಪ್ಪುಗಳಲ್ಲೂ ಎರಡುಭಾಗಗಳುಂಟೆಂದು ರಸಾಯನ ಶಾಸ್ತ್ರಜ್ಞರು ಬಲ್ಲರು. ಆದುದರಿಂದ ತುಂಬಾ ಜ್ಞಾನಿಗಳಾದ ಶ್ರೀರಂಗ ರಾಮಾನುಜಸ್ವಾಮಿಗಳವರು ತಾವು ಬರದ ಛಾಂದೋಗ್ಯೋಪನಿಷದ್ಭಾಷ್ಯದಲ್ಲಿ **ಮಿಥುನಂರೂಪಂಜಗತ್** ಜಗತ್ತು ಮಿಥುನರೂಪವಾದುದು ಎಂದು ಅಪ್ಪಣೆ ಕೊಡಿಸಿರುತ್ತಾರೆ. ಕಾರಣಭೂತರಾದ ಲಕ್ಷ್ಮೀನಾರಾಯಣರು **ಮಿಥುನರೂಪ** ದಲ್ಲಿರುವದರಿಂದ, ಅವರ ಕಾರ್ಯರೂಪವಾದ ಈ ಜಗತ್ತೂ ಸಹ **ಮಿಥುನ ರೂಪ** ದಲ್ಲಿರುತ್ತದೆ. ಹೀಗೆ ಇವರುಗಳು ತಮ್ಮ ಸ್ವರೂಪವನ್ನು ಜಗತ್ತಿನಲ್ಲಿ ವ್ಯಕ್ತಪಡಿಸಿರುತ್ತಾರೆ. ಇದರಿಂದ ಶ್ರೀ ಪರಾಶರರ **" ಪುನ್ನಾಮಾಭಗವಾನ್ಹರಿಃ । ಸ್ತ್ರೀನಾಮ್ನೀಶ್ರೀಶ್ಚವಿಜ್ಞೇಯಾ ನಾನಯೋರ್ವಿದ್ಯತೇಪರಂ "** ಎಂಬ ಅಮೋಘೋಕ್ತಿಯು ಇದರಿಂದ ಸರ್ವಸಾರ್ಥಕ್ಯ ಉಳ್ಳದ್ದೆಂದು ತೋರಿಬರುತ್ತದೆ.

ಹೀಗೆ ಏಕೇಶ್ವರವಾದದಲ್ಲಿ ಮುಮತೆಯುಳ್ಳವರೂ ಕೂಡ, **ಈ** ಮೇಲೆ ಉಪಪಾದಿಸಿದ ರೀತಿಯಲ್ಲಿ ಅನುಮಾನ ಪ್ರತ್ಯಕ್ಷಗಳ **ಮೂಲಕ**, ತಮ್ಮ ಶಂಕಾವಿಗೆ ಸಮಾಧಾನವನ್ನು ಪಡೆಯಬಹುದು.

ಆದುದರಿಂದ ನಮ್ಮಾಳ್ವಾರ್, ಯಾಮುನೇಯರು, ಯತಿವರ್ಯರು, ಪರಾಶರಭಟ್ಟರು ಮೊದಲಾದ ಆಳ್ವಾರಾಚಾರ್ಯರುಗಳ ಅಭಿಮತಾನುಸಾರವಾಗಿ ಲಕ್ಷ್ಮಿಗೆ ತನ್ನ ಪತಿಯೊಂದಿಗೆ ಸ್ವರೂಪದಲ್ಲೂ ಕೂಡ ನಿತ್ಯಯೋಗವನ್ನು ಈ ಶ್ಲೋಕರೀತ್ಯಾ ಹೇಳುವದೇ ಸರ್ವಸಮಂಜಸವು. ಶ್ರೀಯಃಪತಿಯ ಸಙ್ಕಲ್ಪದಿಂದವತರಿಸಿದ ಇಂತಹ ಮಹನೀ

ಯರ ಸಿದ್ಧಾಂತಕ್ಕೆ ವಿರೋಧವಾಗಿ ಪೇಳ್ವುವದು ಯುಕ್ತವಾಗಿ ತೋರುವದಿಲ್ಲವ್ರ.

ಇಂತಹ ನಿತ್ಯಯೋಗವ್ರುಳ್ಳ ಲಕ್ಷ್ಮೀನಾರಾಯಣರೇ ಪರತತ್ವವ್ರು. ಅವರುಗಳೇ ನಮಗೆ ಉಪಾಯೋಪೇಯವ್ರು. ಅವರಿಬ್ಬರ ಚರಣಾರವಿಂದಗಳಲ್ಲೇ ನಮ್ಮ ಆತ್ಮಹವಿಸ್ಸನ್ನು ಸಮರ್ಪಣೆ ಮಾಡತಕ್ಕದ್ದು. ಹಾಗೆ ಕೃತಕೃತ್ಯನಾದವನು, ಅವರಿಬ್ಬರಿಗೂ ತದೀಯರಿಗೂ ಸಹ ಸರ್ವವಿಧ ಕೈಙ್ಕರ್ಯಗಳನ್ನೆಸಗತಕ್ಕದ್ದು.

ಹೀಗೆ, ಪ್ರಥಮಶ್ಲೋಕದಿಂದ ಲಕ್ಷ್ಮೀಯ ಸ್ವರೂಪರೂಪ ವಿಭವೈಶ್ವರ್ಯಾದಿಗಳೂ ದಿವ್ಯವ್ಯಾಪಾರಗಳೂ ಸರ್ವೋತ್ಕೃಷ್ಟವೆಂಬುಪಪಾದಿಸಿ, ದ್ವಿತೀಯಶ್ಲೋಕದಲ್ಲಿ ಆಕೆಯ ಮಹಿಮೆಯು ಇಷ್ಟೆಂದು ಪೇಳಲಸಾಧ್ಯವೆಂದು ಹೇಳಿ, ಆಕೆಯು ಉಭಯವಿಭೂತಿಗೂ ಈಶ್ವರೀಸಿಯನ್ನಾ ಎಂದು ಸಮರ್ಥನೆಮಾಡಿ, ಆಕೆಯ ಸರ್ವಶಕ್ತತೆಯನ್ನೂ ದಯೆಯನ್ನೂ ಕೊಂಡಾಡಿ, ತೃತೀಯಶ್ಲೋಕದಲ್ಲಿ ಅವಳಿಗೆ ಉಪಾಯನವಲ್ಲೂಕೂಡ ಅನ್ವಯ ಉಂಟೆಂದು ಉಪಪಾದಿಸಿ, ಇಹಲೋಕದ ಐಶ್ವರ್ಯವನ್ನೂ ಸ್ವರ್ಗಾದಿಭೋಗಗಳನ್ನೂ ಕೈವಲ್ಯವನ್ನೂ ಮೋಕ್ಷಾನಂದವನ್ನೂ ಕೊಡುವ ಶಕ್ತಿಯು ಆಕೆಗೆ ಉಂಟೆಂದು ಸ್ಥಾಪಿಸಿ, ಈ ಚತುರ್ಥಶ್ಲೋಕದಲ್ಲಿ ಹಿಂದಿನ ಮೂರುಶ್ಲೋಕಗಳಲ್ಲಿ ಹೇಳಲ್ಪಟ್ಟ ಮಹಿಮೆಗಳಾದ, ಜಗತ್ಸೃಷ್ಟಿ ಸ್ಥಿತಿ ರಕ್ಷಣ ಸಂಯವಾದಿಗಳೂ, ತದನುಪ್ರವೇಶವೂ, ವ್ಯಾಪ್ತಿಯೂ, ನಿಯಮಿಸೋಣವೂ ಎಂದರೆ ಉಭಯವಿಭೂತಿಯನ್ನು ಹೊಂದಿರುವದೂ, ಚೇತನರಿಗೆ ಉಪಾಯೋಪೇಯಭಾವದಲ್ಲಿ ಸರ್ವಶ್ರೇಯಸ್ಸನ್ನುಂಟುಮಾಡುವದೂ, ಇವುಗಳೆಲ್ಲಾ ಲಕ್ಷ್ಮಿಯು ತನ್ನ ಪತಿಯೊಂದಿಗೆ ನಿತ್ಯಯೋಗವ್ರುಳ್ಳವಳೆಂದು ಉಪದೇಶಿಸಿ, **“ಸ್ವಾದಯನ್ನಿಹ ಸರ್ವೇಷಾಂತ್ರಯನ್ತಾರ್ಥಂ ಸುದುರ್ಲ್ಲಭಂ”** ಎಂದು ಹೇಳಿರುವ ಹಾಗೆ ಕಷ್ಟತರವಾದ ಶಾಸ್ತ್ರಾರ್ಥಗಳನ್ನು ಬಹು ಸುಲಭವಾಗಿಯೂ ಸಂಗ್ರಹವಾಗಿಯೂ ರುಚಿಸುವಹಾಗೆಯೂ ಅನುಗ್ರಹಿಸಿ, ಆಳವಂದಾರರೆಂಬ ತಮ್ಮ ನಾಮಧೇಯವನ್ನು ಸಾರ್ಥಕ್ಯವನ್ನು ಹೊಂದುವ ಹಾಗೆ ಮಾಡಿರುತ್ತಾರೆ.

ಇಂತಹ ಅವೋಧಸೊ್ತೋತ್ರವನ್ನು ನಿತ್ಯವೂ ಭಕ್ತಿಯಿಂದ ಪಠಿಸಿ, ಅವುಗಳಲ್ಲಿ ಅಡಗಿರುವ ಅರ್ಥಸ್ವಾರಸ್ಯವನ್ನೂ ಆಸ್ವಾದನೆ ಮಾಡಿ, ಲೋಕಮಾತೆಯ ಅನುಗ್ರಹಕ್ಕೆ ಸರ್ವಸಾಧ್ವಿಗಳೂ ಸಾಧು ಗಳೂ ಸಹ ಪಾತ್ರರಾಗಿ ಸರ್ವಾಭೀಷ್ಟಗಳನ್ನು ಹೊಂದಲಿ ಎಂಬುವದು **ಈ ಆಚಾರ್ಯಹೃದಯಾನ್ವೇಷಣೇ** ಎಂಬ ಕನ್ನಡ ಅರ್ಥತಾತ್ಪರ್ಯ ಗಳನ್ನು ಶ್ರೀ ಶ್ರೀನಿವಾಸನ ಕೃಪೆಯಿಂದಲೂ, ಆಚಾರ್ಯಾನುಗ್ರಹ ದಿಂದಲೂ ರಚಿಸಿದ ತಿರುನಾರಾಯಣಪುರಂ **ಶ್ರೀವಿಜಯರಾಘವ ಶರ್ಮನ** ಪ್ರಾರ್ಥನೆಯು.

ನಮೋನಮೋ **ಯಾಮುನಾಯ** ಯಾಮುನಾಯ ನಮೋನಮಃ

ಶ್ರೀನಿವಾಸ **ಮಹಾದೇಶಿ** ಕಾಯನಮಃ

ಶ್ರೀನಿವಾಸಸ್ಸುಪ್ರೀತೋ ಭವತು, ಸಮಸ್ತಸನ್ಮಂಗಳಾನಿ

ಭವನ್ತು.

ಶುದ್ಧಾಶುದ್ಧಪತ್ರಿಕೆ.

ಪುಟ.	ಪಙ್ತಿ.	ಅಶುದ್ಧ.	ಶುದ್ಧ.
12	10	ಭಗವಪ ಸತ್ತ್ರ	ಭಗವತಸ್ತತ್ತ್ರ
13	26	ಬಂಬ	ಎಂಬ
14	14	ಕೊೋಡ	ಕೊೋಧ
21	19	ವನಸ್ಥಿತಾ	ವ್ಯವಸ್ಥಿತಾ
23	24	ಶೃತಿರಪಿ	ಶ್ರುತಿರಪಿ
24	17	ಸ್ಸರ್ವಜ್ಞೊ	ಸರ್ವಜ್ಞೊ
25	15	ಜೈಕ	ಜೈಕ
27	3	ಸಿದ	ಸಿದ್ಧ
,,	4	ವಿಭಾಗ್ಧ	ವಿಭಾಗ
28	17	ದೇಪ್ಯಾ	ದೇವ್ಯಾ
40	23	ವೈಷ್ಣ	ವೈಷ್ಣ
41	1	ಸಹ್ಯರವಾದ	ನಹ್ಯರವಾದ
45	25	ಕರುಣಿ	ಕರುಣೆ
47	2	ಅದು	ಆದೂ
55	1	ಈಗಿನ ಈ ವಿಷಯದಲ್ಲಿ	ಈ ವಿಷಯದಲ್ಲಿ ಈಗಿನ
58	6	ವಚಾನ್ಯಾಹಿತ	ನಚಾನ್ಯಾಹಿತ
61	20	ನಿವಾರಣಾರ	ನಿವಾರಣಾರ್ಥ
62	21	ಎದಡು	ಎರಡು
65	22	( )	(9)
70	6	ಅರ್ಥವ್ರ	ಅರ್ಥವು
72	4	ಅವೆಲ್ಲವೂ	ಅವೆಲ್ಲವನ್ನೂ
74	18	ಕಲ್ಯಾಣ್ಯೈಕತಾನ	ಕಲ್ಯಾಣ್ಯೈಕತಾನ
75	10	ರುವ್ರಂಚ ಯಪುಂ	ರುದ್ರಂಚ ಯವುಂ
84	15	(ಪುಟವನ್ನು)	(35ನೇ ಪುಟವನ್ನು)